

# INSTA ವಿದ್ಯಮಾನ

## A Weekly Current Affairs Initiative

KAS, FDA/SDA/PDO/ GROUP C, PSI/PC, TEACHER'S EXAMS

ಕನ್ನಡ & English

By- Nandan Sir

## November Month 2025

- Rajyotsava award
- State Film Lifetime Achievement Awards and literary awards (2019)
- HortiRoad2India
- State water commission
- Karnataka bags award for highest under-construction wind capacity
- State releases new Skill Development Policy
- SWR launches 'MUTS Sahayak' ticketing scheme
- Honnavar Port Project
- Cobra Beat' to tackle micro-level congestion
- RVCE's Lakshya rocket wins IN-SPACe's Model Rocketry Competition in U.P.
- 'Karnataka to turn its demographic strength into demographic dividend'
- Chief Minister's Kaushalya Karnataka Yojane (CMKKY)
- Bengaluru Skill Summit 2025
- Fair and Remunerative Price
- Tenth-century inscription dating to Ganga dynasty reign found on outskirts of Mysuru
- Karnataka Startup Policy 2025-30
- Resource Mobilisation Committee (RMC) report
- Krishi Mela 2025
- Domestic Workers (Social Security and Welfare) Bill, 2025
- High-powered committee formed to review functioning of prisons in State
- Karnataka records 24% drop in maternal deaths
- "Koti Vruksha Abhiyan"
- CM inaugurates Kalaloka store at KIA
- State ranks fourth in country in terms of adoption numbers
- Bengaluru Safe City Project
- National Joint Counter-IED Competition
- KEO (Knowledge-driven, Economical, Open-source)
- Digital Nagarik programme
- Mentoring Summit India 2025
- 28 blackbucks die at Belagavi zoo; infection suspected
- Ekya Vana launched
- Karnataka Private Medical Establishments (KPME) Act, 2007
- High-yield maize, sunflower, turmeric varieties unveiled at Krishi Mela 2025
- 'Promoting HEALTH in Agumbe'
- KSRTC launches Flybus service between KIA and Davangere
- Nadoja Baraguru award
- IT policy 2025-30:
- Karnataka space tech policy 2025-2030
- Mekedatu reservoir project
- Infosys Prize:
- menstrual leave policy
- Sanmitra' initiative
- Tata Transformation Prize
- Child Rights Index
- State at 10th position in Child Rights Index
- Bengaluru Tech Summit (BTS)
- spider Malenadu
- KIA becomes India's first airport to achieve Level 3 Accessibility Enhancement Accreditation
- Fishermen's Distress Relief Fund
- Two menhirs believed to be from late megalithic period found
- Karnataka Rights of Persons with Disabilities bill 2025.
- Megalithic excavations in Chamarajanagar district reveal rare burial practices, rock art

Watch Insta ವಿದ್ಯಮಾನ Video
INSTA KAS
080 69 405 206 www.insightsonindia.com

# INSTA ವಿದ್ಯಮಾನ

## WEEKLY CURRENT AFFAIRS
## NOVEMBER 4TH Week 2025

### Rajyotsava award




**News -**

- **On the occasion of the Kannada Rajyotsava celebrations on November 1,** the State government on Thursday announced its **annual Rajyotsava awards for 70 personalities for their contributions in different fields.**

**Kannada Rajyotsava Award**

- It is also **known as the Rajyotsava Prashasti.**
- **It is the second-highest civilian honor presented by the Government of Karnataka.**
- It is **awarded annually on November 1st,** which marks Kannada Rajyotsava—the **anniversary of the formation of Karnataka state in 1956** through the unification of Kannada-speaking regions
- **The award carries an amount of ₹5 lakh, a 25-gram gold medal, and a citation.**

**List of 2025 recipients**

| Sl. No. | Awardee Name | Field |
|---|---|---|
| 1 | Shri H. Siddayya, IAS (Retd.) | Administration |
| 2 | Dr. S.V. Hittalamani | Agriculture |
| 3 | Shri M.C. Rangaswamy | Agriculture |

### ರಾಜ್ಯೋತ್ಸವ ಪ್ರಶಸ್ತಿ




ಇದೀಗ ಸುದ್ದಿಯಲ್ಲಿದೆ:

- **ನವೆಂಬರ್ 1 ರಂದು ನಡೆದ ಕನ್ನಡ ರಾಜ್ಯೋತ್ಸವ** ಆಚರಣೆಯ ಸಂದರ್ಭದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ 70 ಮಹನೀಯರಿಗೆ **ರಾಜ್ಯ ಸರ್ಕಾರವು ತನ್ನ ವಾರ್ಷಿಕ ರಾಜ್ಯೋತ್ಸವ ಪ್ರಶಸ್ತಿಗಳನ್ನು** ಇತ್ತೀಚೆಗೆ ಘೋಷಿಸಿದೆ.

ಕನ್ನಡ ರಾಜ್ಯೋತ್ಸವ ಪ್ರಶಸ್ತಿಯ ಬಗ್ಗೆ:

- ಈ ಪ್ರಶಸ್ತಿಯನ್ನು ಸಾಮಾನ್ಯವಾಗಿ **'ರಾಜ್ಯೋತ್ಸವ ಪ್ರಶಸ್ತಿ'** ಎಂತಲೂ ಕರೆಯಲಾಗುತ್ತದೆ.
- ಇದು **ಕರ್ನಾಟಕ ಸರ್ಕಾರ ನೀಡುವ ಎರಡನೇ ಅತ್ಯುನ್ನತ ನಾಗರಿಕ ಗೌರವವಾಗಿದೆ.**
- ಐತಿಹಾಸಿಕ ಮಹತ್ವ: **1956 ರಲ್ಲಿ ಕನ್ನಡ ಮಾತನಾಡುವ ಪ್ರದೇಶಗಳನ್ನು ಏಕೀಕರಣಗೊಳಿಸುವ ಮೂಲಕ ಕರ್ನಾಟಕ ರಾಜ್ಯ ರಚನೆಯಾದ** ಸ್ಮರಣಾರ್ಥವಾಗಿ, ಪ್ರತಿ ವರ್ಷ ನವೆಂಬರ್ 1 ರಂದು ಅಂದರೆ 'ಕನ್ನಡ ರಾಜ್ಯೋತ್ಸವ'ದಂದು ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.
- ಈ ಪ್ರಶಸ್ತಿಯು **₹5 ಲಕ್ಷ ನಗದು ಬಹುಮಾನ, 25 ಗ್ರಾಂ ಚಿನ್ನದ ಪದಕ** ಮತ್ತು ಪ್ರಶಂಸಾ ಪತ್ರವನ್ನು ಒಳಗೊಂಡಿರುತ್ತದೆ.

**2025 ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು:**

| ಕ್ರ. ಸಂ | ಪ್ರಶಸ್ತಿ ಪುರಸ್ಕೃತರು | ಕ್ಷೇತ್ರ |
|---|---|---|
| 1 | ಶ್ರೀ ಹೆಚ್. ಸಿದ್ದಯ್ಯ ಭಾ.ಆ.ಸೇ(ನಿ) | ಆಡಳಿತ |
| 2 | ಡಾ.ಎಸ್.ವಿ.ಹಿತ್ತಲಮನಿ | ಕೃಷಿ |
| 3 | ಶ್ರೀ ಎಂ ಸಿ ರಂಗಸ್ವಾಮಿ | ಕೃಷಿ |

INSTAKAS

| | | |
|---|---|---|
| 4 | **Shri Prakash Raj** | **Cinema / Television** |
| 5 | **Smt. Vijayalakshmi Singh** | **Cinema / Television** |
| 6 | **Shri Basappa Bharamappa Choudki** | **Folklore** |
| 7 | **Shri B. Takappa Kannur** | **Folklore** |
| 8 | **Shri Sanningappa Satteppa Mushennagol** | **Folklore** |
| 9 | **Shri Hanumanthappa Marappa Chilangi** | **Folklore** |
| 10 | **Shri M. Thopanna** | **Folklore** |
| 11 | **Shri Somanna Dundappa Dhanagonda** | **Folklore** |
| 12 | **Smt. Sindhu Gujaran** | **Folklore** |
| 13 | **Shri L. Mahadevappa Udikal** | **Folklore** |
| 14 | **Prof. K. Ramamurthy Rao** | **Dance** |
| 15 | **Shri Ramegowda** | **Environment** |
| 16 | **Shri Mallikarjun Ningappa** | **Environment** |
| 17 | **Shri Gundooraj** | **Bayalata (Rural Theatre)** |
| 18 | **Shri K. Subramanya** | **Media** |
| 19 | **Shri Amshi Prasannakumar** | **Media** |
| 20 | **Shri B.M. Haneef** | **Media** |
| 21 | **Shri M. Siddharaju** | **Media** |
| 22 | **Shri Kota Suresh Banger** | **Yakshagana** |
| 23 | **Shri Airbail Anand Shetty** | **Yakshagana** |
| 24 | **Shri Krishna Parmeshwar Hegde (K.P. Hegde)** | **Yakshagana** |
| 25 | **Shri Ramayya** | **Science and Technology** |
| 26 | **Air Marshal Philip Rajkumar** | **Science and Technology** |
| 27 | **Dr. R.V. Nadagoud** | **Science and Technology** |
| 28 | **Dr. Alamma Maranna** | **Medicine** |
| 29 | **Dr. Jayaranganath** | **Medicine** |
| 30 | **Shri Umesh Pambada** | **Sculpture / Miscellaneous Arts** |

| | | |
|---|---|---|
| 4 | ಶ್ರೀ ಪ್ರಕಾಶ್ ರಾಜ್ | ಚಲನಚಿತ್ರ /ಕಿರುತೆರೆ |
| 5 | ಶ್ರೀಮತಿ ವಿಜಯಲಕ್ಷ್ಮೀ ಸಿಂಗ್ | ಚಲನಚಿತ್ರ /ಕಿರುತೆರೆ |
| 6 | ಶ್ರೀ ಬಸಪ್ಪ ಭರಮಪ್ಪ ಚೌಡ್ಕಿ | ಜಾನಪದ |
| 7 | ಶ್ರೀ ಬಿ. ಟಾಕಪ್ಪ ಕಣ್ಣೂರು | ಜಾನಪದ |
| 8 | ಶ್ರೀ ಸಣ್ ನಿಂಗಪ್ಪ ಸತ್ತೆಪ್ಪ ಮುಶೆಣ್ಣಗೋಳ | ಜಾನಪದ |
| 9 | ಶ್ರೀ ಹನುಮಂತಪ್ಪ, ಮಾರಪ್ಪ, ಚೀಳಂಗಿ | ಜಾನಪದ |
| 10 | ಶ್ರೀ ಎಂ. ಟೋಪಣ್ಣ | ಜಾನಪದ |
| 11 | ಶ್ರೀ ಸೋಮಣ್ಣ ದುಂಡಪ್ಪ ಧನಗೊಂಡ | ಜಾನಪದ |
| 12 | ಶ್ರೀಮತಿ ಸಿಂಧು ಗುಜರನ್ | ಜಾನಪದ |
| 13 | ಶ್ರೀ ಎಲ್. ಮಹದೇವಪ್ಪ ಉಡಿಕಲ್ | ಜಾನಪದ |
| 14 | ಪ್ರೊ. ಕೆ. ರಾಮಮೂರ್ತಿ ರಾವ್ | ನೃತ್ಯ |
| 15 | ಶ್ರೀ ರಾಮೇಗೌಡ | ಪರಿಸರ |
| 16 | ಶ್ರೀ ಮಲ್ಲಿಕಾರ್ಜುನ ನಿಂಗಪ್ಪ | ಪರಿಸರ |
| 17 | ಶ್ರೀ ಗುಂಡೂರಾಜ್ | ಬಯಲಾಟ |
| 18 | ಶ್ರೀ ಕೆ.ಸುಬ್ರಮಣ್ಯ | ಮಾಧ್ಯಮ |
| 19 | ಶ್ರೀ ಅಂಶಿ ಪ್ರಸನ್ನಕುಮಾರ್ | ಮಾಧ್ಯಮ |
| 20 | ಶ್ರೀ ಬಿ.ಎಂ ಹನೀಫ್ | ಮಾಧ್ಯಮ |
| 21 | ಶ್ರೀ ಎಂ ಸಿದ್ಧರಾಜು | ಮಾಧ್ಯಮ |
| 22 | ಶ್ರೀ ಕೋಟ ಸುರೇಶ ಬಂಗೇರ | ಯಕ್ಷಗಾನ |
| 23 | ಶ್ರೀ ಐರಬೈಲ್ ಆನಂದ ಶೆಟ್ಟಿ | ಯಕ್ಷಗಾನ |
| 24 | ಶ್ರೀ ಕೃಷ್ಣ ಪರಮೇಶ್ವರ ಹೆಗಡೆ (ಕೆ.ಪಿ ಹೆಗಡೆ) | ಯಕ್ಷಗಾನ |
| 25 | ಶ್ರೀ ರಾಮಯ್ಯ | ವಿಜ್ಞಾನ-ತಂತ್ರಜ್ಞಾನ |
| 26 | ಶ್ರೀ ಏರ್ ಮಾರ್ಷಲ್ ಫೀಲೀಫ್ ರಾಜಕುಮಾರ್ | ವಿಜ್ಞಾನ-ತಂತ್ರಜ್ಞಾನ |
| 27 | ಡಾ. ಆರ್. ವಿ ನಾಡಗೌಡ | ವಿಜ್ಞಾನ-ತಂತ್ರಜ್ಞಾನ |
| 28 | ಡಾ. ಆಲಮ್ಮ ಮಾರಣ್ಣ | ವೈದ್ಯಕೀಯ |
| 29 | ಡಾ. ಜಯರಂಗನಾಥ್ | ವೈದ್ಯಕೀಯ |
| 30 | ಶ್ರೀ ಉಮೇಶ ಪಂಬದ | ಶಿಲ್ಪಕಲೆ / ಇತರೆ ಕಲೆ |

| | | |
|---|---|---|
| 31 | Dr. Ravindra Korishettar | Sculpture / Miscellaneous Arts |
| 32 | Shri K. Dinesh | Sculpture / Miscellaneous Arts |
| 33 | Shri Shantaraju | Sculpture / Miscellaneous Arts |
| 34 | Shri Jaffar Mohiyuddin | Sculpture / Miscellaneous Arts |
| 35 | Shri Penna Obalayya | Sculpture / Miscellaneous Arts |
| 36 | Smt. Shanti Bai | Sculpture / Miscellaneous Arts |
| 37 | Shri Pundalik Shastri (Budabudake) | Sculpture / Miscellaneous Arts |
| 38 | Shri Devendrakumar Pattar | Music |
| 39 | Shri Madivalayya Sali | Music |
| 40 | Smt. Sulagitti Eeramma | Social Service |
| 41 | Smt. Fakkiri | Social Service |
| 42 | Smt. Corine Antoniette Raskina | Social Service |
| 43 | Dr. N. Sitaram Shetty | Social Service |
| 44 | Shri Konandur Lingappa | Social Service |
| 45 | Shri Shekharagowda V. Malipatil | Cooperation |
| 46 | Prof. Rajendra Chenni | Literature |
| 47 | Shri Thumbadi Ramayya | Literature |
| 48 | Prof. R. Sunandamma | Literature |
| 49 | Dr. H.L. Pushpa | Literature |
| 50 | Shri Rahmat Tarikere | Literature |
| 51 | Shri H.M. Pujar | Literature |
| 52 | Shri Zakaria Bajpe (Saudi Arabia) | Kannadiga Abroad |
| 53 | Shri P.V. Shetty (Mumbai) | Kannadiga Abroad |
| 54 | Shri H.M. Paramashivayya | Theatre |
| 55 | Shri L.B. Sheikh (Master) | Theatre |

| | | |
|---|---|---|
| 31 | ಡಾ. ರವೀಂದ್ರ ಕೋರಿಶೆಟ್ಟರ್ | ಶಿಲ್ಪಕಲೆ / ಇತರೆ ಕಲೆ |
| 32 | ಶ್ರೀ ಕೆ.ದಿನೇಶ್ | ಶಿಲ್ಪಕಲೆ / ಇತರೆ ಕಲೆ |
| 33 | ಶ್ರೀ ಶಾಂತರಾಜು | ಶಿಲ್ಪಕಲೆ / ಇತರೆ ಕಲೆ |
| 34 | ಶ್ರೀ ಜಾಫರ್ ಮೊಹಿಯುದ್ದೀನ್ | ಶಿಲ್ಪಕಲೆ / ಇತರೆ ಕಲೆ |
| 35 | ಶ್ರೀ ಪೆನ್ನ ಓಬಳಯ್ಯ | ಶಿಲ್ಪಕಲೆ / ಇತರೆ ಕಲೆ |
| 36 | ಶ್ರೀ ಶಾಂತಿ ಬಾಯಿ | ಶಿಲ್ಪಕಲೆ / ಇತರೆ ಕಲೆ |
| 37 | ಶ್ರೀ ಪುಂಡಲೀಕ ಶಾಸ್ತ್ರೀ(ಬುಡಬುಡಕೆ) | ಇತರೆ ಕಲೆ |
| 38 | ಶ್ರೀ ದೇವೆಂದ್ರಕುಮಾರ ಪತ್ತಾರ್ | ಸಂಗೀತ |
| 39 | ಶ್ರೀ ಮಡಿವಾಳಯ್ಯ ಸಾಲಿ | ಸಂಗೀತ |
| 40 | ಶ್ರೀಮತಿ ಸೂಲಗಿತ್ತಿ ಈರಮ್ಮ | ಸಮಾಜ ಸೇವೆ |
| 41 | ಶ್ರೀಮತಿ ಫಕ್ಕೀರಿ | ಸಮಾಜ ಸೇವೆ |
| 42 | ಶ್ರೀಮತಿ ಕೋರಿನ್ ಆಂಟೊನಿಯಟ್ ರಸ್ಕೀನಾ | ಸಮಾಜ ಸೇವೆ |
| 43 | ಡಾ. ಎನ್. ಸೀತಾರಾಮ ಶೆಟ್ಟಿ | ಸಮಾಜ ಸೇವೆ |
| 44 | ಶ್ರೀ ಕೋಣಂದೂರು ಲಿಂಗಪ್ಪ | ಸಮಾಜ ಸೇವೆ |
| 45 | ಶ್ರೀ ಶೇಖರಗೌಡ ವಿ ಮಾಲಿಪಾಟೀಲ್ | ಸಹಕಾರ |
| 46 | ಪ್ರೊ. ರಾಜೇಂದ್ರ ಚೆನ್ನಿ | ಸಾಹಿತ್ಯ |
| 47 | ಶ್ರೀ ತುಂಬಾಡಿ ರಾಮಯ್ಯ | ಸಾಹಿತ್ಯ |
| 48 | ಪ್ರೊ ಆರ್ ಸುನಂದಮ್ಮ | ಸಾಹಿತ್ಯ |
| 49 | ಡಾ.ಎಚ್.ಎಲ್ ಪುಷ್ಪ | ಸಾಹಿತ್ಯ |
| 50 | ಶ್ರೀ ರಹಮತ್ ತರೀಕೆರೆ | ಸಾಹಿತ್ಯ |
| 51 | ಶ್ರೀ ಹ.ಮ. ಪೂಜಾರ | ಸಾಹಿತ್ಯ |
| 52 | ಶ್ರೀ ಜಕರಿಯ ಬಜಪೆ (ಸೌದಿ ಅರೇಬಿಯಾ) | ಹೊರನಾಡು ಕನ್ನಡಿಗ |
| 53 | ಶ್ರೀ ಪಿ ವಿ ಶೆಟ್ಟಿ (ಮುಂಬೈ) | ಹೊರನಾಡು ಕನ್ನಡಿಗ |
| 54 | ಶ್ರೀ ಹೆಚ್.ಎಂ. ಪರಮಶಿವಯ್ಯ | ರಂಗಭೂಮಿ |
| 55 | ಶ್ರೀ ಎಲ್.ಬಿ.ಶೇಖ್ (ಮಾಸ್ತರ್) | ರಂಗಭೂಮಿ |

| | | |
|---|---|---|
| 56 | Shri Bangarappa Khudanpur | Theatre |
| 57 | Shri Mime Ramesh | Theatre |
| 58 | Smt. D. Ratnamma Desai | Theatre |
| 59 | Dr. M.R. Jayaram | Education |
| 60 | Dr. N.S. Ramegowda | Education |
| 61 | Shri S.B. Hosamani | Education |
| 62 | Smt. Rajashree Nagaraj | Education |
| 63 | Shri Ashish Kumar Ballal | Sports |
| 64 | Shri M. Yogendra | Sports |
| 65 | Dr. Babina N.M. (Yoga) | Sports |
| 66 | Justice P.B. Bhajantri (Pavankumar Bhajantri) | Judiciary |
| 67 | Shri Basanna Monappa Badiger | Sculpture |
| 68 | Shri Nagalingappa G. Gangur | Sculpture |
| 69 | Shri B. Maruti | Painting |
| 70 | Smt. L. Hemashekar | Handicrafts |

## State Film Lifetime Achievement Awards and literary awards (2019)

**News** - The Karnataka State Film Lifetime Achievement Awards **recognize individuals for their outstanding contributions to Kannada cinema** over their lifetime

- **Award: Dr. Rajkumar Award**
  **Awardee**: Umashree
  **Category**: Lifetime Achievement in **Cinema**
  **Issuing Authority**: Government of Karnataka (Department of Information and Public Relations)
- **Award: Puttanna Kanagal Award**
  **Awardee**: N. R. Nanjunde Gowda
  **Category**: Lifetime Achievement in **Direction**
  Issuing Authority: Government of Karnataka (Department of Information and Public Relations)
- **Award: Dr. Vishnuvardhan Award**
  **Awardee**: Richard Castelino
  **Category**: Lifetime Achievement in Film Production/Direction
  **Issuing Authority**: Government of Karnataka (Department of Information and Public Relations)

| | | |
|---|---|---|
| 56 | ಶ್ರೀ ಬಂಗಾರಪ್ಪ ಖುದಾನಪುರ | ರಂಗಭೂಮಿ |
| 57 | ಶ್ರೀ ಮೈಮ್ ರಮೇಶ್ | ರಂಗಭೂಮಿ |
| 58 | ಶ್ರೀಮತಿ ಡಿ.ರತ್ನಮ್ಮ ದೇಸಾಯಿ | ರಂಗಭೂಮಿ |
| 59 | ಡಾ. ಎಂ.ಆರ್. ಜಯರಾಮ್ | ಶಿಕ್ಷಣ |
| 60 | ಡಾ. ಎನ್ ಎಸ್ ರಾಮೇಗೌಡ | ಶಿಕ್ಷಣ |
| 61 | ಶ್ರೀ. ಎಸ್. ಬಿ. ಹೊಸಮನಿ | ಶಿಕ್ಷಣ |
| 62 | ಶ್ರೀಮತಿ ರಾಜಶ್ರೀ ನಾಗರಾಜು | ಶಿಕ್ಷಣ |
| 63 | ಶ್ರೀ ಆಶೀಶ್ ಕುಮಾರ್ ಬಲ್ಲಾಳ | ಕ್ರೀಡೆ |
| 64 | ಶ್ರೀ ಎಂ ಯೋಗೇಂದ್ರ | ಕ್ರೀಡೆ |
| 65 | ಡಾ. ಬಬಿನಾ ಎನ್.ಎಂ (ಯೋಗ) | ಕ್ರೀಡೆ |
| 66 | ನ್ಯಾ. ಶ್ರೀ ಪವನ್ ಕುಮಾರ್ ಭಜಂತ್ರಿ | ನ್ಯಾಯಾಂಗ |
| 67 | ಶ್ರೀ ಬಸಣ್ಣ ಮೋನಪ್ಪ ಬಡಿಗೇರ | ಶಿಲ್ಪಕಲೆ |
| 68 | ಶ್ರೀ ನಾಗಲಿಂಗಪ್ಪ ಜಿ ಗಂಗೂರ | ಶಿಲ್ಪಕಲೆ |
| 69 | ಶ್ರೀ ಬಿ. ಮಾರುತಿ | ಚಿತ್ರಕಲೆ |
| 70 | ಶ್ರೀಮತಿ ಎಲ್. ಹೇಮಾಶೇಖರ್ | ಕರಕುಶಲ |

## ರಾಜ್ಯ ಚಲನಚಿತ್ರ ಜೀವಮಾನ ಸಾಧನೆ ಪ್ರಶಸ್ತಿಗಳು ಮತ್ತು ಸಾಹಿತ್ಯ ಪ್ರಶಸ್ತಿಗಳು, 2019

ಇದೀಗ ಸುದ್ದಿಯಲ್ಲಿದೆ:

- ಕನ್ನಡ ಚಲನಚಿತ್ರರಂಗಕ್ಕೆ ಸಲ್ಲಿಸಿದ ಜೀವಮಾನ ಸಾಧನೆಯನ್ನು ಪರಿಗಣಿಸಿ ವ್ಯಕ್ತಿಗಳ ಅತ್ಯುನ್ನತ ಕೊಡುಗೆಗಳನ್ನು ಗೌರವಿಸಲು ಕರ್ನಾಟಕ ಸರ್ಕಾರವು 2019ನೇ ಸಾಲಿನ ಪ್ರತಿಷ್ಠಿತ ರಾಜ್ಯ ಚಲನಚಿತ್ರ ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಈ ಪ್ರಶಸ್ತಿಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ನೀಡುತ್ತದೆ.

ಪ್ರಶಸ್ತಿ ಪುರಸ್ಕೃತರ ವಿವರ

- ಡಾ. ರಾಜ್‌ಕುಮಾರ್ ಪ್ರಶಸ್ತಿ
  - ಪುರಸ್ಕೃತರು: **ಉಮಾಶ್ರೀ**
  - ವಿಭಾಗ: **ಚಲನಚಿತ್ರ ರಂಗದ ಜೀವಮಾನ ಸಾಧನೆ.**
- ಪುಟ್ಟಣ್ಣ ಕಣಗಾಲ್ ಪ್ರಶಸ್ತಿ
  - ಪುರಸ್ಕೃತರು: **ಎನ್. ಆರ್. ನಂಜುಂಡೇಗೌಡ**
  - ವಿಭಾಗ: ಚಲನಚಿತ್ರ **ನಿರ್ದೇಶನದಲ್ಲಿ** ಜೀವಮಾನ ಸಾಧನೆ.
- ಡಾ. ವಿಷ್ಣುವರ್ಧನ್ ಪ್ರಶಸ್ತಿ
  - ಪುರಸ್ಕೃತರು: **ರಿಚರ್ಡ್ ಕ್ಯಾಸ್ಟಲಿನೊ**
  - ವಿಭಾಗ: ಚಲನಚಿತ್ರ **ನಿರ್ಮಾಣ ಮತ್ತು ನಿರ್ದೇಶನದಲ್ಲಿ** ಜೀವಮಾನ ಸಾಧನೆ.

- In the **literary category,** the **State Film Literature Award for 2019** has been conferred on senior **journalist Raghunath Ch.Ha. for his book "Belli Tore – Cinema Essays,"** published by Ankita Prakashana.
- Both the author and the publisher will receive **₹20,000 in cash and a silver medal** each.

## State water commission

**News -**

- **State govt. planning to set up permanent water commission**

**State water commission**

- **Karnataka is planning to establish a permanent water commission** comprising technical experts **on the lines of the Central Water Commission,**
- **Purpose- to** recommend to the State government **measures on water security and on matters of water dispute**s. It will also assess demand and availability of water in the State, and fix responsibility on farmers for its usage.

**Composition -**

- The commission will have **10 to 15 technical experts.**
- It will have representatives from the Irrigation and the Finance Departments, experts from the field of environmental science and water resources, and progressive farmers, among others.

## Karnataka bags award for highest under-construction wind capacity

**News -**

- **Karnataka has won the national award for having the highest under-construction wind capacity in 2024–25.**
- The recognition was presented during the **seventh edition of Windergy India 2025,** the country's flagship wind energy event held in Chennai.

- **ರಾಜ್ಯ ಚಲನಚಿತ್ರ ಸಾಹಿತ್ಯ ಪ್ರಶಸ್ತಿ**
  - ಸಾಹಿತ್ಯ ವಿಭಾಗದಲ್ಲಿ, ಅಂಕಿತ ಪ್ರಕಾಶನ ಪ್ರಕಟಿಸಿದ **"ಬೆಳ್ಳಿ ತೊರೆ – ಸಿನಿಮಾ ಪ್ರಬಂಧಗಳು"** ಕೃತಿಗಾಗಿ ಹಿರಿಯ ಪತ್ರಕರ್ತ **ರಘುನಾಥ್ ಚ.ಹ.** ಅವರಿಗೆ 2019 ನೇ ಸಾಲಿನ ರಾಜ್ಯ ಚಲನಚಿತ್ರ ಸಾಹಿತ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.
  - **ಲೇಖಕರು ಮತ್ತು ಪ್ರಕಾಶಕರಿಬ್ಬರಿಗೂ ತಲಾ ₹20,000** ನಗದು ಬಹುಮಾನ ಹಾಗೂ **ಬೆಳ್ಳಿ ಪದಕವನ್ನು** ನೀಡಿ ಗೌರವಿಸಲಾಗುತ್ತದೆ.

## ರಾಜ್ಯ ಜಲ ಆಯೋಗ

**ಇದೀಗ ಸುದ್ದಿಯಲ್ಲಿದೆ:**

- **ರಾಜ್ಯದಲ್ಲಿ ಶಾಶ್ವತ ಜಲ ಆಯೋಗವೊಂದನ್ನು** ಸ್ಥಾಪಿಸಲು ರಾಜ್ಯ ಸರ್ಕಾರವು ಯೋಜಿಸುತ್ತಿದೆ.

**ರಾಜ್ಯ ಜಲ ಆಯೋಗದ ಬಗ್ಗೆ:**

- **ಕೇಂದ್ರ ಜಲ ಆಯೋಗದ** ಮಾದರಿಯಲ್ಲಿಯೇ, ತಾಂತ್ರಿಕ ತಜ್ಞರನ್ನು ಒಳಗೊಂಡ **'ಶಾಶ್ವತ ಜಲ ಆಯೋಗ'ವನ್ನು** ರಚಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ.
- ಉದ್ದೇಶಗಳು:-
  - ❑ **ಶಿಫಾರಸು ಮಾಡುವುದು:** ಜಲ ಭದ್ರತೆ ಮತ್ತು ಜಲ ವಿವಾದಗಳ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸೂಕ್ತ ಕ್ರಮಗಳನ್ನು ಶಿಫಾರಸು ಮಾಡುವುದು ಇದರ ಪ್ರಮುಖ ಉದ್ದೇಶವಾಗಿದೆ.
  - ❑ **ಮೌಲ್ಯಮಾಪನ ಮತ್ತು ಹೊಣೆಗಾರಿಕೆ:** ಇದು ರಾಜ್ಯದಲ್ಲಿನ ನೀರಿನ ಬೇಡಿಕೆ ಮತ್ತು ಲಭ್ಯತೆಯನ್ನು ಮೌಲ್ಯಮಾಪನ ಮಾಡುತ್ತದೆ. ಅಲ್ಲದೆ, ನೀರಿನ ಬಳಕೆಗೆ ಸಂಬಂಧಿಸಿದಂತೆ ರೈತರ ಹೊಣೆಗಾರಿಕೆಯನ್ನು ನಿಗದಿಪಡಿಸುವ ಕಾರ್ಯವನ್ನೂ ಇದು ನಿರ್ವಹಿಸಲಿದೆ.

**ಸಂಯೋಜನೆ:**

- ಆಯೋಗವು **10 ರಿಂದ 15 ಜನ ತಾಂತ್ರಿಕ ತಜ್ಞರನ್ನು** ಒಳಗೊಂಡಿರುತ್ತದೆ.
- ಇದರಲ್ಲಿ **ನೀರಾವರಿ ಮತ್ತು ಹಣಕಾಸು ಇಲಾಖೆಗಳ ಅಧಿಕಾರಿಗಳು, ಪರಿಸರ ವಿಜ್ಞಾನ ಮತ್ತು ಜಲ ಸಂಪನ್ಮೂಲ ಕ್ಷೇತ್ರದ ತಜ್ಞರು ಹಾಗೂ ಪ್ರಗತಿಪರ ರೈತರು** ಸದಸ್ಯರಾಗಿರುತ್ತಾರೆ.

## ನಿರ್ಮಾಣ ಹಂತದಲ್ಲಿರುವ ಅತೀ ಹೆಚ್ಚು ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ಕರ್ನಾಟಕಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ

**ಇದೀಗ ಸುದ್ದಿಯಲ್ಲಿದೆ:**

- 2024-25ನೇ ಸಾಲಿನಲ್ಲಿ ನಿರ್ಮಾಣ ಹಂತದಲ್ಲಿರುವ ಅತೀ ಹೆಚ್ಚು ಪವನ ವಿದ್ಯುತ್ ಸಾಮರ್ಥ್ಯವನ್ನು ಹೊಂದಿರುವುದಕ್ಕಾಗಿ ಕರ್ನಾಟಕ ರಾಜ್ಯವು ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ.
- **ಚೆನ್ನೈನಲ್ಲಿ** ನಡೆದ ದೇಶದ ಪ್ರಮುಖ ಪವನ ಶಕ್ತಿ ಕಾರ್ಯಕ್ರಮವಾದ **'ವಿಂಡರ್ಜಿ ಇಂಡಿಯಾ 2025'** ರ ಏಳನೇ ಆವೃತ್ತಿಯ ಸಮಾರಂಭದಲ್ಲಿ ರಾಜ್ಯಕ್ಕೆ ಈ ಮನ್ನಣೆಯನ್ನು ನೀಡಲಾಯಿತು.

INSTAKAS

## Additional information - Wind Energy Sector in India: Status

- **Wind Power Capacity:** India has the **4th largest installed wind power capacity in the world.**
- **Installed Capacity: As of 51.67 GW as of August 12, 2025.**
- **Highest wind energy producing states - Gujarat followed by Tamil Nadu and Karnataka & Rajasthan.**

## Government Initiatives for the Wind Sector

- **National Wind-Solar Hybrid Policy (2018):** Encourages combining wind and solar in one project to ensure continuous power supply and efficient land use.
- **Offshore Wind Policy (2015):** Provides framework for developing offshore wind farms in Indian waters, including permissions and grid planning.

## SWR launches 'MUTS Sahayak' ticketing scheme




## News

- In a bid to streamline the ticketing process, **South Western Railway (SWR)** has launched the **Mobile Unreserved Ticketing System (MUTS) Sahayak Scheme** at the KSR Bengaluru Station.
- This makes SWR the **first railway zone** in the country to introduce the initiative.

## Mobile Unreserved Ticketing System (MUTS) Sahayak Scheme

- Under the scheme, trained **MUTS Sahayaks will use MUTS handheld devices to issue unreserved tickets to passengers.**
- The move is **aimed at easing congestion at ticket counters and providing commuters with a quicker, hassle-free option for purchasing tickets.**

## ಭಾರತದಲ್ಲಿ ಪವನ ಶಕ್ತಿ ವಲಯ: ಪ್ರಸ್ತುತ ಸ್ಥಿತಿಗತಿ:

- **ಜಾಗತಿಕ ಸ್ಥಾನ:** ಸ್ಥಾಪಿತ ಪವನ ವಿದ್ಯುತ್ ಸಾಮರ್ಥ್ಯದಲ್ಲಿ **ಭಾರತವು ವಿಶ್ವದಲ್ಲೇ 4ನೇ ಅತಿದೊಡ್ಡ ರಾಷ್ಟ್ರವಾಗಿದೆ.**
- **ಸ್ಥಾಪಿತ ಸಾಮರ್ಥ್ಯ :** 2025 ರ ಆಗಸ್ಟ್ 12 ರ ಮಾಹಿತಿಯಂತೆ, ದೇಶದ ಒಟ್ಟು ಸ್ಥಾಪಿತ ಪವನ ವಿದ್ಯುತ್ ಸಾಮರ್ಥ್ಯ **51.67 ಗಿಗಾ ವಾಟ್** ಆಗಿದೆ.
- ಪ್ರಮುಖ ರಾಜ್ಯಗಳು: ಪವನ ಶಕ್ತಿ ಉತ್ಪಾದನೆಯಲ್ಲಿ **ಗುಜರಾತ್ ಅಗ್ರಸ್ಥಾನದಲ್ಲಿದ್ದು,** ತದನಂತರದ ಸ್ಥಾನಗಳಲ್ಲಿ **ತಮಿಳುನಾಡು, ಕರ್ನಾಟಕ** ಮತ್ತು ರಾಜಸ್ಥಾನ ರಾಜ್ಯಗಳಿವೆ.

## ಪವನ ಶಕ್ತಿ ವಲಯಕ್ಕಾಗಿ ಸರ್ಕಾರದ ಪ್ರಮುಖ ಉಪಕ್ರಮಗಳ ಬಗ್ಗೆ:

1. **ರಾಷ್ಟ್ರೀಯ ಪವನ-ಸೌರ ಹೈಬ್ರಿಡ್ ನೀತಿ, 2018:** ನಿರಂತರ ವಿದ್ಯುತ್ ಪೂರೈಕೆ ಮತ್ತು ಭೂಮಿಯ ಸಮರ್ಥ ಬಳಕೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ, ಒಂದೇ ಯೋಜನೆಯಡಿ ಪವನ ಮತ್ತು ಸೌರಶಕ್ತಿಯನ್ನು ಸಂಯೋಜಿಸುವುದನ್ನು ಈ ನೀತಿಯು ಪ್ರೋತ್ಸಾಹಿಸುತ್ತದೆ.
2. **ಕಡಲಾಚೆಯ ಪವನ ಶಕ್ತಿ ನೀತಿ, 2015:** ಭಾರತೀಯ ಜಲಪ್ರದೇಶಗಳಲ್ಲಿ ಕಡಲಾಚೆಯ ಪವನ ವಿದ್ಯುತ್ ಸ್ಥಾವರಗಳನ್ನು ಅಭಿವೃದ್ಧಿಪಡಿಸಲು ಅಗತ್ಯವಾದ ಅನುಮತಿಗಳು ಮತ್ತು ಜಾಲದ ಯೋಜನೆ ಸೇರಿದಂತೆ ಸೂಕ್ತ ಚೌಕಟ್ಟನ್ನು ಈ ನೀತಿಯು ಒದಗಿಸುತ್ತದೆ.

## ನೈಋತ್ಯ ರೈಲ್ವೆ (SWR) ಯಿಂದ 'ಮಟ್ಸ್ ಸಹಾಯಕ್' ಟಿಕೆಟ್ ವಿತರಣಾ ಯೋಜನೆ ಪ್ರಾರಂಭ




## ಇದೀಗ ಸುದ್ದಿಯಲ್ಲಿದೆ:

- ಟಿಕೆಟ್ ವಿತರಣಾ ಪ್ರಕ್ರಿಯೆಯನ್ನು ಸರಳಗೊಳಿಸುವ ನಿಟ್ಟಿನಲ್ಲಿ, **ನೈಋತ್ಯ ರೈಲ್ವೆಯು (SWR)** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್ಆರ್) ಬೆಂಗಳೂರು ನಿಲ್ದಾಣದಲ್ಲಿ **'ಮೊಬೈಲ್ ಕಾಯ್ದಿರಿಸದ ಟಿಕೆಟ್ ವ್ಯವಸ್ಥೆ' (MUTS) ಸಹಾಯಕ್ ಯೋಜನೆ'**ಗೆ ಚಾಲನೆ ನೀಡಿದೆ.
- ಈ ಮೂಲಕ, ಇಂತಹ ಉಪಕ್ರಮವನ್ನು ಪರಿಚಯಿಸಿದ **ದೇಶದ ಮೊದಲ ರೈಲ್ವೆ ವಲಯ** ಎಂಬ ಹೆಗ್ಗಳಿಕೆಗೆ ನೈಋತ್ಯ ರೈಲ್ವೆ ಪಾತ್ರವಾಗಿದೆ.

## ಮೊಬೈಲ್ ಕಾಯ್ದಿರಿಸದ ಟಿಕೆಟ್ ವ್ಯವಸ್ಥೆ (MUTS) ಸಹಾಯಕ್ ಯೋಜನೆಯ ಬಗ್ಗೆ:

- ಈ ಯೋಜನೆಯಡಿಯಲ್ಲಿ, **ತರಬೇತಿ ಪಡೆದ MUTS ಸಹಾಯಕರರು MUTS ಕೈಯಲ್ಲಿ ಹಿಡಿಯುವ ಸಾಧನಗಳನ್ನು ಬಳಸಿ ಪ್ರಯಾಣಿಕರಿಗೆ ಕಾಯ್ದಿರಿಸದ ಟಿಕೆಟ್‌ಗಳನ್ನು ವಿತರಿಸುತ್ತಾರೆ.**
- **ಟಿಕೆಟ್ ಕೌಂಟರ್‌ಗಳಲ್ಲಿನ ದಟ್ಟಣೆಯನ್ನು ಕಡಿಮೆ ಮಾಡುವುದು ಮತ್ತು ಪ್ರಯಾಣಿಕರಿಗೆ ತ್ವರಿತವಾಗಿ ಹಾಗೂ ತೊಂದರೆರಹಿತವಾಗಿ ಟಿಕೆಟ್ ಖರೀದಿಸಲು ಅವಕಾಶ ಕಲ್ಪಿಸುವುದು** ಇದರ ಗುರಿಯಾಗಿದೆ.

INSTAKAS

## Honnavar Port Project

**News -**

- Fact-finding report asks State to revoke environmental clearance

## Honnavar Port Project

- **Location: Honnavara (Honnavar), Uttara Kannada district, Karnataka, at the mouth of the Sharavathi River.**
- **Project type:** Major **deep-water port development** under public-private partnership; **managed by Honnavar Port Private Limited (HPPL)** in collaboration with Karnataka Maritime Board.
- **Project cost:** Approximately ₹607 crore.
- **Cargo handling:** Initial capacity of 4.9 million tonnes per annum (MTPA), expected **to boost regional maritime trade and economic growth.**
- **Opposition**: Strong resistance from local fishing communities across five villages due to **threats to livelihoods and ecological concerns related to the Sharavathi estuary.**

## Cobra Beat




**News -**

- **In a bid to tackle micro-level issues contributing to traffic congestion, the Bengaluru Traffic Police (BTP) has launched a Cobra Beat system.**

**Cobra Beat system**

- It is a **traffic management initiative by the Bengaluru Traffic Police**
- **Overview** - to **address congestion by having designated officers, known as "Cobras,"** patrol specific routes during peak hours **to tackle issues like illegal parking, bottlenecks, and wrong-way driving.**

## ಹೊನ್ನಾವರ ಬಂದರು ಯೋಜನೆ

**ಇದೀಗ ಸುದ್ದಿಯಲ್ಲಿದೆ:**

- ಹೊನ್ನಾವರ ಬಂದರು ಯೋಜನೆಗೆ ನೀಡಲಾದ ಪರಿಸರ ಅನುಮತಿಯನ್ನು ತಕ್ಷಣವೇ ಹಿಂಪಡೆಯುವಂತೆ '**ವಾಸ್ತವ ಪರಿಶೋಧನಾ ವರದಿ**'ಯೊಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

## ಹೊನ್ನಾವರ ಬಂದರು ಯೋಜನೆಯ ಬಗ್ಗೆ:

- **ಸ್ಥಳ:-** ಈ ಯೋಜನೆಯನ್ನು ಕರ್ನಾಟಕದ **ಉತ್ತರ ಕನ್ನಡ** ಜಿಲ್ಲೆಯ ಹೊನ್ನಾವರದಲ್ಲಿ, ನಿರ್ದಿಷ್ಟವಾಗಿ **ಶರಾವತಿ ನದಿಯ ಮುಖಜ ಭೂಮಿ** ಪ್ರದೇಶದಲ್ಲಿ ಗುರುತಿಸಲಾಗಿದೆ.
- ಯೋಜನೆಯ ಪ್ರಕಾರ:- ಇದೊಂದು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP) ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಪ್ರಮುಖ **ಆಳ ನೀರಿನ ಬಂದರು ಯೋಜನೆ**ಯಾಗಿದೆ. ಈ ಯೋಜನೆಯನ್ನು **ಕರ್ನಾಟಕ ಜಲಸಾರಿಗೆ ಮಂಡಳಿಯ** ಸಹಯೋಗದೊಂದಿಗೆ **"ಹೊನ್ನಾವರ ಬಂದರು ಖಾಸಗಿ ನಿಯಮಿತ" (HPPL)** ನಿರ್ವಹಿಸುತ್ತಿದೆ.
- **ಯೋಜನೆಯ ವೆಚ್ಚ:-** ಸರಿಸುಮಾರು ₹607 ಕೋಟಿ.
- **ಸರಕು ನಿರ್ವಹಣೆ:-** ಆರಂಭಿಕ ಸಾಮರ್ಥ್ಯ ವಾರ್ಷಿಕ 4.9 ಮಿಲಿಯನ್ ಟನ್ ಆಗಿದ್ದು, ಇದು ಪ್ರಾದೇಶಿಕ ಜಲಸಾರಿಗೆ ವ್ಯಾಪಾರ ಮತ್ತು ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವ ನಿರೀಕ್ಷೆಯಿದೆ.
- **ವಿರೋಧ : ಶರಾವತಿ ಅಳಿವೆಯ ಜೀವಿ ಪರಿಸರ ಕಾಳಜಿಗಳು ಮತ್ತು ಜೀವನೋಪಾಯಕ್ಕೆ ಉಂಟಾಗುವ ಬೆದರಿಕೆಗಳಿಂದಾಗಿ** ಐದು ಹಳ್ಳಿಗಳ ಸ್ಥಳೀಯ ಮೀನುಗಾರ ಸಮುದಾಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

## ಕೋಬ್ರಾ ಬೀಟ್




**ಇದೀಗ ಸುದ್ದಿಯಲ್ಲಿ**

- **ಸೂಕ್ಷ್ಮ-ಮಟ್ಟದ ಸಂಚಾರ ದಟ್ಟಣೆ ನಿರ್ವಹಣೆ** ಸಮಸ್ಯೆಗಳನ್ನು ನಿಭಾಯಿಸಲು, **ಬೆಂಗಳೂರು ಸಂಚಾರ ಪೊಲೀಸರು** (BTP) 'ಕೋಬ್ರಾ ಬೀಟ್' ವ್ಯವಸ್ಥೆಯನ್ನು ಪ್ರಾರಂಭಿಸಿದ್ದಾರೆ.

**ಕೋಬ್ರಾ ಬೀಟ್ ವ್ಯವಸ್ಥೆಯ ಬಗ್ಗೆ:**

- ಇದು **ಬೆಂಗಳೂರು ಸಂಚಾರ ಪೊಲೀಸರು** ಆರಂಭಿಸಿದ ಒಂದು **ಸಂಚಾರ ನಿರ್ವಹಣಾ** ಉಪಕ್ರಮವಾಗಿದೆ.
- **ಸಂಚಾರ ದಟ್ಟಣೆ ಹೆಚ್ಚಿರುವ ಸಮಯದಲ್ಲಿ** 'ಕೋಬ್ರಾ' ಪಡೆಯು ನಿಗದಿತ ಮಾರ್ಗಗಳಲ್ಲಿ **ನಿಯೋಜಿತ ಅಧಿಕಾರಿಗಳಿಂದ** ಗಸ್ತು **ತಿರುಗಿ, ಕಾನೂನುಬಾಹಿರವಾಗಿ ನಿಲ್ಲಿಸುವ, ಸಂಚಾರ ಅಡಚಣೆ ಮತ್ತು ತಪ್ಪು ದಿಕ್ಕಿನ ಚಾಲನೆಯಂತಹ** ಸಮಸ್ಯೆಗಳನ್ನು ತಕ್ಷಣವೇ ಬಗೆಹರಿಸಿ, ದಟ್ಟಣೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುತ್ತದೆ.

- These officers act as first responders **to proactively resolve minor traffic problems that cause major jams, improving real-time traffic flow.**

## Chief Minister's Kaushalya Karnataka Yojane (CMKKY)




**News -**

- **Chief Minister's Kaushalya Karnataka Yojane (CMKKY) shall be targeted under schemes implemented directly by SDEL**
- **2.50 lakh** youth shall be targeted under schemes implemented by other Government departments and government bodies.

## Chief Minister's Kaushalya Karnataka Yojane (CMKKY)

- **Aim-** It is the flagship skill development scheme by the Government of Karnataka, **providing free, short-term vocational training to the state's youth to enhance their employability and promote entrepreneurship.**

**Key Features and Objectives**

- **Goal:** The scheme aims **to skill 5 lakh youth annually across various government departments to meet industry demands.**
- **Target Audience:** It is **designed for youth**, especially **school drop-outs and existing workers in the informal sector**, within an general **age group of 15 to 35 years** (with some exceptions for specific categories).
- **Training Areas:** Training is offered in nearly 3,000 job roles across over 35 sectors, including **IT & ITeS, healthcare, automotive, electronics, and agriculture.** Recent updates for 2025-26 prioritize **emerging areas like Artificial Intelligence and Blockchain.**

- ಈ ಅಧಿಕಾರಿಗಳು ಪ್ರಥಮ ಸ್ಪಂದಕರಾಗಿ ಕಾರ್ಯನಿರ್ವಹಿಸುತ್ತಾರೆ. ಪ್ರಮುಖ ಸಂಚಾರ ದಟ್ಟಣೆಗಳಿಗೆ ಕಾರಣವಾಗುವ **ಸಣ್ಣಪುಟ್ಟ ಸಂಚಾರ ಸಮಸ್ಯೆಗಳನ್ನು ಪೂರ್ವಭಾವಿಯಾಗಿ ಪರಿಹರಿಸಿ,** ನೈಜ-ಸಮಯದ ಸಂಚಾರ ಹರಿವನ್ನು ಸುಧಾರಿಸುತ್ತಾರೆ.

**ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ (CMKKY)**




**ಇದೀಗ ಸುದ್ದಿಯಲ್ಲಿದೆ:**

- **ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ (CMKKY) ಯು, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ (SDEL) ಯು ನೇರವಾಗಿ ಅನುಷ್ಠಾನಗೊಳಿಸುವ ಯೋಜನೆಗಳ ಅಡಿಯಲ್ಲಿ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ.**
- ಅದೇ ರೀತಿ, ಇತರ ಸರ್ಕಾರಿ ಇಲಾಖೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಅನುಷ್ಠಾನಗೊಳಿಸುವ ಯೋಜನೆಗಳ ಅಡಿಯಲ್ಲಿ **2.50 ಲಕ್ಷ ಯುವಜನರಿಗೆ ಕೌಶಲ್ಯ ತರಬೇತಿ** ನೀಡುವ ಗುರಿಯನ್ನು ಹೊಂದಲಾಗಿದೆ.

**ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯ ಬಗ್ಗೆ:**

- **ಉದ್ದೇಶ** - ಇದು ಕರ್ನಾಟಕ ಸರ್ಕಾರದ ಪ್ರಮುಖ ಕೌಶಲ್ಯ ಅಭಿವೃದ್ಧಿ ಯೋಜನೆಯಾಗಿದೆ. ರಾಜ್ಯದ **ಯುವಜನರ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಉಚಿತ, ಅಲ್ಪಾವಧಿಯ ವೃತ್ತಿಪರ ತರಬೇತಿಯನ್ನು** ಇದು ಒದಗಿಸುತ್ತದೆ.

**ಪ್ರಮುಖ ಲಕ್ಷಣಗಳು ಮತ್ತು ಉದ್ದೇಶಗಳು:**

- ಗುರಿ: ಉದ್ಯಮದ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ, ವಿವಿಧ ಸರ್ಕಾರಿ ಇಲಾಖೆಗಳ ಅಡಿಯಲ್ಲಿ **ವಾರ್ಷಿಕವಾಗಿ 5 ಲಕ್ಷ ಯುವಜನರಿಗೆ ಕೌಶಲ್ಯ ತರಬೇತಿ** ನೀಡುವುದು ಈ ಯೋಜನೆಯ ಗುರಿಯಾಗಿದೆ.
- ಉದ್ದೇಶಿತ ವರ್ಗ: ಇದು **15 ರಿಂದ 35 ವರ್ಷ ವಯೋಮಾನದ ಯುವಜನರನ್ನು (ನಿರ್ದಿಷ್ಟ ವರ್ಗಗಳಿಗೆ ವಿನಾಯಿತಿ ಇದೆ)** ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲಾದ ಯೋಜನೆಯಾಗಿದೆ. ಮುಖ್ಯವಾಗಿ **ಶಾಲೆಯಿಂದ ಹೊರಗುಳಿದವರು ಮತ್ತು ಅನೌಪಚಾರಿಕ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ** ಕೌಶಲ್ಯ ತರಬೇತಿಯನ್ನು ಇದರ ಅಡಿಯಲ್ಲಿ ನೀಡಲಾಗುತ್ತದೆ.
- ತರಬೇತಿ ಕ್ಷೇತ್ರಗಳು: **ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು (IT & ITeS), ಆರೋಗ್ಯ ಸೇವೆಗಳು, ವಾಹನ ಸಂಬಂಧಿತ, ವಿದ್ಯುನ್ಮಾನ ಸಂಬಂಧಿತ ಮತ್ತು ಕೃಷಿ ಸೇರಿದಂತೆ 35 ಕ್ಕೂ ಹೆಚ್ಚು ವಲಯಗಳಲ್ಲಿ, ಸುಮಾರು 3,000 ವಿವಿಧ ಉದ್ಯೋಗಕ್ಕೇ** ಸಂಬಂಧಿಸಿದ ತರಬೇತಿಯನ್ನು ನೀಡಲಾಗುತ್ತದೆ. 2025-26 ನೇ ಸಾಲಿನ ಮಾಹಿತಿಯಂತೆ, **ಕೃತಕ ಬುದ್ಧಿಮತ್ತೆ ಮತ್ತು ಬ್ಲಾಕ್‌ಚೈನ್‌ನಂತಹ** ಉದಯೋನ್ಮುಖ ಕ್ಷೇತ್ರಗಳಿಗೆ ವಿಶೇಷ ಆದ್ಯತೆಯನ್ನು ನೀಡಲಾಗುತ್ತಿದೆ.

- **Placement Assistance:** The **Karnataka Skill Development Corporation (KSDC)**, which oversees the program, also facilitates placement opportunities for **at least 70% of the trainees after successful completion of the course.**
- **Integration with other schemes**: CMKKY works in convergence with central government schemes like the **Pradhan Mantri Kaushal Vikas Yojana (PMKVY) and the state's recent "Yuvanidhi Plus" initiative** for beneficiaries receiving unemployment allowances.

## Bengaluru Skill Summit 2025




**News-**

- **The Bengaluru Skill Summit 2025 was held from November 4 to 6, 2025.**
- **Theme : "Workforce 2030: Scale, Systems, and Synergy."**

**Organizers and Partners**


- The summit was organized by the **Government of Karnataka** through the **Skill Development Entrepreneurship and Livelihood Department**, along with the **Karnataka Skill Development Corporation, Department of Agriculture, and Karnataka Digital Economy Mission.**

**Objectives and Vision**

- to strengthen institutions, build a robust ecosystem for traditional and emerging skills, improve the quality and inclusivity of skilling, and foster innovation and global workforce mobility.
- **Karnataka aims to be the "Skill Gateway to the World"** by aligning with international certification standards and vocational education frameworks.

- ಉದ್ಯೋಗ ನೆರವು: ಈ ಯೋಜನೆಯ ಉಸ್ತುವಾರಿ ವಹಿಸಿರುವ **'ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ'ವು** (KSDC), ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ **ಕನಿಷ್ಠ 70% ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು** ಒದಗಿಸಲು ನೆರವಾಗುತ್ತದೆ.
- **ಇತರ ಯೋಜನೆಗಳೊಂದಿಗೆ ಸಂಯೋಜನೆ** : CMKKY ಯೋಜನೆಯು ಕೇಂದ್ರ ಸರ್ಕಾರದ **'ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ'** (PMKVY) ಮತ್ತು ನಿರುದ್ಯೋಗ ಭತ್ಯೆ ಪಡೆಯುವ ಫಲಾನುಭವಿಗಳಿಗಾಗಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ **'ಯುವನಿಧಿ ಪ್ಲಸ್'** ಉಪಕ್ರಮದೊಂದಿಗೆ ಸಂಯೋಜನೆಗೊಂಡು ಕಾರ್ಯನಿರ್ವಹಿಸುತ್ತದೆ.

## ಬೆಂಗಳೂರು ಕೌಶಲ್ಯ ಶೃಂಗಸಭೆ 2025




**ಇದೀಗ ಸುದ್ದಿಯಲ್ಲಿ**

- 'ಬೆಂಗಳೂರು ಕೌಶಲ್ಯ ಶೃಂಗಸಭೆ 2025'ನ್ನು ನವೆಂಬರ್ 4 ರಿಂದ 6, 2025 ರವರೆಗೆ ಆಯೋಜಿಸಲಾಗಿತ್ತು.
- **ಧ್ಯೇಯವಾಕ್ಯ: "ಕಾರ್ಯಪಡೆ 2030: ವಿಸ್ತರಣೆ, ವ್ಯವಸ್ಥೆಗಳು, ಸಮನ್ವಯ"**

**ಆಯೋಜಕರು ಮತ್ತು ಪಾಲುದಾರರು:**

- ಈ ಶೃಂಗಸಭೆಯನ್ನು ಕರ್ನಾಟಕ ಸರ್ಕಾರದ **'ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ'ಯು (SDEL), 'ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ' (KSDC), 'ಕರ್ನಾಟಕ ರಾಜ್ಯ ಕೃಷಿ ಇಲಾಖೆ' ಮತ್ತು 'ಕರ್ನಾಟಕ ಡಿಜಿಟಲ್ ಆರ್ಥಿಕತೆ ಮಿಷನ್'** ಸಹಯೋಗದೊಂದಿಗೆ ಆಯೋಜಿಸಿತ್ತು.

**ಉದ್ದೇಶಗಳು ಮತ್ತು ದೃಷ್ಟಿಕೋನ**

- **ಸಾಂಸ್ಥಿಕ ಬಲವರ್ಧನೆ:** ಸಂಸ್ಥೆಗಳನ್ನು ಬಲಪಡಿಸುವುದು, ಸಾಂಪ್ರದಾಯಿಕ ಮತ್ತು ಉದಯೋನ್ಮುಖ ಕೌಶಲ್ಯಗಳಿಗಾಗಿ ದೃಢವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು, ಕೌಶಲ್ಯ ತರಬೇತಿಯ ಗುಣಮಟ್ಟ ಮತ್ತು ಒಳಗೊಳ್ಳುವಿಕೆಯನ್ನು ಹೆಚ್ಚಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಜೊತೆಗೆ, ನಾವೀನ್ಯತೆ ಮತ್ತು ಜಾಗತಿಕ ಕಾರ್ಯಪಡೆ ಚಲನಶೀಲತೆಯನ್ನು ಉತ್ತೇಜಿಸುವುದನ್ನು ಇದು ಒಳಗೊಂಡಿದೆ.
- **ಜಾಗತಿಕ ಮನ್ನಣೆ:** ಅಂತರರಾಷ್ಟ್ರೀಯ ಪ್ರಮಾಣೀಕರಣ ಮಾನದಂಡಗಳು ಮತ್ತು ವೃತ್ತಿಪರ ಶಿಕ್ಷಣದ ಚೌಕಟ್ಟುಗಳೊಂದಿಗೆ ಹೊಂದಾಣಿಕೆ ಸಾಧಿಸುವ ಮೂಲಕ, ಕರ್ನಾಟಕವನ್ನು **"ವಿಶ್ವಕ್ಕೆ ಕೌಶಲ್ಯದ ಹೆಬ್ಬಾಗಿಲು"** ಆಗಿ ರೂಪಿಸುವ ಗುರಿಯನ್ನು ಹೊಂದಿದೆ.

## Fair and Remunerative Price

**News -**

- **CM writes to PM seeking meet to address FRP concerns**

**Sugar Production in India**

- **India became the world's top sugar producer in 2021-2022, surpassing Brazil.**
- **Location of Sugar Industry in India:** Sugar industry is broadly distributed over two major areas of production:

1. **Uttar Pradesh, Bihar, Haryana and Punjab in the north and**
2. **Maharashtra, Karnataka, Tamil Nadu and Andhra Pradesh in the south.**

**Sugarcane - Uses**

- **It belongs to the bamboo family of plants and is indigenous to India.**
- **About two-third of the total sugarcane produced in India is consumed for making gur and khandsari and only one-third of it goes to sugar factories.**
- It also provides **raw material for manufacturing alcohol.**
- **Bagasse,** the crushed cane residue, can be more beneficially used for **manufacturing paper.**
- **Ethanol production** - It is also an efficient substitute for petroleum products and a host of other chemical products.
- **India has become the 3rd largest country in the world in ethanol production after the USA and Brazil.**

**Conditions for growth**

- **Crop duration: 10-15 months, and even 18 months** to mature, depending upon geographical conditions.
- **Soil: Sugarcane can tolerate any kind of soil that can retain moisture. Examples - loams, clayey, black cotton soil, brown or reddish loam and laterites.**
- It should be **rich in nitrogen, calcium and phosphorus.**
- **Climate**: Hot and Humid **(21-27 °C of temperature and 75-150 cm of rainfall).**

## ಕಬ್ಬಿಗೆ - ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP)

**ಇದೀಗ ಸುದ್ದಿಯಲ್ಲಿದೆ:**

- ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP) ಯ ಕಳವಳಗಳನ್ನು ಪರಿಹರಿಸಲು ಸಭೆಯನ್ನು ಸೇರುವಂತೆ ಕೋರಿ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

**ಭಾರತದಲ್ಲಿ ಸಕ್ಕರೆ ಉತ್ಪಾದನೆಯ ಬಗ್ಗೆ:**

- 2021-2022 ರಲ್ಲಿ ಬ್ರೆಜಿಲ್ ಅನ್ನು ಹಿಂದಿಕ್ಕಿ **ಭಾರತ ವಿಶ್ವದಲ್ಲೇ ಅತೀ ಹೆಚ್ಚು ಸಕ್ಕರೆ ಉತ್ಪಾದಕ ರಾಷ್ಟ್ರವಾಯಿತು.**
- **ಭಾರತದಲ್ಲಿ ಸಕ್ಕರೆ ಉದ್ಯಮದ ಸ್ಥಳಗಳು:** ಸಕ್ಕರೆ ಉದ್ಯಮವು ಉತ್ಪಾದನೆಯ ಎರಡು ಪ್ರಮುಖ ಪ್ರದೇಶಗಳಲ್ಲಿ ಹಂಚಿಕೆಯಾಗಿದೆ:
  - ಉತ್ತರದಲ್ಲಿ - **ಉತ್ತರ ಪ್ರದೇಶ, ಬಿಹಾರ, ಹರಿಯಾಣ ಮತ್ತು ಪಂಜಾಬ್.**
  - ದಕ್ಷಿಣದಲ್ಲಿ - **ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶ.**

**ಕಬ್ಬು ಬೆಳೆಯ ಉಪಯೋಗಗಳು:**

- ಇದು **ಬಿದಿರು ಸಸ್ಯ ಕುಟುಂಬಕ್ಕೆ** ಸೇರಿದೆ ಮತ್ತು **ಭಾರತಕ್ಕೆ ಸ್ಥಳೀಯವಾಗಿದೆ.**
- ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಕಬ್ಬಿನ ಸುಮಾರು **ಮೂರನೇ ಎರಡರಷ್ಟು ಭಾಗ ಬೆಲ್ಲ ಮತ್ತು ಖಂಡಸಾರಿ** ತಯಾರಿಕೆಗೆ ಬಳಕೆಯಾದರೆ, ಕೇವಲ ಮೂರನೇ ಒಂದರಷ್ಟು ಭಾಗ ಮಾತ್ರ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜಾಗುತ್ತದೆ.
- ಇದು **ಮದ್ಯದ ತಯಾರಿಕೆಗೆ** ಅಗತ್ಯವಾದ ಕಚ್ಚಾ ವಸ್ತುವನ್ನಾಗಿ ಬಳಸಲಾಗುತ್ತದೆ.
- ಕಬ್ಬಿನ ರಸ ತೆಗೆದ ನಂತರ ಉಳಿಯುವ **ಸಿಪ್ಪೆ (ಬಗಾಸ್)** ಯನ್ನು **ಕಾಗದ ತಯಾರಿಕಾ** ಕೈಗಾರಿಕೆಯಲ್ಲಿ ಹೆಚ್ಚು ಲಾಭದಾಯಕವಾಗಿ ಬಳಸಬಹುದಾಗಿದೆ.
- **ಇಥೆನಾಲ್ ಉತ್ಪಾದನೆ:** ಇದು ಪೆಟ್ರೋಲಿಯಂ ಉತ್ಪನ್ನಗಳಿಗೆ ಮತ್ತು ಇತರ ಹಲವಾರು ರಾಸಾಯನಿಕ ಉತ್ಪನ್ನಗಳಿಗೆ ಒಂದು ಸಮರ್ಥ ಪರ್ಯಾಯವಾಗಿದೆ.
- ಇಥೆನಾಲ್ ಉತ್ಪಾದನೆಯಲ್ಲಿ ಅಮೆರಿಕ ಮತ್ತು ಬ್ರೆಜಿಲ್ ನಂತರ ಭಾರತವು **ವಿಶ್ವದ ಮೂರನೇ ಅತಿದೊಡ್ಡ ರಾಷ್ಟ್ರವಾಗಿ** ಹೊರಹೊಮ್ಮಿದೆ.

**ಕಬ್ಬು ಬೆಳೆಯಲು ಅಗತ್ಯವಾದ ಭೌಗೋಳಿಕ ಪರಿಸ್ಥಿತಿಗಳು:**

- **ಬೆಳೆಯ ಅವಧಿ:** ಭೌಗೋಳಿಕ ಪರಿಸ್ಥಿತಿಗಳನ್ನು ಅವಲಂಬಿಸಿ ಪಕ್ವವಾಗಲು **10-15 ತಿಂಗಳುಗಳು, ಅಥವಾ 18 ತಿಂಗಳುಗಳೂ** ಬೇಕಾಗಬಹುದು.
- **ಮಣ್ಣು: ತೇವಾಂಶವನ್ನು ಉಳಿಸಿಕೊಳ್ಳಬಲ್ಲ** ಯಾವುದೇ ರೀತಿಯ ಮಣ್ಣಿನಲ್ಲಾದರೂ ಕಬ್ಬನ್ನು ಬೆಳೆಯಬಹುದು.
  - **ಉದಾಹರಣೆಗೆ - ಮೆಕ್ಕಲು ಮಣ್ಣು, ಜೇಡಿಮಣ್ಣು, ಕಪ್ಪು ಹತ್ತಿ ಮಣ್ಣು, ಕಂದು ಅಥವಾ ಕೆಂಪು ಮೆಕ್ಕಲು ಮಣ್ಣು ಮತ್ತು ಜಂಬಿಟ್ಟಿಗೆ ಮಣ್ಣು.**
  - ಈ ಮಣ್ಣು **ಸಾರಜನಕ, ಕ್ಯಾಲ್ಸಿಯಂ** ಮತ್ತು **ರಂಜಕದಂತಹ** ಪೋಷಕಾಂಶಗಳಿಂದ ಸಮೃದ್ಧವಾಗಿರಬೇಕು.
- ವಾಯುಗುಣ: ಈ ಬೆಳೆಗೆ **ಉಷ್ಣ ಮತ್ತು ತೇವಾಂಶಭರಿತ** ವಾಯುಗುಣದ ಅಗತ್ಯವಿದ್ದು, **21°C ನಿಂದ 27°C** ತಾಪಮಾನ ಹಾಗೂ **75 ರಿಂದ 150 ಸೆಂ.ಮೀ ಮಳೆಯ** ಅವಶ್ಯಕತೆ ಇರುತ್ತದೆ.


INSTA KAS

**Government steps**

**Fair and Remunerative Price (FRP) of sugarcane**

- **Recommended by** - Commission for Agricultural Costs and Prices (CACP)
- **Objective - to assure margins on account of profit and risk to farmers, irrespective of the fact whether sugar mills generate profit or not.**

## Tenth-century inscription dating to Ganga dynasty reign found on outskirts of Mysuru




**News -**

- **A 10th-century inscription from the Ganga dynasty reign has been found** inside the Mahalingeshwara Temple **at Nadanahalli on the outskirts of Mysuru.**
- It is a Kannada inscription dating back to the **time of Butuga II, a ruler from the ganga dynasty in 948 A.D.**
- It is believed that during the reign of **Butuga II, his bodyguard, Maremma,** may have donated the garden to the temple tax-free and entrusted its management to the village chief Vijaketa Gavunda.

## Karnataka Startup Policy 2025-30

**News -**

- **Cabinet approves policy to help set up 25,000 start-ups in five years**

## Karnataka Startup Policy 2025-30


- **Policy aims to ensure that at least 10,000 of the targeted 25,000 start-ups are set up outside Bengaluru.**

**ಸರ್ಕಾರದ ಕ್ರಮಗಳು:**

**ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ಬಗ್ಗೆ:**

- ಶಿಫಾರಸು ಮಾಡುವವರು:- ಈ ಬೆಲೆಯನ್ನು **'ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗ'ದ** (CACP) ಶಿಫಾರಸಿನ ಮೇರೆಗೆ ನಿರ್ಧರಿಸಲಾಗುತ್ತದೆ.
- **ಉದ್ದೇಶ:** ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿವೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸದೆ, **ರೈತರಿಗೆ ಅವರ ಶ್ರಮಕ್ಕೆ ತಕ್ಕ ಲಾಭ ಹಾಗೂ ಕೃಷಿಯಲ್ಲಿನ ಅಪಾಯವನ್ನು ಸರಿದೂಗಿಸುವಂತಹ ನಿಶ್ಚಿತ ಲಾಭಾಂಶವನ್ನು ಖಾತ್ರಿಪಡಿಸುವುದು** ಇದರ ಉದ್ದೇಶವಾಗಿದೆ.

## ಮೈಸೂರಿನ ಹೊರವಲಯದಲ್ಲಿ ಗಂಗರ ಕಾಲದ 10ನೇ ಶತಮಾನದ ಶಾಸನ ಪತ್ತೆ




**ಇದೀಗ ಸುದ್ದಿಯಲ್ಲಿದೆ:**

- **ಮೈಸೂರಿನ ಹೊರವಲಯದಲ್ಲಿರುವ ನಾಡನಹಳ್ಳಿಯ ಮಹಾಲಿಂಗೇಶ್ವರ ದೇವಾಲಯದ** ಒಳಗೆ ಗಂಗರ **ಕಾಲದ 10ನೇ ಶತಮಾನದ ಶಾಸನವೊಂದು ಪತ್ತೆಯಾಗಿದೆ.**

**ಈ ಶಾಸನದ ಬಗ್ಗೆ ಹೆಚ್ಚಿನ ಮಾಹಿತಿ:**

- ಇದು **ಕ್ರಿ.ಶ. 948** ರ ಗಂಗರ **ದೊರೆ ಇಮ್ಮಡಿ ಬೂತುಗನ ಕಾಲದ ಕನ್ನಡ ಶಾಸನವಾಗಿದೆ.**
- **ಇಮ್ಮಡಿ ಬೂತುಗನ ಆಳ್ವಿಕೆಯ ಸಮಯದಲ್ಲಿ**, ಅವನ ಅಂಗರಕ್ಷಕಿಯಾದ **ಮಾರೆಮ್ಮಳು** ತೋಟವನ್ನು ದೇವಾಲಯಕ್ಕೆ ತೆರಿಗೆ ರಹಿತವಾಗಿ ದಾನ ನೀಡಿರಬಹುದು ಮತ್ತು ಅದರ ನಿರ್ವಹಣೆಯನ್ನು ಗ್ರಾಮದ ಮುಖ್ಯಸ್ಥ **ವಿಜಕೇತ ಗಾವುಂಡನಿಗೆ** ಒಪ್ಪಿಸಿರಬಹುದು ಎಂದು ನಂಬಲಾಗಿದೆ.

## ಕರ್ನಾಟಕ ನವೋದ್ಯಮ ನೀತಿ, 2025-30

**ಇದೀಗ ಸುದ್ದಿಯಲ್ಲಿದೆ:**

- 'ಕರ್ನಾಟಕ ನವೋದ್ಯಮ ನೀತಿ, 2025-30' ಕ್ಕೆ ರಾಜ್ಯ ಸಚಿವ ಸಂಪುಟವು ಅನುಮೋದನೆ ನೀಡಿದ್ದು, **ಇದು ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿ 25,000 ಹೊಸ ನವೋದ್ಯಮಗಳನ್ನು** ಸ್ಥಾಪಿಸುವ ಮಹತ್ವಾಕಾಂಕ್ಷಿ ಗುರಿಯನ್ನು ಹೊಂದಿದೆ.

## ಕರ್ನಾಟಕ ನವೋದ್ಯಮ ನೀತಿ, 2025-30 ರ ಬಗ್ಗೆ:

- **ಗುರಿ**:- ಒಟ್ಟು ಉದ್ದೇಶಿತ 25,000 ನವೋದ್ಯಮಗಳ ಪೈಕಿ, **ಕನಿಷ್ಠ 10,000 ನವೋದ್ಯಮಗಳನ್ನು ಬೆಂಗಳೂರಿನ ಆಚೆಗೆ** ಸ್ಥಾಪನೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು ಈ ನೀತಿಯ ಪ್ರಮುಖ ಗುರಿಯಾಗಿದೆ.

INSTAKAS

## Vision

- To position the state as a global innovation hub, fostering a vibrant and supportive ecosystem for nurturing startups throughout their lifecycle.
- To provide **resources, mentorship, and infrastructure** desired to drive sustainable growth and technological advancements.

## Mission

- Through this policy Karnataka seeks to establish up to **25,000 additional startups, out of which up to 10,000 startups emerging from clusters Beyond Bengaluru.** By expanding the entrepreneurial footprints, the initiative helps the state to enhance its role as a leading innovation hub.
- **Expand innovation hubs, incubation centers, and co-working spaces** to support entrepreneurs across different regions.
- Strengthen **international collaborations, trade partnerships, and global networking opportunities** for startups to expand their reach.

## Resource Mobilisation Committee (RMC) report




**News -**

- **The Resource Mobilisation Committee (RMC) of Karnataka submitted its report in November 2025 recommending comprehensive reforms to boost the state's revenue.**

**The Resource Mobilisation Committee (RMC) of Karnataka,**

- **Formed in - August- 2024**

**ದೃಷ್ಟಿಕೋನ:**

- **ಜಾಗತಿಕ ನಾವೀನ್ಯತಾ ಕೇಂದ್ರ:** ಕರ್ನಾಟಕವನ್ನು 'ಜಾಗತಿಕ ನಾವೀನ್ಯತಾ ಕೇಂದ್ರವನ್ನಾಗಿ' ರೂಪಿಸುವುದು ಮತ್ತು ನವೋದ್ಯಮಗಳ ಸಂಪೂರ್ಣ ಅವಧಿಯಲ್ಲಿ ಅವುಗಳನ್ನು ಪೋಷಿಸಲು ಪೂರಕವಾದ ಹಾಗೂ ಚೈತನ್ಯದಾಯಕ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು.
- **ಮೂಲಸೌಕರ್ಯ, ಮಾರ್ಗದರ್ಶನ ಮತ್ತು ಸಂಪನ್ಮೂಲ:** ಸುಸ್ಥಿರ ಬೆಳವಣಿಗೆ ಮತ್ತು ತಾಂತ್ರಿಕ ಪ್ರಗತಿಯನ್ನು ಸಾಧಿಸಲು ಅತ್ಯಗತ್ಯವಾದ ಸಂಪನ್ಮೂಲಗಳು, ಮಾರ್ಗದರ್ಶನ ಮತ್ತು ಮೂಲಸೌಕರ್ಯಗಳನ್ನು ಒದಗಿಸುವುದು.

**ಧ್ಯೇಯ:**

- **ಬೆಂಗಳೂರಿನ ಆಚೆಗಿನ ವಲಯಗಳು:** ಈ ನೀತಿಯ ಅಡಿಯಲ್ಲಿ **25,000** ಹೆಚ್ಚುವರಿ ಹೊಸ ನವೋದ್ಯಮಗಳನ್ನು ಸ್ಥಾಪಿಸಲು ರಾಜ್ಯವು ಬದ್ಧವಾಗಿದೆ. ಇದರಲ್ಲಿ **10,000** ನವೋದ್ಯಮಗಳು 'ಬೆಂಗಳೂರಿನ ಆಚೆಗಿನ' ವಲಯಗಳಲ್ಲಿ ಆರಂಭವಾಗಲಿವೆ.
- **ಉದ್ಯಮಶೀಲತೆಯ ವಿಸ್ತರಣೆ:** ಉದ್ಯಮಶೀಲತೆಯ ಹೆಜ್ಜೆಗುರುತುಗಳನ್ನು ರಾಜ್ಯದಾದ್ಯಂತ ವಿಸ್ತರಿಸುವ ಮೂಲಕ, ಪ್ರಮುಖ ನಾವೀನ್ಯತಾ ಕೇಂದ್ರವಾಗಿ ಕರ್ನಾಟಕದ ಸ್ಥಾನಮಾನವನ್ನು ಮತ್ತಷ್ಟು ಉನ್ನತೀಕರಿಸುವುದು.
- **ಬೆಂಬಲಿತ ವ್ಯವಸ್ಥೆ:** ವಿವಿಧ ಪ್ರದೇಶಗಳಲ್ಲಿ ಉದ್ಯಮಿಗಳಿಗೆ ಉತ್ತೇಜನ ನೀಡಲು ನಾವೀನ್ಯತಾ ಕೇಂದ್ರಗಳು, ಇನ್ಕ್ಯುಬೇಷನ್ ಕೇಂದ್ರಗಳು ಮತ್ತು ಸಹ-ಕೆಲಸದ ಸ್ಥಳಗಳನ್ನು ವಿಸ್ತರಿಸುವುದು.
- **ಜಾಗತಿಕ ಸಂಪರ್ಕ:** ನವೋದ್ಯಮಗಳು ತಮ್ಮ ವ್ಯಾಪ್ತಿಯನ್ನು ವಿಶ್ವಮಟ್ಟದಲ್ಲಿ ವಿಸ್ತರಿಸಿಕೊಳ್ಳಲು, ಅಂತರರಾಷ್ಟ್ರೀಯ ಸಹಯೋಗಗಳು, ವಾಣಿಜ್ಯ ಪಾಲುದಾರಿಕೆಗಳು ಮತ್ತು ಜಾಗತಿಕ ಸಂಪರ್ಕ ಜಾಲದ ಅವಕಾಶಗಳನ್ನು ಬಲಪಡಿಸುವುದು

## ಸಂಪನ್ಮೂಲ ಕ್ರೂಢೀಕರಣ ಸಮಿತಿ (RMC) ಯ ವರದಿ




**ಇದೀಗ ಸುದ್ದಿಯಲ್ಲಿದೆ:**

- ಕರ್ನಾಟಕದ ಸಂಪನ್ಮೂಲ ಕ್ರೂಢೀಕರಣ ಸಮಿತಿಯು (RMC) ರಾಜ್ಯದ **ರಾಜಸ್ವವನ್ನು (ಆದಾಯ) ಹೆಚ್ಚಿಸಲು** ಸಮಗ್ರ ಸುಧಾರಣೆಗಳನ್ನು ಶಿಫಾರಸು ಮಾಡಲು, ನವೆಂಬರ್ 2025 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು.

**ಕರ್ನಾಟಕದ ಸಂಪನ್ಮೂಲ ಕ್ರೂಢೀಕರಣ ಸಮಿತಿ (RMC) ಯ ಬಗ್ಗೆ:**

- **ರಚನೆ** - ಆಗಸ್ಟ್- 2024.

- **Headed by** - The committee headed by retired **IAS officer K.P. Krishnan**
- **Mandate** - It is a government-appointed body **recommending comprehensive reforms to boost the state's revenue.**

**Key recommendations**

- **Increase and rationalize user charges:** Rationalize and increase user charges for government services and utilities, transitioning to volumetric billing with automatic inflation indexation.
- **Tax reforms**: Restructure the tax regime **to broaden the tax base** and reduce the state's dependence on a few sources like commercial taxes and **excise duties.**
- **Modernize the excise system:** Introduce auction-based **digital licensing to enhance transparency and efficiency in the excise sector.**
- **Asset monetization:** Unlock the value of government assets through scientific valuation and leasing under public-private partnerships.
- **Strengthen asset management:** Improve asset data management and conduct systematic surveys of government properties.
- **Create an economic policy wing**: Establish a new wing within the finance department to monitor non-tax revenues and oversee asset monetization initiatives.
- **Urban land monetisation** among steps to shore up revenues

## Krishi Mela 2025




- **ನೇತೃತ್ವ** - ನಿವೃತ್ತ ಐಎಎಸ್ ಅಧಿಕಾರಿ **ಕೆ.ಪಿ. ಕೃಷ್ಣನ್** ಅವರ ನೇತೃತ್ವದ ಸಮಿತಿ.
- **ಕಾರ್ಯವ್ಯಾಪ್ತಿ** - ಇದು ರಾಜ್ಯದ **ರಾಜಸ್ವವನ್ನು ಹೆಚ್ಚಿಸಲು** ಸಮಗ್ರ ಸುಧಾರಣೆಗಳನ್ನು ಶಿಫಾರಸು ಮಾಡುವ ಸರ್ಕಾರ ನೇಮಿಸಿದ ಸಮಿತಿಯಾಗಿದೆ.

**ಪ್ರಮುಖ ಶಿಫಾರಸುಗಳು**

- **ಬಳಕೆದಾರರ ಶುಲ್ಕಗಳ ಹೆಚ್ಚಳ ಮತ್ತು ತರ್ಕಬದ್ಧಗೊಳಿಸುವಿಕೆ:** ಸರ್ಕಾರಿ ಸೇವೆ ಮತ್ತು ಸೌಲಭ್ಯಗಳಿಗೆ ವಿಧಿಸುವ ಶುಲ್ಕಗಳನ್ನು ತರ್ಕಬದ್ಧಗೊಳಿಸುವುದು ಮತ್ತು ಹೆಚ್ಚಿಸುವುದು. ಸ್ವಯಂಚಾಲಿತ ಹಣದುಬ್ಬರ ಸೂಚ್ಯಂಕದೊಂದಿಗೆ ಕೂಡಿದ **ಗಾತ್ರಾಧಾರಿತ ಶುಲ್ಕ ಪದ್ಧತಿಗೆ** ಬದಲಾಗುವುದು.
- **ತೆರಿಗೆ ಸುಧಾರಣೆಗಳು: ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸಲು** ಮತ್ತು ವಾಣಿಜ್ಯ ತೆರಿಗೆಗಳು ಹಾಗೂ ಅಬಕಾರಿ ಸುಂಕಗಳಂತಹ ಕೆಲವೇ ಮೂಲಗಳ ಮೇಲಿನ ರಾಜ್ಯದ ಅವಲಂಬನೆಯನ್ನು ಕಡಿಮೆ ಮಾಡಲು ತೆರಿಗೆ ಪದ್ಧತಿಯನ್ನು ಪುನಾರಚಿಸುವುದು.
- **ಅಬಕಾರಿ ವ್ಯವಸ್ಥೆಯ ಆಧುನೀಕರಣ:** ಅಬಕಾರಿ ವಲಯದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು **ಹರಾಜು ಆಧಾರಿತ ಡಿಜಿಟಲ್ ಪರವಾನಗಿಯನ್ನು** ಪರಿಚಯಿಸುವುದು.
- **ಆಸ್ತಿ ನಗದೀಕರಣ:** ಸರ್ಕಾರಿ ಆಸ್ತಿಗಳ ವೈಜ್ಞಾನಿಕ ಮೌಲ್ಯಮಾಪನ ನಡೆಸಿ, **ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP)** ಅಡಿಯಲ್ಲಿ **ಗುತ್ತಿಗೆ** ನೀಡುವ ಮೂಲಕ ಆಸ್ತಿಗಳ ಮೌಲ್ಯವನ್ನು ವರ್ಧಿಸುವುದು.
- **ಆಸ್ತಿ ನಿರ್ವಹಣೆಯನ್ನು ಬಲಪಡಿಸುವುದು:** ಆಸ್ತಿ ದತ್ತಾಂಶ ನಿರ್ವಹಣೆಯನ್ನು ಸುಧಾರಿಸುವುದು ಮತ್ತು ಸರ್ಕಾರಿ ಆಸ್ತಿಗಳ ವ್ಯವಸ್ಥಿತ ಸಮೀಕ್ಷೆಗಳನ್ನು ನಡೆಸುವುದು.
- **ಆರ್ಥಿಕ ನೀತಿ ವಿಭಾಗದ ಸ್ಥಾಪನೆ:** ತೆರಿಗೆಯೇತರ ರಾಜಸ್ವವನ್ನು ಮೇಲ್ವಿಚಾರಣೆ ಮಾಡಲು ಮತ್ತು ಆಸ್ತಿ ನಗದೀಕರಣ ಉಪಕ್ರಮಗಳ ಉಸ್ತುವಾರಿ ನೋಡಿಕೊಳ್ಳಲು **ಹಣಕಾಸು ಇಲಾಖೆಯ** ಅಡಿಯಲ್ಲಿ ಪ್ರತ್ಯೇಕ 'ಆರ್ಥಿಕ ನೀತಿ ವಿಭಾಗ'ವನ್ನು ಸ್ಥಾಪಿಸುವುದು.
- **ನಗರ ಭೂಮಿ ನಗದೀಕರಣ:** ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸುವ ಕ್ರಮಗಳ ಭಾಗವಾಗಿ 'ನಗರ ಭೂಮಿ ನಗದೀಕರಣ'ಕ್ಕೂ ಒತ್ತು ನೀಡಲಾಗಿದೆ.

## ಕೃಷಿ ಮೇಳ, 2025




INSTAKAS

**News -**

- **Krishi Mela 2025 was** conducted by the **University of Agricultural Sciences-Bangalore** from November 13 to 16 on the GKVK campus in Bengaluru.
- **2025 theme 'Prosperous Agriculture – Viksit Bharat: Soil, Water, and Crop',**

## Domestic Workers (Social Security and Welfare) Bill, 2025

**News -**

- The Karnataka Domestic Workers' Rights Union has urged the State government **to strengthen the proposed Domestic Workers (Social Security and Welfare) Bill, 2025,**

**The Domestic Workers (Social Security and Welfare) Bill, 2025**

- **Aim - It is aimed at formalizing the domestic work sector and providing social security and welfare benefits to an estimated 15 lakh (1.5 million) domestic workers.**

**Key Provisions of the Draft Bill**

- **Mandatory Registration:** Both domestic workers and their employers (including households, agencies, and digital platforms) **are required to register on a government portal.**
- **Written Employment Agreements**: Employers must provide a **written contract specifying wages, working hours, benefits, and conditions of work.** Unregistered employment is considered illegal.
- **Minimum Wages and Working Hours:** Workers are entitled **to a minimum wage, with a cap of 48 working hours per week, overtime pay, rest periods, and weekly holidays.**
- **Social Security and Welfare Board:** The bill provides for the creation of a **Karnataka State Domestic Workers Social Security and Welfare Board** to manage a d**edicated fund.** This fund would provide benefits such as health insurance, maternity/paternity benefits, pension, accident compensation, and education support for children.

**ಇದೀಗ ಸುದ್ದಿಯಲ್ಲಿದೆ:**

- **ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯವು**, ನವೆಂಬರ್ 13 ರಿಂದ 16 ರವರೆಗೆ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ **'ಕೃಷಿ ಮೇಳ 2025'** ಅನ್ನು ಆಯೋಜಿಸಿತ್ತು.
- 2025 ರ ಧ್ಯೇಯವಾಕ್ಯ: **'ಸಮೃದ್ಧ ಕೃಷಿ – ವಿಕಸಿತ ಭಾರತ: ನೆಲ, ಜಲ, ಬೆಳೆ'.**

## ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ, 2025

**ಇದೀಗ ಸುದ್ದಿಯಲ್ಲಿದೆ:**

- ರಾಜ್ಯ ಸರ್ಕಾರ ಪ್ರಸ್ತಾಪಿಸಿರುವ 'ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ-2025' ಅನ್ನು ಮತ್ತಷ್ಟು ಬಲಪಡಿಸುವಂತೆ 'ಕರ್ನಾಟಕ ಗೃಹ ಕಾರ್ಮಿಕರ ಹಕ್ಕುಗಳ ಒಕ್ಕೂಟ'ವು ಸರ್ಕಾರವನ್ನು ಒತ್ತಾಯಿಸಿದೆ.

**ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ, 2025 ರ ಬಗ್ಗೆ:**

- ಪ್ರಸ್ತುತ ಅಸಂಘಟಿತ (ಅನೌಪಚಾರಿಕ) ವಾಗಿರುವ ಗೃಹ ಕೆಲಸದ ವಲಯವನ್ನು **ಸಂಘಟಿತ (ಔಪಚಾರಿಕ)** ಗೊಳಿಸುವುದು ಮತ್ತು ರಾಜ್ಯದ ಅಂದಾಜು **15 ಲಕ್ಷ ಗೃಹ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸವಲತ್ತುಗಳನ್ನು** ಒದಗಿಸುವುದು ಈ ಮಸೂದೆಯ ಪ್ರಮುಖ ಗುರಿಯಾಗಿದೆ.


**ಕರಡು ಮಸೂದೆಯ ಪ್ರಮುಖ ನಿಬಂಧನೆಗಳು**

- **ಕಡ್ಡಾಯ ನೋಂದಣಿ:** ಗೃಹ ಕಾರ್ಮಿಕರು ಮತ್ತು ಅವರನ್ನು ನೇಮಿಸಿಕೊಳ್ಳುವ ಉದ್ಯೋಗದಾತರು (ಗೃಹ ಮಾಲೀಕರು, ಏಜೆನ್ಸಿಗಳು ಮತ್ತು ಡಿಜಿಟಲ್ ವೇದಿಕೆಗಳು ಸೇರಿದಂತೆ) ನಿಗದಿತ **ಸರ್ಕಾರಿ ಪೋರ್ಟಲ್‌ನಲ್ಲಿ** ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.
- **ಕಡ್ಡಾಯ ಲಿಖಿತ ಉದ್ಯೋಗ ಒಪ್ಪಂದಗಳು:** ಉದ್ಯೋಗದಾತರು ಕಾರ್ಮಿಕರಿಗೆ ವೇತನ, ಕೆಲಸದ ಅವಧಿ, ಸೌಲಭ್ಯಗಳು ಮತ್ತು ಕೆಲಸದ ಷರತ್ತುಗಳನ್ನು ಸ್ಪಷ್ಟಪಡಿಸುವ ಲಿಖಿತ ಒಪ್ಪಂದವನ್ನು ಕಡ್ಡಾಯವಾಗಿ ನೀಡಬೇಕು. ನೋಂದಾಯಿಸದ ಉದ್ಯೋಗವನ್ನು ಕಾನೂನುಬಾಹಿರ ಎಂದು ಪರಿಗಣಿಸಲಾಗುತ್ತದೆ.
- **ಕಡ್ಡಾಯವಾಗಿ ಕನಿಷ್ಠ ವೇತನ ಮತ್ತು ಕೆಲಸದ ಅವಧಿ:** ಕಾರ್ಮಿಕರು ನಿಗದಿತ ಕನಿಷ್ಠ ವೇತನಕ್ಕೆ ಅರ್ಹರಾಗಿರುತ್ತಾರೆ. **ವಾರಕ್ಕೆ ಗರಿಷ್ಠ 48 ಗಂಟೆಗಳ** ಕೆಲಸದ ಅವಧಿ, ಅಧಿಕ ಅವಧಿಯ ಕೆಲಸಕ್ಕೆ ವೇತನ , ವಿಶ್ರಾಂತಿ ಅವಧಿಗಳು ಮತ್ತು ವಾರಕ್ಕೊಮ್ಮೆ ರಜೆ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.
- **ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಂಡಳಿ:** ಕಲ್ಯಾಣ ನಿಧಿಯನ್ನು ನಿರ್ವಹಿಸಲು **'ಕರ್ನಾಟಕ ರಾಜ್ಯ ಗೃಹ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಂಡಳಿ'**ಯನ್ನು ಸ್ಥಾಪಿಸಲು ಈ ಮಸೂದೆ ಅವಕಾಶ ಕಲ್ಪಿಸುತ್ತದೆ. ಈ ನಿಧಿಯ ಮೂಲಕ ಆರೋಗ್ಯ ವಿಮೆ, ಹೆರಿಗೆ/ಪಿತೃತ್ವ ಸವಲತ್ತುಗಳು, ಪಿಂಚಣಿ, ಅಪಘಾತ ಪರಿಹಾರ ಮತ್ತು ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಧನಸಹಾಯದಂತಹ ಪ್ರಯೋಜನಗಳನ್ನು ಒದಗಿಸಲಾಗುತ್ತದೆ.

INSTAKAS

- **Penalties: Non-compliance can result in fines and imprisonment for employers** or agencies. Severe offenses like child labor or human trafficking carry stricter penalties (up to 7 years imprisonment and a ₹50,000 fine).
- **Grievance Redressal: District-level committees are** proposed to resolve disputes between workers and employers.

## High-powered committee formed to review functioning of prisons in State




**News-**

- A high-powered committee has been constituted to **review the functioning, administration, and security of prisons across Karnataka**, following reports of illegal activities and preferential treatment at the Parappana Agrahara Central Prison.
- A high-powered committee would be **led by Additional Director-General of Police (Law and Order) Hitendra,** with Inspector-General of Police **Sandeep Patil**, Superintendents of Police **Amarnath Reddy and Rishyanth,** as members.

## Karnataka records 24% drop in maternal deaths

**News -**

- Karnataka has recorded a **24% reduction in maternal deaths this year — from January to October** —compared to the corresponding period in 2024.
- The Health Department had launched the "**Mission Zero Preventable Maternal Deaths"** initiative.

- **ದಂಡನೆಗಳು :** ಮಸೂದೆಯ ನಿಯಮಗಳನ್ನು ಪಾಲಿಸದ ಉದ್ಯೋಗದಾತರು ಅಥವಾ ಏಜೆನ್ಸಿಗಳಿಗೆ **ದಂಡ ಮತ್ತು ಜೈಲು** ಶಿಕ್ಷೆಯನ್ನು ವಿಧಿಸಲು ಅವಕಾಶವಿದೆ. ಬಾಲ ಕಾರ್ಮಿಕ ಪದ್ಧತಿ ಅಥವಾ ಮಾನವ ಕಳ್ಳಸಾಗಣೆಯಂತಹ ಗಂಭೀರ ಅಪರಾಧಗಳಿಗೆ ಕಠಿಣ ಶಿಕ್ಷೆಯನ್ನು **(7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹50,000 ದಂಡ)** ಪ್ರಸ್ತಾಪಿಸಲಾಗಿದೆ.
- **ಕುಂದುಕೊರತೆ ನಿವಾರಣೆ :** ಕಾರ್ಮಿಕರು ಮತ್ತು ಉದ್ಯೋಗದಾತರ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸಲು **ಜಿಲ್ಲಾ ಮಟ್ಟದ ಸಮಿತಿಗಳನ್ನು** ರಚಿಸಲು ಪ್ರಸ್ತಾಪಿಸಲಾಗಿದೆ.

## ರಾಜ್ಯದ ಕಾರಾಗೃಹಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚನೆ




**ಇದೀಗ ಸುದ್ದಿಯಲ್ಲಿದೆ:**

- ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿನ ಅಕ್ರಮ ಚಟುವಟಿಕೆಗಳು ಮತ್ತು ವಿಶೇಷ ಆತಿಥ್ಯದ ವರದಿಗಳ ನಂತರ, ಕರ್ನಾಟಕದಾದ್ಯಂತ **ಕಾರಾಗೃಹಗಳ ಕಾರ್ಯನಿರ್ವಹಣೆ,** ಆಡಳಿತ ಮತ್ತು ಭದ್ರತೆಯನ್ನು ಪರಿಶೀಲಿಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

**ಉನ್ನತ ಮಟ್ಟದ ಸಮಿತಿಯ ಸದಸ್ಯರು:**

- ಅಧ್ಯಕ್ಷತೆ:- **ಹಿತೇಂದ್ರ** (ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ)).
- ಇತರೆ ಸದಸ್ಯರು:
  - **ಸಂದೀಪ್ ಪಾಟೀಲ್** (ಪೊಲೀಸ್ ಮಹಾನಿರೀಕ್ಷಕ).
  - **ಅಮರನಾಥ್ ರೆಡ್ಡಿ ಮತ್ತು ರಿಷ್ಯಂತ್** (ಪೊಲೀಸ್ ವರಿಷ್ಠಾಧಿಕಾರಿಗಳು)

## ಕರ್ನಾಟಕದಲ್ಲಿ ತಾಯಿಯ ಮರಣದ ಪ್ರಮಾಣದಲ್ಲಿ ಶೇ. 24 ರಷ್ಟು ಇಳಿಕೆಯ ದಾಖಲು

**ಇದೀಗ ಸುದ್ದಿಯಲ್ಲಿದೆ:**

- **ಕರ್ನಾಟಕದಲ್ಲಿ ತಾಯಿಯ ಮರಣದ ಸಂಖ್ಯೆಯಲ್ಲಿ ಕಳೆದ ವರ್ಷದ (2024) ಇದೇ ಅವಧಿಗೆ ಹೋಲಿಸಿದರೆ, ಪ್ರಸಕ್ತ ವರ್ಷದ ಜನವರಿಯಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಶೇ. 24 ರಷ್ಟು ಇಳಿಕೆಯು ದಾಖಲಾಗಿದೆ.**
- ರಾಜ್ಯ ಆರೋಗ್ಯ ಇಲಾಖೆಯು ಜಾರಿಗೊಳಿಸಿದ **"ತಡೆಗಟ್ಟಬಹುದಾದ ತಾಯಿಯ ಮರಣವನ್ನು ಶೂನ್ಯಕ್ಕೆ ತರುವ ಗುರಿ"** ಎಂಬ ಮಹತ್ವಾಕಾಂಕ್ಷಿ ಉಪಕ್ರಮವು ಇದಕ್ಕೆ ಪ್ರಮುಖ ಕಾರಣವಾಗಿದೆ.

## Mission Zero Preventable Maternal Deaths

- **It** is an initiative launched by the state of Karnataka, India
- **Objective - to reduce its maternal mortality rate (MMR).**
- **Maternal mortality ratio (MMR) for Karnataka is 68 maternal deaths per 100,000 live births,** as per the Sample Registration System (SRS) Special Bulletin for 2021-2023.
- The mission aims **to eliminate all preventable maternal deaths by enhancing healthcare infrastructure, services, and monitoring.**

### Key Components of the Initiative

- The initiative, also integrated into India's national **Surakshit Matritva Aashwasan (SUMAN) program,** focuses on a multi-pronged strategy **to ensure quality and accessible care.**
- **Infrastructure and Resource Rationalization**: The plan involves strengthening all 147 taluk hospitals and 42 well-performing community health centers (CHCs) to provide 24/7 comprehensive emergency obstetric and newborn care (CEmONC) services.
- **Targeting High-Risk Pregnancies**: A significant portion of maternal deaths (an estimated 70% in Karnataka) are considered preventable. The mission emphasizes the identification and rigorous tracking of high-risk pregnancies, ensuring timely intervention for complications like hemorrhage, hypertensive disorders, and anemia.
- **Financial and Nutritional Support:** The initiative includes provisions for nutritional kits and cash incentives for pregnant and lactating women from low socioeconomic backgrounds.

**"ತಡೆಗಟ್ಟಬಹುದಾದ ತಾಯಿಯ ಮರಣವನ್ನು ಶೂನ್ಯಕ್ಕೆ ತರುವ ಗುರಿ"ಯ ಬಗ್ಗೆ:**

- ಇದು ಕರ್ನಾಟಕ ರಾಜ್ಯ **ಆರೋಗ್ಯ ಇಲಾಖೆಯು** ಪ್ರಾರಂಭಿಸಿದ ಒಂದು ಪ್ರಮುಖ ಆರೋಗ್ಯ ಉಪಕ್ರಮವಾಗಿದೆ.
- ಉದ್ದೇಶ: ರಾಜ್ಯದ **ತಾಯಿಯ ಮರಣ ದರದ ಪ್ರಮಾಣವನ್ನು (MMR) ತಗ್ಗಿಸುವುದು** ಇದರ ಮೂಲ ಉದ್ದೇಶವಾಗಿದೆ.
- **ಪ್ರಸ್ತುತ ಸ್ಥಿತಿ:** ಮಾದರಿ ನೋಂದಣಿ ವ್ಯವಸ್ಥೆಯ (SRS) 2021-2023 ರ ವಿಶೇಷ ವರದಿಯ ಪ್ರಕಾರ, ಕರ್ನಾಟಕದ ತಾಯಿಯ ಮರಣ ದರದ ಪ್ರಮಾಣವು (MMR) **ಪ್ರತಿ 100,000 ಜೀವಂತ ಜನನಗಳಿಗೆ 68 ರಷ್ಟಿದೆ.**
- **ಗುರಿ:** ಆರೋಗ್ಯ ಮೂಲಸೌಕರ್ಯ, ಸೇವೆಗಳು ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ, **ತಡೆಗಟ್ಟಬಹುದಾದ ಎಲ್ಲಾ ರೀತಿಯ ತಾಯಿಯ ಮರಣಗಳನ್ನು ಸಂಪೂರ್ಣವಾಗಿ ತಡೆಗಟ್ಟುವುದು** ಇದರ ಗುರಿಯಾಗಿದೆ.

**ಈ ಉಪಕ್ರಮದ ಪ್ರಮುಖ ಅಂಶಗಳು:**

- ಕೇಂದ್ರ ಸರ್ಕಾರದ **ರಾಷ್ಟ್ರೀಯ 'ಸುರಕ್ಷಿತ ಮಾತೃತ್ವ ಆಶ್ವಾಸನ್' (SUMAN)** ಯೋಜನೆಯೊಂದಿಗೆ ಸಂಯೋಜನೆಗೊಂಡಿರುವ ಈ ಉಪಕ್ರಮವು, ಗುಣಮಟ್ಟದ ಮತ್ತು ಸುಲಭವಾಗಿ ಲಭ್ಯವಾಗುವ ಆರೋಗ್ಯ ಸೇವೆಯನ್ನು ಖಾತ್ರಿಪಡಿಸಲು ಬಹುಮುಖಿ ಕಾರ್ಯತಂತ್ರದ ಮೇಲೆ ಗಮನಹರಿಸುತ್ತದೆ.
- **ಮೂಲಸೌಕರ್ಯ ಮತ್ತು ಸಂಪನ್ಮೂಲಗಳ ತರ್ಕಬದ್ಧಗೊಳಿಸುವಿಕೆ:** ರಾಜ್ಯದ ಎಲ್ಲಾ 147 ತಾಲೂಕು ಆಸ್ಪತ್ರೆಗಳು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 42 ಸಮುದಾಯ ಆರೋಗ್ಯ ಕೇಂದ್ರಗಳನ್ನು (CHCs) ಬಲಪಡಿಸುವುದು ಇದರ ಭಾಗವಾಗಿದೆ. ಇಲ್ಲಿ ದಿನದ 24 ಗಂಟೆಯೂ ಲಭ್ಯವಿರುವ **'ಸಮಗ್ರ ತುರ್ತು ಪ್ರಸೂತಿ ಮತ್ತು ನವಜಾತ ಶಿಶು ಆರೈಕೆ'** (CEmONC) ಸೇವೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.
- **ಅಧಿಕ ಅಪಾಯದ ಗರ್ಭಧಾರಣೆಗಳ ನಿರ್ವಹಣೆ:** ಕರ್ನಾಟಕದಲ್ಲಿ ಸಂಭವಿಸುವ ತಾಯಿ ಮರಣಗಳಲ್ಲಿ ಬಹುಪಾಲು **(ಅಂದಾಜು 70%) ತಡೆಗಟ್ಟಬಹುದು.** ಹೀಗಾಗಿ, ಈ ಗುರಿಯು ಅಧಿಕ ಅಪಾಯದ ಗರ್ಭಧಾರಣೆಗಳನ್ನು ತ್ವರಿತವಾಗಿ ಗುರುತಿಸಲು ಮತ್ತು ಅವುಗಳ ಮೇಲೆ ಕಟ್ಟುನಿಟ್ಟಿನ ನಿಗಾ ಇರಿಸಲು ಒತ್ತು ನೀಡುತ್ತದೆ. ರಕ್ತಸ್ರಾವ, ಅಧಿಕ ರಕ್ತದೊತ್ತಡದ ಅಸ್ವಸ್ಥತೆಗಳು ಮತ್ತು ರಕ್ತಹೀನತೆಯಂತಹ ಗಂಭೀರ ತೊಡಕುಗಳಿಗೆ ಸಮಯೋಚಿತ ಚಿಕಿತ್ಸೆಯನ್ನು ಇದು ಖಚಿತಪಡಿಸುತ್ತದೆ.
- **ಆರ್ಥಿಕ ಮತ್ತು ಪೌಷ್ಟಿಕಾಂಶದ ಬೆಂಬಲ:** ಈ ಯೋಜನೆಯಡಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ **ಹಿಂದುಳಿದ ವರ್ಗಗಳ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಗತ್ಯವಿರುವ ಪೌಷ್ಟಿಕಾಂಶದ ಪೊಟ್ಟಣ ಹಾಗೂ ನಗದು ಪ್ರೋತ್ಸಾಹಧನವನ್ನು** ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

INSTA KAS

## "Koti Vruksha Abhiyan"

- **"Koti Vruksha Abhiyan"** has pushed up the **forest cover of Vijayapura district.**

**"Koti Vruksha Abhiyan" (One Crore Tree Campaign)**

- It is a **large-scale tree plantation initiative** primarily associated with **Vijayapura, Karnataka,** aimed at transforming the district's arid landscape.
- **Launched in 2015 by Minister M. B. Patil.**
- The program has successfully **planted over 15 million trees by encouraging community participation through subsidized saplings**
- This effort has **significantly increased the district's forest cover, revived ecosystems, brought back wildlife, and inspired other regions.**

## CM inaugurates Kalaloka store at KIA

**News -**

- **The Kalaloka store,** which will showcase and sell **Karnataka's traditional and GI-certified products to both domestic and international travellers at the Kempegowda International Airport (KIA).**
- The Kalaloka store, which has been **aesthetically designed to reflect the State's culture and heritage, has been set up by the Department of Industries at Terminal 2.**
- It features Karnataka's traditional products such as **Mysore Sandal Soap, sandalwood oil, incense sticks, Mysuru Silk, Channapatna toys, LIDKAR leather goods, aromatic coffee powders and beverages, handloom products, Ilkal sarees, Lambani garments, sandalwood artefacts, Bidriware, and Mysore-style paintings.**

## ಕೋಟಿ ವೃಕ್ಷ ಅಭಿಯಾನ

**ಇದೀಗ ಸುದ್ದಿಯಲ್ಲಿದೆ:**

- **"ಕೋಟಿ ವೃಕ್ಷ ಅಭಿಯಾನ"ದ ಪರಿಣಾಮವಾಗಿ ವಿಜಯಪುರ ಜಿಲ್ಲೆಯ ಅರಣ್ಯ ವ್ಯಾಪ್ತಿಯಲ್ಲಿ ಗಣನೀಯ ಪ್ರಮಾಣದ ಏರಿಕೆ ಕಂಡುಬಂದಿದೆ.**

**ಕೋಟಿ ವೃಕ್ಷ ಅಭಿಯಾನದ ಬಗ್ಗೆ:**

- **ಸ್ವರೂಪ:** "ಕೋಟಿ ವೃಕ್ಷ ಅಭಿಯಾನ" (ಒಂದು ಕೋಟಿ ಮರಗಳ ಅಭಿಯಾನ) ಎಂಬುದು **ವಿಜಯಪುರ ಜಿಲ್ಲೆಗೆ ಸಂಬಂಧಿಸಿದ ಬೃಹತ್ ಪ್ರಮಾಣದ ಮರ ನೆಡುವ ಉಪಕ್ರಮವಾಗಿದೆ.** ಜಿಲ್ಲೆಯ ಶುಷ್ಕ ಭೂಪ್ರದೇಶವನ್ನು ಹಸಿರುಮಯವಾಗಿ ಪರಿವರ್ತಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.
- ಆರಂಭ: ಈ ಅಭಿಯಾನಕ್ಕೆ **2015 ರಲ್ಲಿ ಸಚಿವರಾದ ಎಂ. ಬಿ. ಪಾಟೀಲ್** ಅವರು ಚಾಲನೆ ನೀಡಿದರು.
- ಸಾಧನೆ: ರಿಯಾಯಿತಿ ದರದಲ್ಲಿ ಸಸಿಗಳನ್ನು ವಿತರಿಸುವ ಮೂಲಕ ಸಮುದಾಯದ ಸಹಭಾಗಿತ್ವವನ್ನು ಉತ್ತೇಜಿಸಲಾಯಿತು. ಈ ಕಾರ್ಯಕ್ರಮದ ಅಡಿಯಲ್ಲಿ **1.5 ಕೋಟಿಗೂ ಹೆಚ್ಚು ಮರಗಳನ್ನು** ಯಶಸ್ವಿಯಾಗಿ ನೆಡಲಾಗಿದೆ.
- **ಪರಿಣಾಮ:** ಈ ಮಹತ್ವದ ಪ್ರಯತ್ನವು ಜಿಲ್ಲೆಯ ಅರಣ್ಯ ವ್ಯಾಪ್ತಿಯನ್ನು ವಿಸ್ತರಿಸಿದ್ದಲ್ಲದೆ, ಜೀವಿ ಪರಿಸರ ವ್ಯವಸ್ಥೆಗಳನ್ನು ಪುನರುಜ್ಜೀವನಗೊಳಿಸಿದೆ. ಅಷ್ಟೇ ಅಲ್ಲದೆ, ಇದು ವನ್ಯಜೀವಿಗಳ ಆವಾಸಸ್ಥಾನಗಳ ಮರುಸ್ಥಾಪನೆಗೆ ಕಾರಣವಾಗಿದೆ ಮತ್ತು ಇತರ ಪ್ರದೇಶಗಳಿಗೆ ಮಾದರಿಯಾಗಿ ಸ್ಫೂರ್ತಿ ನೀಡಿದೆ.

## ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (KIA) ದಲ್ಲಿ 'ಕಲಾಲೋಕ' ಮಳಿಗೆ ಉದ್ಘಾಟನೆ

**ಇದೀಗ ಸುದ್ದಿಯಲ್ಲಿದೆ:**

- **ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (KIA) ದಲ್ಲಿ, ದೇಶೀಯ ಹಾಗೂ ವಿದೇಶಿ ಪ್ರಯಾಣಿಕರಿಗೆ ರಾಜ್ಯದ ಸಾಂಪ್ರದಾಯಿಕ ಮತ್ತು ಭೌಗೋಳಿಕ ಸೂಚ್ಯಂಕ (GI) ಮಾನ್ಯತೆ ಪಡೆದ ಉತ್ಪನ್ನಗಳನ್ನು ಪರಿಚಯಿಸುವ ಹಾಗೂ ಮಾರಾಟ ಮಾಡುವ ಉದ್ದೇಶದಿಂದ 'ಕಲಾಲೋಕ' ಮಳಿಗೆಯನ್ನು ಪ್ರಾರಂಭಿಸಲಾಗಿದೆ.**

**'ಕಲಾಲೋಕ' ಮಳಿಗೆಯ ವಿಶೇಷತೆಗಳು:**

- ಸ್ಥಾಪನೆ: ರಾಜ್ಯದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವಂತೆ ಕಲಾತ್ಮಕವಾಗಿ ವಿನ್ಯಾಸಗೊಳಿಸಲಾದ ಈ ಮಳಿಗೆಯನ್ನು, ವಿಮಾನ ನಿಲ್ದಾಣದ **ಟರ್ಮಿನಲ್-2** ರಲ್ಲಿ **ರಾಜ್ಯ ಕೈಗಾರಿಕಾ ಇಲಾಖೆಯು** ಸ್ಥಾಪಿಸಿದೆ.
- **ಲಭ್ಯವಿರುವ ಉತ್ಪನ್ನಗಳು:** ಇಲ್ಲಿ ಕರ್ನಾಟಕದ ಹೆಮ್ಮೆಯ ಪ್ರತೀಕಗಳಾದ **ಮೈಸೂರು ಸ್ಯಾಂಡಲ್ ಸಾಬೂನು, ಶ್ರೀಗಂಧದ ಎಣ್ಣೆ, ಅಗರಬತ್ತಿಗಳು, ಮೈಸೂರು ರೇಷ್ಮೆ, ಚನ್ನಪಟ್ಟಣದ ಆಟಿಕೆಗಳು, ಲಿಡ್ಕರ್ ಚರ್ಮದ ವಸ್ತುಗಳು , ಸುಗಂಧಭರಿತ ಕಾಫಿ ಪುಡಿ ಮತ್ತು ಪಾನೀಯಗಳು, ಕೈಮಗ್ಗ ಉತ್ಪನ್ನಗಳು, ಇಳಕಲ್ ಸೀರೆಗಳು, ಲಂಬಾಣಿ ಕಸೂತಿ ವಸ್ತ್ರಗಳು, ಶ್ರೀಗಂಧದ ಕಲಾಕೃತಿಗಳು, ಬಿದರಿ ಕಲೆ ಮತ್ತು ಮೈಸೂರು ಶೈಲಿಯ ವರ್ಣಚಿತ್ರಗಳು** ಲಭ್ಯವಿವೆ.

INSTA KAS

- **"In total, 45 GI-certified products from Karnataka will be showcased and sold here,"**

## State ranks fourth in country in terms of adoption numbers

**News -**

- **Maharashtra tops the list; despite growing interest, Karnataka faces a shortage of adoptable children**
- **Karnataka ranks fourth in the country in terms of adoption numbers,** following **Maharashtra, Tamil Nadu, and West Bengal,** according to data shared by officials from the Directorate of Child Protection.

## Additional Information - Central Adoption Resource Authority (CARA)

- **Legal status -** It has been set up as a **statutory body of the Ministry of Women and Child Development.**
- It functions as a **nodal body for the adoption of Indian children** and is mandated **to monitor and regulate in-country and inter-country adoption.**
- **Following convention** - It is designated as the **Central Authority to deal with Hague Conventions on Inter-Country Adoptions, 1993, ratified by the Government of India in 2003.**

**CARINGS (Child Adoption Resource Information and Guidance System) Portal**

- **Launched in** - 2011.
- It serves as the sole platform for adoption, complying with the Hague Convention, international protocols, and national laws.

## Bengaluru Safe City Project

**News -**

- **Bengaluru Safe City Project helps in detection of inter-State crimes**

**Bengaluru Safe City Project**

- It is a technology-driven initiative **aimed at enhancing urban safety, especially for women and vulnerable groups, by deploying advanced surveillance and emergency response systems.**

- **ವ್ಯಾಪ್ತಿ:** ಒಟ್ಟಾರೆಯಾಗಿ, ಕರ್ನಾಟಕದ **45 ಭೌಗೋಳಿಕ ಸೂಚ್ಯಂಕ** ಪ್ರಮಾಣೀಕೃತ ಉತ್ಪನ್ನಗಳನ್ನು ಒಂದೇ ಸೂರಿನಡಿ ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಲಾಗಿದೆ.

## ದತ್ತು ಮಕ್ಕಳ ಸಂಖ್ಯೆ: ದೇಶದಲ್ಲಿ ಕರ್ನಾಟಕಕ್ಕೆ 4ನೇ ಸ್ಥಾನ

**ಇದೀಗ ಸುದ್ದಿಯಲ್ಲಿದೆ:**

- **ಮಕ್ಕಳ ಸಂರಕ್ಷಣೆ ನಿರ್ದೇಶನಾಲಯದ** ಅಧಿಕೃತ ದತ್ತಾಂಶಗಳ ಪ್ರಕಾರ, ದತ್ತು ಪ್ರಕ್ರಿಯೆಯ ಸಂಖ್ಯೆಯಲ್ಲಿ **ಮಹಾರಾಷ್ಟ್ರ**, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ನಂತರ ಕರ್ನಾಟಕವು ದೇಶದಲ್ಲಿ **ನಾಲ್ಕನೇ** ಸ್ಥಾನದಲ್ಲಿದೆ.
- ರಾಜ್ಯದಲ್ಲಿ ಮಕ್ಕಳನ್ನು ದತ್ತು ಪಡೆಯಲು ಪೋಷಕರಿಂದ ಆಸಕ್ತಿ ಹೆಚ್ಚುತ್ತಿದ್ದರೂ, ದತ್ತು ನೀಡಲು ಲಭ್ಯವಿರುವ ಮಕ್ಕಳ ಕೊರತೆಯನ್ನು ಕರ್ನಾಟಕ ಎದುರಿಸುತ್ತಿದೆ.

## ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (CARA) ದ ಬಗ್ಗೆ:

- ಕಾನೂನು ಸ್ಥಾನಮಾನ: ಇದನ್ನು **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ** ಅಡಿಯಲ್ಲಿ ಒಂದು ಶಾಸನಬದ್ಧ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ.
- **ಕಾರ್ಯವ್ಯಾಪ್ತಿ:** ಇದು **ಭಾರತೀಯ ಮಕ್ಕಳ ದತ್ತು ಸ್ವೀಕಾರಕ್ಕೆ ನೋಡಲ್ ಸಂಸ್ಥೆಯಾಗಿ** ಕಾರ್ಯನಿರ್ವಹಿಸುತ್ತದೆ. **ದೇಶದೊಳಗಿನ ಮತ್ತು ಅಂತರ-ದೇಶೀಯ ದತ್ತು ಪ್ರಕ್ರಿಯೆಯನ್ನು ಮೇಲ್ವಿಚಾರಣೆ** ಮಾಡಲು ಮತ್ತು **ನಿಯಂತ್ರಿಸಲು** ಇದಕ್ಕೆ ಸಚಿವಾಲಯವು ಆದೇಶ ನೀಡಿದೆ.
- **ಅಂತರರಾಷ್ಟ್ರೀಯ ಮಾನ್ಯತೆ:** 2003 ರಲ್ಲಿ ಭಾರತ ಸರ್ಕಾರವು ಅನುಮೋದಿಸಿದ, ಅಂತರ-ದೇಶೀಯ ದತ್ತು ಸ್ವೀಕಾರದ ಮೇಲಿನ **1993 ರ ಹೇಗ್ ಸಮಾವೇಶಗಳ** ಅಡಿಯಲ್ಲಿ ವ್ಯವಹರಿಸಲು ಇದನ್ನು **'ಕೇಂದ್ರ ಪ್ರಾಧಿಕಾರ'**ವನ್ನಾಗಿ ನೇಮಿಸಲಾಗಿದೆ.

**CARINGS ಪೋರ್ಟಲ್ (ಮಕ್ಕಳ ದತ್ತು ಸಂಪನ್ಮೂಲ ಮಾಹಿತಿ ಮತ್ತು ಮಾರ್ಗದರ್ಶನ ವ್ಯವಸ್ಥೆ)**

- **ಆರಂಭ:** 2011.
- **ಮಹತ್ವ:** ಇದು **ಹೇಗ್ ಸಮಾವೇಶ**, ಅಂತರರಾಷ್ಟ್ರೀಯ ಶಿಷ್ಟಾಚಾರಗಳು ಮತ್ತು ರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ, ಪಾರದರ್ಶಕ ದತ್ತು ಪ್ರಕ್ರಿಯೆಗೆ ಏಕೈಕ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

## ಬೆಂಗಳೂರು ಸುರಕ್ಷಿತ ನಗರ (ಸೇಫ್ ಸಿಟಿ) ಯೋಜನೆ

**ಇದೀಗ ಸುದ್ದಿಯಲ್ಲಿದೆ:**

- **ಬೆಂಗಳೂರು ಸೇಫ್ ಸಿಟಿ ಯೋಜನೆಯು ಅಂತರ-ರಾಜ್ಯ ಅಪರಾಧಗಳನ್ನು ಪತ್ತೆಹಚ್ಚುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.**

**ಬೆಂಗಳೂರು ಸುರಕ್ಷಿತ ನಗರ (ಸೇಫ್ ಸಿಟಿ) ಯೋಜನೆಯ ಬಗ್ಗೆ:**

- **ಉದ್ದೇಶ:** ಬೆಂಗಳೂರು ನಗರದಲ್ಲಿ **ಮಹಿಳೆಯರು ಮತ್ತು ದುರ್ಬಲ ವರ್ಗಗಳ ಸುರಕ್ಷತೆಗೆ ಆದ್ಯತೆ ನೀಡುವುದು** ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಇದು **ಸುಧಾರಿತ ಕಣ್ಗಾವಲು ಮತ್ತು ತುರ್ತು ಸ್ಪಂದನಾ** ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾದ ತಂತ್ರಜ್ಞಾನ ಚಾಲಿತ ಉಪಕ್ರಮ.

- It is **implemented under the Ministry of Home Affairs (MHA)** initiative using the **Nirbhaya Fund,** shared funding between the central and state governments.
- The project **features more than 7,000 video cameras installed** citywide, complemented by **drone cameras and body-worn cameras for police personnel.**

## National Joint Counter-IED Competition

**News -**

- **The Internal Security Division (ISD) Counter-IED Team of the Karnataka State Police won the 9th National Joint Counter-IED Competition, Visfot Kavach IX,** conducted by the National Security Guard (NSG) in New Delhi.

**National Joint Counter-IED Competition**

- It is also known by names such as **'Visfot Kavach' and 'Agnishaman'.**
- It is an **annual national-level exercise held in India**
- **Objective - to enhance and evaluate the counter-Improvised Explosive Device (IED) capabilities of various security forces.**
- **Conducted by** - It is conducted by the **National Security Guard (NSG)** at their training center in Manesar, Haryana

## KEO (Knowledge-driven, Economical, Open-source) Computer

**News -**

- **The Department of Electronics, IT & BT, Government of Karnataka, in collaboration with KEONICS, on Monday launched KEO**, a compact, affordable, AI-ready personal computer.

**KEO (Knowledge-driven, Economical, Open-source) Computer**

- It is a new, ultra-affordable, compact personal computer **developed by the Department of Electronics, IT & BT in collaboration with KEONICS.**
- It was **launched in November 2025** at the Bengaluru Tech Summit

- ಅನುಷ್ಠಾನ: **ಕೇಂದ್ರ ಗೃಹ ಸಚಿವಾಲಯದ** ಮಾರ್ಗದರ್ಶನದಲ್ಲಿ, **ಕೇಂದ್ರ ಮತ್ತು ರಾಜ್ಯ** ಸರ್ಕಾರಗಳ ಸಹಭಾಗಿತ್ವದ **'ನಿರ್ಭಯಾ ನಿಧಿ'** ಅನುದಾನದಡಿ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.
- **ವ್ಯಾಪ್ತಿ ಮತ್ತು ಸೌಲಭ್ಯಗಳು:** ಈ ಯೋಜನೆಯ ಅಡಿಯಲ್ಲಿ ಬೆಂಗಳೂರು ನಗರದಾದ್ಯಂತ **7,000 ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳನ್ನು** ಅಳವಡಿಸಲಾಗಿದೆ. ಇವುಗಳಿಗೆ ಪೂರಕವಾಗಿ **ಡ್ರೋನ್ ಕ್ಯಾಮೆರಾಗಳು ಮತ್ತು ಕರ್ತವ್ಯನಿರತ ಪೊಲೀಸ್ ಸಿಬ್ಬಂದಿಗೆ ದೇಹದ ಮೇಲೆ ಧರಿಸುವ ಕ್ಯಾಮೆರಾಗಳನ್ನು** ಒದಗಿಸಲಾಗಿದೆ.

## ರಾಷ್ಟ್ರೀಯ ಜಂಟಿ ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ (IED) ಸ್ಪರ್ಧೆ

**ಇದೀಗ ಸುದ್ದಿಯಲ್ಲಿದೆ:**

- **ಕರ್ನಾಟಕ ರಾಜ್ಯ ಪೊಲೀಸ್‌ನ ಆಂತರಿಕ ಭದ್ರತಾ ವಿಭಾಗದ (ISD) ಸುಧಾರಿತ ಪ್ರತಿರೋಧ ಸ್ಫೋಟಕ ನಿಗ್ರಹ ತಂಡವು, ರಾಷ್ಟ್ರೀಯ ಭದ್ರತಾ ದಳ (NSG)** ನವ ದೆಹಲಿಯಲ್ಲಿ ಆಯೋಜಿಸಿದ್ದ 9ನೇ ರಾಷ್ಟ್ರೀಯ ಜಂಟಿ ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ (IED) ಸ್ಪರ್ಧೆ, **ವಿಸ್ಫೋಟ್ ಕವಚ್ IX**' ರಲ್ಲಿ ವಿಜಯಿಶಾಲಿಯಾಗಿದೆ.

**ರಾಷ್ಟ್ರೀಯ ಜಂಟಿ ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ (IED) ಸ್ಪರ್ಧೆಯ ಬಗ್ಗೆ:**

- **ಇತರೆ ಹೆಸರುಗಳು:** ಈ ವಾರ್ಷಿಕ ಕಸರತ್ತನ್ನು **'ವಿಸ್ಫೋಟ್ ಕವಚ್'** ಮತ್ತು **'ಅಗ್ನಿಶಮನ್'** ಎಂಬ ಹೆಸರುಗಳಿಂದಲೂ ಗುರುತಿಸಲಾಗುತ್ತದೆ.
- **ಸ್ವರೂಪ:** ಇದು ಭಾರತದಲ್ಲಿ ಪ್ರತಿವರ್ಷ ನಡೆಯುವ ಪ್ರತಿಷ್ಠಿತ **ರಾಷ್ಟ್ರೀಯ ಮಟ್ಟದ ಸಮರಾಭ್ಯಾಸವಾಗಿದೆ.**
- **ಉದ್ದೇಶ:** ದೇಶದ ವಿವಿಧ ಭದ್ರತಾ ಪಡೆಗಳ ಬಳಿಯಿರುವ **'ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ'** (IED) ಪತ್ತೆ ಮತ್ತು ನಿಗ್ರಹ ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ಅವುಗಳನ್ನು ಉನ್ನತೀಕರಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.
- ಆಯೋಜಕರು: ಈ ಸ್ಪರ್ಧೆಯನ್ನು **ರಾಷ್ಟ್ರೀಯ ಭದ್ರತಾ ಪಡೆಯು** ಹರಿಯಾಣದ ಮಾನೇಸರ್‌ನಲ್ಲಿರುವ ತನ್ನ ತರಬೇತಿ ಕೇಂದ್ರದಲ್ಲಿ ಆಯೋಜಿಸುತ್ತದೆ.

## KEO (ಜ್ಞಾನ ಚಾಲಿತ, ಆರ್ಥಿಕವಾಗಿ, ಮುಕ್ತ ಮೂಲ) ಗಣಕಯಂತ್ರ

**ಇದೀಗ ಸುದ್ದಿಯಲ್ಲಿದೆ:**

- ಕರ್ನಾಟಕ ಸರ್ಕಾರದ **ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು, ಕಿಯೋನಿಕ್ಸ್ (KEONICS) ಸಹಯೋಗದೊಂದಿಗೆ 'KEO'** ಎಂಬ **ನೂತನ ವೈಯಕ್ತಿಕ ಗಣಕಯಂತ್ರವನ್ನು** ಇತ್ತೀಚೆಗೆ ಬಿಡುಗಡೆ ಮಾಡಿದೆ. ಇದು ಗಾತ್ರದಲ್ಲಿ ಚಿಕ್ಕದಾಗಿದ್ದು, ಕೈಗೆಟುಕುವ ದರದಲ್ಲಿದೆ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಪೂರಕವಾಗಿದೆ.

**KEO (ಜ್ಞಾನ ಚಾಲಿತ, ಆರ್ಥಿಕವಾಗಿ, ಮುಕ್ತ ಮೂಲ) ಗಣಕಯಂತ್ರದ ಬಗ್ಗೆ:**

- **ಇದೊಂದು ಅತ್ಯಂತ ಕಡಿಮೆ ದರದ ಮತ್ತು ಸಾಂದ್ರ ವಿನ್ಯಾಸದ (ಚಿಕ್ಕ ಗಾತ್ರದ) ವೈಯಕ್ತಿಕ ಕಂಪ್ಯೂಟರ್** ಆಗಿದ್ದು, ಇದನ್ನು **ರಾಜ್ಯದ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು ಕಿಯೋನಿಕ್ಸ್ (KEONICS)** ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ.
- ನವೆಂಬರ್ 2025 ರಲ್ಲಿ ನಡೆದ ಪ್ರತಿಷ್ಠಿತ **'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ'**ಯಲ್ಲಿ ಇದಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

INSTAKAS

- **Objective - to bridging the digital divide and providing affordable, AI-ready computing access to students, households, and small businesses.**

## Digital Nagarik programme

**News -**

- **Digital Nagarik programme launched by the government. schools.**

## Digital Nagarik programme

- **Objective** - To create a**wareness about cybersecurity and digital safety among students in all government primary and high schools** of the State.
- Around 1 **lakh teachers and 10 lakh students from classes 6 to 10 will benefit** from the programme.
- They will be made aware of **safe Internet use, cyber safety rules, online etiquette, digital rights, responsibilities and data privacy**.
- **Implementation** - The programme is taken up in collaboration with the **Union Ministry of Education and the social media giant Meta.**
- A successful pilot was conducted in Bengaluru, Mysuru, Belagavi and Dakshina Kannada districts in 2024-25.
- As part of the initiative, the **Department of State Educational Research and Training (DSERT) will initially train 1,00,000 teachers using the DISHA portal,** who will subsequently raise awareness among students. The training for teachers commenced on November 15.
- **Digital Nagrik Toolkit**- It will be shared to help schools plan initiatives that **promote safe and responsible online behaviour.**

## Mentoring Summit India 2025

**News -**

- **Mentor Together will host the Mentoring Summit India 2025 on November 19 and 20, at the Bangalore International Centre, Domlur.**

## Mentoring Summit India 2025

- Dates: November 19-20, 2025

- **ಉದ್ದೇಶ: ಡಿಜಿಟಲ್ ಅಂತರವನ್ನು ಕಡಿಮೆ** ಮಾಡುವುದು ಇದರ ಪ್ರಾಥಮಿಕ ಗುರಿಯಾಗಿದೆ. ವಿದ್ಯಾರ್ಥಿಗಳು, ಗೃಹ ಬಳಕೆದಾರರು ಹಾಗೂ ಸಣ್ಣ ಉದ್ದಿಮೆಗಳಿಗೆ ಕೈಗೆಟುಕುವ ದರದಲ್ಲಿ, ಕೃತಕ ಬುದ್ಧಿಮತ್ತೆ - ಚಾಲಿತ ಗಣಕೀಕರಣ ಸೌಲಭ್ಯಗಳನ್ನು ಒದಗಿಸುವ ಉದ್ದೇಶವನ್ನು ಇದು ಹೊಂದಿದೆ.

## ಡಿಜಿಟಲ್ ನಾಗರೀಕ್ ಕಾರ್ಯಕ್ರಮ

**ಇದೀಗ ಸುದ್ದಿಯಲ್ಲಿದೆ:**

- **ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 'ಡಿಜಿಟಲ್ ನಾಗರೀಕ್ ಕಾರ್ಯಕ್ರಮ'ಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ.**

## ಡಿಜಿಟಲ್ ನಾಗರೀಕ್ ಕಾರ್ಯಕ್ರಮದ ಬಗ್ಗೆ:

- ಉದ್ದೇಶ: ರಾಜ್ಯದ ಎಲ್ಲಾ **ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಲ್ಲಿ ಸೈಬರ್ ಭದ್ರತೆ ಹಾಗೂ ಡಿಜಿಟಲ್ ಸುರಕ್ಷತೆಯ ಬಗ್ಗೆ ಅರಿವು** ಮೂಡಿಸುವುದು.
- ವ್ಯಾಪ್ತಿ: **6 ನೇ ತರಗತಿಯಿಂದ 10 ನೇ** ತರಗತಿಯವರೆಗಿನ ಸುಮಾರು **10 ಲಕ್ಷ ವಿದ್ಯಾರ್ಥಿಗಳು ಮತ್ತು 1 ಲಕ್ಷ ಶಿಕ್ಷಕರು** ಈ ಯೋಜನೆಯ ಪ್ರಯೋಜನ ಪಡೆಯಲಿದ್ದಾರೆ.
- **ವಿಷಯವಸ್ತು:** ಸುರಕ್ಷಿತ ಇಂಟರ್ನೆಟ್ ಬಳಕೆ, ಸೈಬರ್ ಸುರಕ್ಷತಾ ನಿಯಮಗಳು, ಆನ್‌ಲೈನ್ ಶಿಷ್ಟಾಚಾರ, ಡಿಜಿಟಲ್ ಹಕ್ಕುಗಳು, ಜವಾಬ್ದಾರಿ ಮತ್ತು ದತ್ತಾಂಶ ಗೌಪ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತದೆ.
- ಅನುಷ್ಠಾನ: ಈ ಕಾರ್ಯಕ್ರಮವನ್ನು **ಕೇಂದ್ರ ಶಿಕ್ಷಣ ಸಚಿವಾಲಯ** ಮತ್ತು ಸಾಮಾಜಿಕ ಜಾಲತಾಣ ಸಂಸ್ಥೆ '**ಮೆಟಾ**' ದ ಸಹಯೋಗದೊಂದಿಗೆ ಅನುಷ್ಠಾನ ಮಾಡಲಾಗುತ್ತದೆ.
- 2024-25 ನೇ ಸಾಲಿನಲ್ಲಿ **ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ದಕ್ಷಿಣ ಕನ್ನಡ** ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಯಶಸ್ವಿಯಾಗಿ ಜಾರಿಗೊಳಿಸಲಾಗಿತ್ತು.
- ತರಬೇತಿ: ಈ ಉಪಕ್ರಮದ ಭಾಗವಾಗಿ, **ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು (DSERT)** ಆರಂಭಿಕ ಹಂತದಲ್ಲಿ **'ದಿಶಾ ಪೋರ್ಟಲ್'** ಮೂಲಕ **1,00,000 ಶಿಕ್ಷಕರಿಗೆ ತರಬೇತಿ** ನೀಡಲಿದೆ. ತರಬೇತಿ ಪಡೆದ ಶಿಕ್ಷಕರು ನಂತರ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುತ್ತಾರೆ.
- **ಡಿಜಿಟಲ್ ನಾಗರೀಕರ ಟೂಲ್‌ಕಿಟ್ (ಸಾಧನಗಳ ಸಂಕಲನ):** ಸುರಕ್ಷಿತ ಮತ್ತು ಜವಾಬ್ದಾರಿಯುತ ಆನ್‌ಲೈನ್ ನಡವಳಿಕೆಯನ್ನು ಉತ್ತೇಜಿಸುವ ಯೋಜನೆಗಳನ್ನು ರೂಪಿಸಲು ಶಾಲೆಗಳಿಗೆ ನೆರವಾಗುವ ನಿಟ್ಟಿನಲ್ಲಿ ಈ ಟೂಲ್‌ಕಿಟ್ ಅನ್ನು ಹಂಚಿಕೊಳ್ಳಲಾಗುವುದು.

## ಮೆಂಟರಿಂಗ್ ಸಮ್ಮಿಟ್ ಇಂಡಿಯಾ (ಭಾರತ ಮಾರ್ಗದರ್ಶನ ಶೃಂಗಸಭೆ), 2025

**ಇದೀಗ ಸುದ್ದಿಯಲ್ಲಿದೆ:**

- **'ಮೆಂಟರ್ ಟುಗೆದರ್'** ಸಂಸ್ಥೆಯ ವತಿಯಿಂದ, ಬೆಂಗಳೂರಿನಲ್ಲಿರುವ **'ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ'**ದಲ್ಲಿ 'ಮೆಂಟರಿಂಗ್ ಸಮ್ಮಿಟ್ ಇಂಡಿಯಾ 2025' ಆಯೋಜನೆಗೊಳ್ಳಲಿದೆ.

## ಮೆಂಟರಿಂಗ್ ಸಮ್ಮಿಟ್ ಇಂಡಿಯಾ, 2025 ರ ಬಗ್ಗೆ:

- **ದಿನಾಂಕ:-** ನವೆಂಬರ್ 19-20, 2025.

INSTAKAS

- Location: Bangalore International Centre, Bengaluru, Karnataka
- Host: Mentor Together
- Focus: The summit aimed **to bring together mentoring practitioners, researchers, and changemakers to advance a shared vision for mentoring as a "public good"** and strengthen collaboration to support young people across India.

## 28 blackbucks die at Belagavi zoo; infection suspected



**News-**

- 28 blackbucks have died at the Rani **Channamma Zoo at Bhutaramanahatti in Belagavi district.**
- According to **preliminary information**, the animals died due to a bacterial infection and samples of internal organs have been sent for tests.

## Blackbuck (Antilope cervicapra)

- **Appearance:** Males have striking spiral horns that can reach up to 75 cm (30 inches) in length and their coat is a dark brown to black color. Females are smaller and have a reddish-brown coat without horns.
- **Habitat:** They are typically found in grasslands, savannas, and open forests. They prefer areas with short grass for grazing.
- **Threats:** Earlier extensively hunted in the princely states of India, Habitat destruction, Illegal Hunting for economic consumption

- ಸ್ಥಳ:- **ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ**, ಬೆಂಗಳೂರು.
- ಆಯೋಜಕರು:- **ಮೆಂಟರ್ ಟುಗೆದರ್** ಸಂಸ್ಥೆ.
- **ಉದ್ದೇಶ:-** ಮಾರ್ಗದರ್ಶನ ಪ್ರಕ್ರಿಯೆಯನ್ನು ಒಂದು **"ಸಾರ್ವಜನಿಕ ಸರಕು"** ಎಂದು ಪರಿಗಣಿಸಿ, ಆ ದೃಷ್ಟಿಕೋನವನ್ನು ಮುನ್ನಡೆಸುವುದು ಈ ಶೃಂಗಸಭೆಯ ಪ್ರಮುಖ ಗುರಿಯಾಗಿದೆ. ಈ ನಿಟ್ಟಿನಲ್ಲಿ, **ಮಾರ್ಗದರ್ಶನ ನೀಡುವ ಪರಿಣಿತರು, ಸಂಶೋಧಕರು ಮತ್ತು ಬದಲಾವಣೆಯ ಹರಿಕಾರರನ್ನು** ಒಂದೇ ವೇದಿಕೆಯಡಿ ತರುವುದು ಹಾಗೂ ದೇಶಾದ್ಯಂತ ಯುವಜನರನ್ನು ಬೆಂಬಲಿಸಲು ಪರಸ್ಪರ ಸಹಯೋಗವನ್ನು ಬಲಪಡಿಸುವುದು ಇದರ ಉದ್ದೇಶವಾಗಿದೆ.

## ಬೆಳಗಾವಿ ಮೃಗಾಲಯದಲ್ಲಿ 28 ಕೃಷ್ಣಮೃಗಗಳ ಸಾವು; ಸೋಂಕಿನ ಶಂಕೆ



**ಇದೀಗ ಸುದ್ದಿಯಲ್ಲಿದೆ:**

- **ಬೆಳಗಾವಿ ಜಿಲ್ಲೆಯ ಭೂತರಾಮನಹಟ್ಟಿಯಲ್ಲಿರುವ ರಾಣಿ ಚೆನ್ನಮ್ಮ ಮೃಗಾಲಯದಲ್ಲಿ** 28 ಕೃಷ್ಣಮೃಗಗಳು ಮೃತಪಟ್ಟಿವೆ.
- ಪ್ರಾಥಮಿಕ ಮಾಹಿತಿಯ ಪ್ರಕಾರ, **ಬ್ಯಾಕ್ಟೀರಿಯಾ** ಸೋಂಕಿನಿಂದ ಈ ಪ್ರಾಣಿಗಳು ಸಾವನ್ನಪ್ಪಿರುವ ಶಂಕೆ ಇದ್ದು, ಹೆಚ್ಚಿನ ತಪಾಸಣೆಗಾಗಿ ಆಂತರಿಕ ಅಂಗಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

## ಕೃಷ್ಣಮೃಗ (ಆಂಟಿಲೋಪ್ ಸರ್ವಿಕಾಪ್ರಾ) ಗಳ ಬಗ್ಗೆ:

- **ದೈಹಿಕ ಲಕ್ಷಣಗಳು:**
  - ಗಂಡು ಕೃಷ್ಣಮೃಗಗಳು ಆಕರ್ಷಕವಾದ ಮತ್ತು **ಸುರುಳಿಯಾಕಾರದ ಕೊಂಬುಗಳನ್ನು** ಹೊಂದಿದ್ದು, ಇವು **75 ಸೆಂ.ಮೀ (30 ಇಂಚು)** ವರೆಗೆ ಬೆಳೆಯುತ್ತವೆ. ಗಂಡು ಕೃಷ್ಣಮೃಗಗಳ ಮೈಬಣ್ಣ **ಗಾಢ ಕಂದು ಬಣ್ಣದಿಂದ ಕಪ್ಪು** ಬಣ್ಣದಲ್ಲಿರುತ್ತದೆ.
  - ಹೆಣ್ಣು ಕೃಷ್ಣಮೃಗಗಳು ಗಾತ್ರದಲ್ಲಿ **ಚಿಕ್ಕದಾಗಿದ್ದು, ಕೋಡುಗಳಿರುವುದಿಲ್ಲ** ಮತ್ತು **ಕೆಂಪು-ಕಂದು** ಬಣ್ಣವನ್ನು ಹೊಂದಿರುತ್ತವೆ.
- ಆವಾಸಸ್ಥಾನ: ಇವು ಸಾಮಾನ್ಯವಾಗಿ **ಹುಲ್ಲುಗಾವಲುಗಳು, ಸವನ್ನಾಗಳು ಮತ್ತು ತೆರೆದ ಅರಣ್ಯಗಳಲ್ಲಿ** ಕಂಡುಬರುತ್ತವೆ. **ಮೇಯಲು ಕಡಿಮೆ ಎತ್ತರದ ಹುಲ್ಲು ಇರುವ ಪ್ರದೇಶಗಳನ್ನು** ಇವು ಹೆಚ್ಚು ಇಷ್ಟಪಡುತ್ತವೆ.
- **ಬೆದರಿಕೆಗಳು** : ಐತಿಹಾಸಿಕವಾಗಿ ಭಾರತದ ದೇಶೀಯ ಸಂಸ್ಥಾನಗಳಲ್ಲಿ ಇವುಗಳ **ಅತಿಯಾದ ಬೇಟೆ** ನಡೆಯುತ್ತಿತ್ತು. ಪ್ರಸ್ತುತ, **ಆವಾಸಸ್ಥಾನಗಳ ನಾಶ** ಮತ್ತು ವಾಣಿಜ್ಯ/ಆರ್ಥಿಕ ಬಳಕೆಗಾಗಿ ನಡೆಯುವ **ಅಕ್ರಮ ಬೇಟೆ** ಇವುಗಳ ಅಸ್ತಿತ್ವಕ್ಕೆ ಪ್ರಮುಖ ಬೆದರಿಕೆಗಳಾಗಿವೆ.

INSTAKAS

- **Conservation Status: IUCN Status: Least Concern**
  - **CITES**: Appendix III
  - Schedule I of the Wildlife Protection Act of 1972.
- **State animal** - Declared as state animal of Punjab, Haryana, and Andhra Pradesh.

- **Cultural Importance:** In Hinduism, the Blackbuck is considered a symbol of purity, with its skin and horns revered as sacred objects. In Buddhism, it represents good luck.

## Ekya Vana

- It is a **new, purpose-driven K-12 school in Bengaluru, India,**
- It is **dedicated to conservation, sustainability, and environmental innovation.**
- It is **designed as a "living, breathing ecosystem" where students learn from and with nature.**

Key Features

- **Nature-Based Learning:** The **curriculum goes beyond traditional classroom education, using outdoor classrooms, butterfly and herb gardens, composting units, and eco-labs** as core learning environments.
- **Curriculum Pathways**: The academic framework is built around four key pathways connecting global sustainability themes to real-world learning:

1. **People & Planet**
2. **Earth Care**
3. **Living Systems**
4. **Energy & Innovation**

- **Mission:** The school's vision is to empower learners as innovators, advocates, and leaders in sustainability, preparing them to address modern challenges like climate change and biodiversity loss.
- **Location**: Ekya Vana is located in the Bannerghatta area of Bangalore.
- **Advisory Panel:** The initiative is guided by a distinguished advisory panel including notable environmentalists and industry leaders

- **ಸಂರಕ್ಷಣಾ ಸ್ಥಾನಮಾನ:**
  - IUCN ಕೆಂಪು ಪಟ್ಟಿ: **ಕನಿಷ್ಠ ಕಾಳಜಿ (LC)**
  - CITES: **ಅನುಬಂಧ III**
  - ವನ್ಯಜೀವಿ (ಸಂರಕ್ಷಣಾ) ಕಾಯಿದೆ, 1972: **ಅನುಸೂಚಿ I**

**ಇತರೆ ಪ್ರಮುಖ ಅಂಶಗಳು**

- **ರಾಜ್ಯ ಪ್ರಾಣಿ:** ಕೃಷ್ಣಮೃಗವನ್ನು **ಪಂಜಾಬ್, ಹರಿಯಾಣ ಮತ್ತು ಆಂಧ್ರಪ್ರದೇಶ** ರಾಜ್ಯಗಳ 'ರಾಜ್ಯ ಪ್ರಾಣಿ'ಯನ್ನಾಗಿ ಘೋಷಿಸಲಾಗಿದೆ.
- **ಸಾಂಸ್ಕೃತಿಕ ಮಹತ್ವ:** ಹಿಂದೂ ಧರ್ಮದಲ್ಲಿ, ಕೃಷ್ಣಮೃಗವನ್ನು **ಪಾವಿತ್ರ್ಯದ ಸಂಕೇತವೆಂದು** ಪರಿಗಣಿಸಲಾಗಿದೆ. ಇದರ ಚರ್ಮ ಮತ್ತು ಕೊಂಬುಗಳನ್ನು ಪವಿತ್ರ ವಸ್ತುಗಳಾಗಿ ಪೂಜಿಸಲಾಗುತ್ತದೆ. ಬೌದ್ಧ ಧರ್ಮದಲ್ಲಿ, ಇದನ್ನು **ಅದೃಷ್ಟದ ಸಂಕೇತವೆಂದು** ನಂಬಲಾಗಿದೆ.

## ಏಕ್ಯಾ ವನ : ದೇಶದ ಮೊದಲ ನಿಸರ್ಗ-ಪ್ರೇರಿತ ಶಾಲೆ

**ಇದೀಗ ಸುದ್ದಿಯಲ್ಲಿದೆ:**

- **ಬೆಂಗಳೂರು** ಮೂಲದ 'ಏಕ್ಯಾ ವನ' ಶಾಲೆಯು, **ಭಾರತದ ಮೊಟ್ಟಮೊದಲ** ನಿಸರ್ಗ-ಪ್ರೇರಿತ **ಕೆ-12 ಶಾಲೆಯಾಗಿ** ಹೊರಹೊಮ್ಮುವ ಮೂಲಕ ಸುದ್ದಿಯಲ್ಲಿದೆ.

**ಏಕ್ಯಾ ವನ ಶಾಲೆಯ ಬಗ್ಗೆ:**

- ಸ್ಥಳ : ಬೆಂಗಳೂರಿನ **ಬನ್ನೇರುಘಟ್ಟ** ಪ್ರದೇಶ.
- ಸ್ವರೂಪ: ಇದು ಒಂದು ನೂತನ ಹಾಗೂ ನಿರ್ದಿಷ್ಟ **ಧ್ಯೇಯ-ಪ್ರೇರಿತ ಕೆ-12 ಮಾದರಿಯ** ಶಾಲೆಯಾಗಿದೆ.
- **ದೃಷ್ಟಿಕೋನ:** ಇದು ಮುಖ್ಯವಾಗಿ **ಸಂರಕ್ಷಣೆ, ಸುಸ್ಥಿರತೆ** ಮತ್ತು **ಪರಿಸರ ಸ್ನೇಹಿ ನಾವೀನ್ಯತೆಗೆ** ಒತ್ತು ನೀಡುತ್ತದೆ.
- ವಿನ್ಯಾಸ: ವಿದ್ಯಾರ್ಥಿಗಳು ನಿಸರ್ಗದ ಮಡಿಲಲ್ಲಿ ಮತ್ತು ನಿಸರ್ಗದೊಂದಿಗೆ ಬೆರೆಯುತ್ತಾ ಕಲಿಯುವಂತಾಗಲು, ಈ ಶಾಲೆಯನ್ನು ಒಂದು **"ಜೀವಂತ ಮತ್ತು ಕ್ರಿಯಾಶೀಲ ಜೀವಿ ಪರಿಸರ ವ್ಯವಸ್ಥೆ"**ಯನ್ನಾಗಿ ರೂಪಿಸಲಾಗಿದೆ.
- **ಧ್ಯೇಯ**: ಹವಾಮಾನ ಬದಲಾವಣೆ ಮತ್ತು ಜೀವ ವೈವಿಧ್ಯದ ನಾಶದಂತಹ ಸಮಕಾಲೀನ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು ಇದರ ಗುರಿಯಾಗಿದೆ. ಅವರನ್ನು ಸುಸ್ಥಿರತೆಯ ನಾವೀನ್ಯಕಾರರು, ಪ್ರತಿಪಾದಕರು ಮತ್ತು ನಾಯಕರನ್ನಾಗಿ ಸಬಲೀಕರಣಗೊಳಿಸುವುದು ಶಾಲೆಯ ಪ್ರಮುಖ ದೃಷ್ಟಿಕೋನವಾಗಿದೆ.
- **ಸಲಹಾ ಮಂಡಳಿ:** ಪ್ರಖ್ಯಾತ **ಪರಿಸರವಾದಿಗಳು ಮತ್ತು ಉದ್ಯಮ ರಂಗದ ನಾಯಕರನ್ನೊಳಗೊಂಡ** ವಿಶೇಷ ಸಲಹಾ ಮಂಡಳಿಯು ಈ ಉಪಕ್ರಮಕ್ಕೆ ಮಾರ್ಗದರ್ಶನ ನೀಡುತ್ತಿದೆ.

**ಏಕ್ಯಾ ವನ ಶಾಲೆಯ ಪ್ರಮುಖ ಲಕ್ಷಣಗಳು:**

1. **ನಿಸರ್ಗ ಆಧಾರಿತ ಕಲಿಕೆ:** ಈ ಶಾಲೆಯ ಪಠ್ಯಕ್ರಮವು ಸಾಂಪ್ರದಾಯಿಕ ತರಗತಿ ಬೋಧನೆಯ ಸಹಿತ, **ಹೊರಾಂಗಣ ತರಗತಿಗಳು, ಚಿಟ್ಟೆ ಮತ್ತು ಗಿಡಮೂಲಿಕೆ ಉದ್ಯಾನಗಳು, ಮಿಶ್ರಗೊಬ್ಬರ ಘಟಕಗಳು ಮತ್ತು ಪರಿಸರ ಪ್ರಯೋಗಾಲಯಗಳನ್ನು** ಪ್ರಧಾನ ಕಲಿಕಾ ನೆಲೆಗಳಾಗಿ ಬಳಸಿಕೊಳ್ಳುತ್ತದೆ.
2. **ಪಠ್ಯಕ್ರಮದ ಮಾರ್ಗಗಳು:** ಜಾಗತಿಕ ಸುಸ್ಥಿರತೆಯ ವಿಷಯಗಳನ್ನು ನೈಜ ಪ್ರಪಂಚದ ಕಲಿಕೆಯೊಂದಿಗೆ ಜೋಡಿಸಲು **ನಾಲ್ಕು ಪ್ರಮುಖ ಶೈಕ್ಷಣಿಕ ಮಾರ್ಗಗಳನ್ನು** ರೂಪಿಸಲಾಗಿದೆ:
   - **ಜನರು ಮತ್ತು ಗ್ರಹ**
   - **ಭೂಮಿಯ ಆರೈಕೆ**
   - **ಜೀವ ವ್ಯವಸ್ಥೆಗಳು**
   - **ಶಕ್ತಿ ಮತ್ತು ನಾವೀನ್ಯತೆ**

## Karnataka Private Medical Establishments (KPME) Act, 2007

**News -**

- **The Karnataka government has amended the Karnataka Private Medical Establishments (KPME) Act, 2007,**

**Amendments -**

- **Objective - to strengthen legal provisions ensuring timely and lifesaving treatment for dog, animal, and snake bite victims.**
- The amendment follows the Supreme Court's November 7, 2025, directions in a suo motu writ petition **seeking uniform access to Anti-Rabies Vaccine (ARV), immunoglobulin and emergency care across all hospitals.**
- The newly inserted clause mandates that **every private medical establishment must administer necessary first aid to all snake-bite or dog/animal bite victims without insisting on advance payment.**

## 'Promoting HEALTH in Agumbe'

**News -**

- **A team from NITK Surathkal have completed the deployment of 100 internet connections in Agumbe on November 8, under the project 'Promoting HEALTH in Agumbe'**

**Promoting HEALTH in Agumbe**

- It is an initiative **led by Dr. Mohit P. Tahiliani from NITK Surathkal**
- **HEALTH stands for- Healthcare, Education, Agriculture, Livelihood, Technology, and Heritage.**
- Objective - **The project's recent major achievement was providing reliable internet connectivity to 100 locations in Agumbe by enabling digital access for local institutions, businesses, and homes in this remote and ecologically sensitive region.**

**Initiative pillars**

- **Healthcare:** Facilitating access to online health information and services.

## ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (KPME) ಕಾಯಿದೆ, 2007

ಇದೀಗ ಸುದ್ದಿಯಲ್ಲಿದೆ:

- **ಕರ್ನಾಟಕ ಸರ್ಕಾರವು 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (KPME) ಕಾಯಿದೆ, 2007' ಕ್ಕೆ ಮಹತ್ವದ ತಿದ್ದುಪಡಿಗಳನ್ನು ಮಾಡಿದೆ.**

ತಿದ್ದುಪಡಿಗಳ ಮುಖ್ಯಾಂಶಗಳು:

- ಉದ್ದೇಶ: **ನಾಯಿ, ಇತರ ಪ್ರಾಣಿ ಮತ್ತು ಹಾವು ಕಡಿತಕ್ಕೆ ಒಳಗಾದ ಸಂತ್ರಸ್ತರಿಗೆ, ಸಮಯೋಚಿತ ಹಾಗೂ ಜೀವ ರಕ್ಷಕ ಚಿಕಿತ್ಸೆಯು** ಲಭ್ಯವಾಗುವುದನ್ನು ಖಚಿತಪಡಿಸಲು ಅಸ್ತಿತ್ವದಲ್ಲಿರುವ ಕಾನೂನು ಉಪಬಂಧಗಳನ್ನು ಬಲಪಡಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.
- **ಹಿನ್ನೆಲೆ:** ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ **ರೇಬೀಸ್ ನಿರೋಧಕ ಲಸಿಕೆ (ARV), ಇಮ್ಯುನೊಗ್ಲಾಬ್ಯುಲಿನ್ ಮತ್ತು ತುರ್ತು ಚಿಕಿತ್ಸಾ ಸೌಲಭ್ಯಗಳು** ಏಕರೂಪವಾಗಿ ಲಭ್ಯವಿರಬೇಕೆಂದು ಕೋರಿ ದಾಖಲಾದ ಸ್ವಯಂಪ್ರೇರಿತ ರಿಟ್ ಅರ್ಜಿಯ ವಿಚಾರಣೆ ನಡೆಸಿದ **ಸರ್ವೋಚ್ಚ ನ್ಯಾಯಾಲಯವು**, ನವೆಂಬರ್ 7, 2025 ರಂದು ನೀಡಿದ ನಿರ್ದೇಶನಗಳನ್ನು ಪಾಲಿಸುವ ನಿಟ್ಟಿನಲ್ಲಿ ಈ ತಿದ್ದುಪಡಿಯನ್ನು ತರಲಾಗಿದೆ.
- **ಕಡ್ಡಾಯ ಚಿಕಿತ್ಸೆ:** ಕಾಯಿದೆಗೆ ಸೇರ್ಪಡೆಗೊಳಿಸಲಾದ ಹೊಸ ನಿಯಮದನ್ವಯ, ಹಾವು ಕಡಿತ ಅಥವಾ ನಾಯಿ/ಪ್ರಾಣಿ ಕಡಿತದ ಸಂತ್ರಸ್ತರಿಗೆ ಚಿಕಿತ್ಸೆ ನೀಡುವ ಮುನ್ನ **ಮುಂಗಡ ಹಣ ಪಾವತಿಗೆ ಒತ್ತಾಯಿಸಬಾರದು**. ಮತ್ತು ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ಸಂತ್ರಸ್ತರಿಗೆ ಅಗತ್ಯವಿರುವ **ಪ್ರಥಮ ಚಿಕಿತ್ಸೆಯನ್ನು ನೀಡುವುದು ಕಡ್ಡಾಯವಾಗಿದೆ**.

## ಆಗುಂಬೆಯಲ್ಲಿ ಹೆಲ್ತ್ (HEALTH) ಉಪಕ್ರಮದ ಉತ್ತೇಜನ

ಇದೀಗ ಸುದ್ದಿಯಲ್ಲಿ

- **ಸುರತ್ಕಲ್‌ನ NITK** ತಂಡವು, **'ಆಗುಂಬೆಯಲ್ಲಿ ಹೆಲ್ತ್ (HEALTH) ಉತ್ತೇಜನ'** ಯೋಜನೆಯ ಅಡಿಯಲ್ಲಿ ನವೆಂಬರ್ 8 ರಂದು ಆಗುಂಬೆ ಭಾಗದಲ್ಲಿ 100 ಇಂಟರ್ನೆಟ್ ಸಂಪರ್ಕಗಳನ್ನು ಅಳವಡಿಸುವ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

**ಹೆಲ್ತ್ (HEALTH) ಉಪಕ್ರಮದ ಉತ್ತೇಜನ ಕುರಿತು:**

- ಇದು ಎನ್‌ಐಟಿಕೆ ಸುರತ್ಕಲ್‌ನ **ಡಾ. ಮೋಹಿತ್ ಪಿ. ತಹಿಲಿಯಾನಿ** ಅವರ ನೇತೃತ್ವದಲ್ಲಿ ಕಾರ್ಯನಿರ್ವಹಿಸಲಿದೆ.
- **HEALTH** ಎಂದರೆ:- **ಆರೋಗ್ಯ ರಕ್ಷಣೆ (H), ಶಿಕ್ಷಣ (E), ಕೃಷಿ (A), ಜೀವನೋಪಾಯ (L), ತಂತ್ರಜ್ಞಾನ (T) ಮತ್ತು ಪರಂಪರೆ (H).**
- **ಉದ್ದೇಶ:-** ಪಶ್ಚಿಮ ಘಟ್ಟಗಳಂತಹ ದೂರದ ಮತ್ತು **ಪರಿಸರ ಸೂಕ್ಷ್ಮ ಪ್ರದೇಶದಲ್ಲಿರುವ** ಸ್ಥಳೀಯ ಸಂಸ್ಥೆಗಳು, ಉದ್ದಿಮೆಗಳು ಮತ್ತು ಮನೆಗಳಿಗೆ **ಡಿಜಿಟಲ್ ಪ್ರವೇಶವನ್ನು** ಕಲ್ಪಿಸುವುದು ಇದರ ಮೂಲ ಉದ್ದೇಶವಾಗಿದೆ. ಆಗುಂಬೆಯ 100 ತಾಣಗಳಿಗೆ ವಿಶ್ವಾಸಾರ್ಹ ಅಂತರ್ಜಾಲ ಸಂಪರ್ಕವನ್ನು ಒದಗಿಸಿರುವುದು ಯೋಜನೆಯ ಇತ್ತೀಚಿನ ಮೈಲಿಗಲ್ಲಾಗಿದೆ..

**HEALTH ಉಪಕ್ರಮದ ಆಧಾರಸ್ತಂಭಗಳು**

1. **ಆರೋಗ್ಯ ರಕ್ಷಣೆ (H):** ಗ್ರಾಮೀಣ ಜನರಿಗೆ ಆನ್‌ಲೈನ್ ಮೂಲಕ ಆರೋಗ್ಯ ಮಾಹಿತಿ ಮತ್ತು ವೈದ್ಯಕೀಯ ಸೇವೆಗಳ ಲಭ್ಯತೆಯನ್ನು ಸುಗಮಗೊಳಿಸುವುದು.

- **Education:** Allowing students and educators to utilize online resources and learning platforms.
- **Agriculture:** Enabling better communication and access to information for the agricultural community.
- **Livelihood:** Improving local commerce through online visibility, booking systems, and support for local businesses like homestays.
- **Technology:** Delivering reliable internet to a region with frequent power outages and challenging terrain.
- **Heritage:** Supporting research and preservation efforts, such as those related to the King Cobras.

## KSRTC launches Flybus service between KIA and Davangere

**News -**

- **The Karnataka State Road Transport Corporation (KSRTC) launched a new direct Flybus (Volvo multi-axle) service between Kempegowda International Airport (KIA) in Bengaluru and Davangere.**

**Karnataka State Road Transport Corporation (KSRTC)**

- **Ownership:** Wholly **owned by the Government of Karnataka.**
- **Services:** KSRTC operates various types of services, from **non-AC "Karnataka Sarige"** and **"Gramantara Sarige"** buses to **luxury AC classes like "Airavat Club Class," "Ambaari Dream Class," and electric "EV-Power Plus+"** buses.
- **Coverage:** It serves **17 districts in southern Karnataka and connects them to other states like Tamil Nadu, Kerala, Telangana, Andhra Pradesh, Maharashtra, and Goa.**
- **Bifurcation:** Over the years, KSRTC has been bifurcated to create other regional transport corporations to better manage services in different parts of the state, including:

1. **Bangalore Metropolitan Transport Corporation (BMTC)** for the Bangalore metropolitan region.

2. **ಶಿಕ್ಷಣ (E):** ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಆನ್‌ಲೈನ್ ಸಂಪನ್ಮೂಲಗಳು ಹಾಗೂ ಡಿಜಿಟಲ್ ಕಲಿಕಾ ವೇದಿಕೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುವುದು.
3. **ಕೃಷಿ (A):** ಕೃಷಿ ಸಮುದಾಯಕ್ಕೆ ಅಗತ್ಯ ಮಾಹಿತಿ ಮತ್ತು ಉತ್ತಮ ಸಂವಹನ ವ್ಯವಸ್ಥೆಯನ್ನು ಒದಗಿಸುವುದು.
4. **ಜೀವನೋಪಾಯ (L):** ಆನ್‌ಲೈನ್ ಪ್ರಚಾರ, ಕಾಯ್ದಿರಿಸುವಿಕೆ ವ್ಯವಸ್ಥೆಗಳು ಮತ್ತು ತಂಗುಮನೆ (ಹೋಮ್‌ಸ್ಟೇ) ಗಳಂತಹ ಸ್ಥಳೀಯ ಉದ್ಯಮಗಳಿಗೆ ತಾಂತ್ರಿಕ ಬೆಂಬಲ ನೀಡುವ ಮೂಲಕ ಸ್ಥಳೀಯ ವಾಣಿಜ್ಯ ವಹಿವಾಟನ್ನು ಸುಧಾರಿಸುವುದು.
5. **ತಂತ್ರಜ್ಞಾನ (T):** ವಿದ್ಯುತ್ ವ್ಯತ್ಯಯ ಮತ್ತು ಕಠಿಣ ಭೌಗೋಳಿಕ ಸವಾಲುಗಳಿರುವ ಪ್ರದೇಶಕ್ಕೂ ವಿಶ್ವಾಸಾರ್ಹ ಅಂತರ್ಜಾಲ ಸೇವೆಯನ್ನು ತಲುಪಿಸುವುದು.
6. **ಪರಂಪರೆ (H):** ಆಗುಂಬೆಯ ಪ್ರಮುಖ ಜೀವವೈವಿಧ್ಯ ಪ್ರಭೇದವಾದ ಕಾಳಿಂಗ ಸರ್ಪಗಳ ಸಂರಕ್ಷಣೆ ಮತ್ತು ಸಂಶೋಧನಾ ಪ್ರಯತ್ನಗಳಿಗೆ ಬೆಂಬಲ ನೀಡುವುದು.

## "ಫ್ಲೈಬಸ್" ಸೇವೆ

ಇದೀಗ ಸುದ್ದಿಯಲ್ಲಿದೆ:

- **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು (KSRTC), ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (KIA) ಮತ್ತು ದಾವಣಗೆರೆ** ನಗರದ ನಡುವೆ ನೇರವಾದ ನೂತನ 'ಫ್ಲೈಬಸ್' (ವೋಲ್ವೋ ಮಲ್ಟಿ-ಆಕ್ಸಲ್) ಸೇವೆಯನ್ನು ಪ್ರಾರಂಭಿಸಿದೆ.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಗ್ಗೆ:**

- ಮಾಲೀಕತ್ವ:- ಈ ನಿಗಮವು ಸಂಪೂರ್ಣವಾಗಿ **ಕರ್ನಾಟಕ ಸರ್ಕಾರದ** ಸ್ವಾಮ್ಯಕ್ಕೆ ಒಳಪಟ್ಟಿದೆ.
- ಸಾರಿಗೆ ಸೇವೆಗಳು:- ಕೆಎಸ್‌ಆರ್‌ಟಿಸಿಯು ಸಾಮಾನ್ಯ ದರ್ಜೆಯ **"ಕರ್ನಾಟಕ ಸಾರಿಗೆ"** ಮತ್ತು **"ಗ್ರಾಮಾಂತರ ಸಾರಿಗೆ" (ಹವಾನಿಯಂತ್ರಣ ರಹಿತ)** ಬಸ್‌ಗಳಿಂದ ಹಿಡಿದು, **ಐಷಾರಾಮಿ ದರ್ಜೆಯ "ಐರಾವತ ಕ್ಲಬ್ ಕ್ಲಾಸ್," "ಅಂಬಾರಿ ಡ್ರೀಮ್ ಕ್ಲಾಸ್"** ಮತ್ತು **ಪರಿಸರ ಸ್ನೇಹಿ ವಿದ್ಯುತ್ ಚಾಲಿತ "ಇವಿ- ಪವರ್ ಪ್ಲಸ್+"** ಬಸ್‌ಗಳವರೆಗೆ ವೈವಿಧ್ಯಮಯ ಸಾರಿಗೆ ಸೇವೆಗಳನ್ನು ಒದಗಿಸುತ್ತಿದೆ.
- ಕಾರ್ಯವ್ಯಾಪ್ತಿ:- ಇದು **ದಕ್ಷಿಣ ಕರ್ನಾಟಕದ 17 ಜಿಲ್ಲೆಗಳಿಗೆ ಸಾರಿಗೆ ಸೇವೆ** ಒದಗಿಸುವುದಲ್ಲದೆ, **ನೆರೆಯ ರಾಜ್ಯಗಳಾದ ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಗೂ** ಸಂಪರ್ಕ ಕಲ್ಪಿಸುತ್ತದೆ.
- **ಆಡಳಿತಾತ್ಮಕ ವಿಭಜನೆ :** ಆಡಳಿತಾತ್ಮಕ ದಕ್ಷತೆ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ, ಕೆಎಸ್‌ಆರ್‌ಟಿಸಿಯನ್ನು ಕಾಲಕ್ರಮೇಣ ವಿಭಜಿಸಿ ಸ್ವತಂತ್ರ ಪ್ರಾದೇಶಿಕ ಸಾರಿಗೆ ನಿಗಮಗಳನ್ನು ರಚಿಸಲಾಗಿದೆ. ಅವುಗಳೆಂದರೆ:

  1. **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC):** ಬೆಂಗಳೂರು ಮಹಾನಗರ ಪ್ರದೇಶಕ್ಕಾಗಿ.

INSTAKAS

2. **North Western Karnataka Road Transport Corporation (NWKRTC) for the north-western districts.**
3. **Kalyana Karnataka Road Transport Corporation (KKRTC) for the north-eastern districts.**

## Nadoja Baraguru award

News -

- For the year 2025, social activist, writer, and former Minister **B.T. Lalitha Nayak** has been selected for the award in the Literary field, while **Shivarudraiah will be honored in the Cinema field**

**Baragur Awards**

- **Awarding Organisation** - Nadoja Dr. Baragur Pratishtana foundation
- **Objective -It presents awards annually to various individuals for their contributions to different fields.**
- The award comprises a plaque and a cash prize of ₹25,000.

**Awardees of 2025**

- **B.T. Lalitha Nayak (Field - Literature)**
- **Shivarudraiah (Field - Cinema)**

## Karnataka Information Technology Policy 2025-2030

**News -**

- **Karnataka will be spending ₹967 crore towards varied incentives under the Karnataka Information Technology Policy 2025-2030**

**Karnataka Information Technology Policy 2025-2030**

- **Mandate** - It is a strategic blueprint that **transitions the state's focus from traditional IT services to deep technology innovation.**
- It aims to position Karnataka as a **global leader in areas like AI, quantum computing, and cybersecurity.**
- The policy, **approved by the state cabinet in November 2025**, emphasizes **equitable growth through a 'Beyond Bengaluru' initiative** and has a total **outlay of ₹967.12 crore over five years.**

2. **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (NWKRTC):** ವಾಯುವ್ಯ ಕರ್ನಾಟಕದ ಜಿಲ್ಲೆಗಳಿಗಾಗಿ.
3. **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (KKRTC):** ಈಶಾನ್ಯ ಕರ್ನಾಟಕದ (ಕಲ್ಯಾಣ ಕರ್ನಾಟಕ) ಜಿಲ್ಲೆಗಳಿಗಾಗಿ.

## ನಾಡೋಜ ಬರಗೂರು ಪ್ರಶಸ್ತಿ

**ಇದೀಗ ಸುದ್ದಿಯಲ್ಲಿ**

- 2025 ನೇ ಸಾಲಿನ 'ನಾಡೋಜ ಬರಗೂರು ಪ್ರಶಸ್ತಿ'ಗೆ ಸಾಮಾಜಿಕ ಹೋರಾಟಗಾರ್ತಿ, ಲೇಖಕಿ ಹಾಗೂ ಮಾಜಿ ಸಚಿವೆ **ಬಿ.ಟಿ. ಲಲಿತಾ ನಾಯಕ್ (ಸಾಹಿತ್ಯ ಕ್ಷೇತ್ರ)** ಮತ್ತು **ಶಿವರುದ್ರಯ್ಯ (ಚಲನಚಿತ್ರ ಕ್ಷೇತ್ರ)** ಅವರನ್ನು ಆಯ್ಕೆ ಮಾಡಲಾಗಿದೆ.

**ಬರಗೂರು ಪ್ರಶಸ್ತಿಯ ಬಗ್ಗೆ:**

- **ಪ್ರಶಸ್ತಿ ನೀಡುವ ಸಂಸ್ಥೆ:** ಈ ಪ್ರಶಸ್ತಿಯನ್ನು **'ನಾಡೋಜ ಡಾ. ಬರಗೂರು ಪ್ರತಿಷ್ಠಾನ'** ನೀಡುತ್ತದೆ.
- ಉದ್ದೇಶ:- **ವಿವಿಧ ಕ್ಷೇತ್ರಗಳಲ್ಲಿ** ಗಣನೀಯ ಸೇವೆ ಸಲ್ಲಿಸಿದ ಹಾಗೂ ಕೊಡುಗೆ ನೀಡಿದ **ಸಾಧಕರಿಗೆ ವಾರ್ಷಿಕವಾಗಿ** ಈ ಪ್ರಶಸ್ತಿಯನ್ನು ನೀಡಿ ಗೌರವಿಸುವುದು ಪ್ರತಿಷ್ಠಾನದ ಮೂಲ ಉದ್ದೇಶವಾಗಿದೆ.
- ಪ್ರಶಸ್ತಿಯ ಸ್ವರೂಪ:- ಈ ಪ್ರಶಸ್ತಿಯು ಒಂದು **ಫಲಕ ಮತ್ತು ₹25,000** ನಗದು ಬಹುಮಾನವನ್ನು ಒಳಗೊಂಡಿರುತ್ತದೆ.

**2025 ನೇ ಸಾಲಿನ ಪುರಸ್ಕೃತರು**

1. **ಬಿ.ಟಿ. ಲಲಿತಾ ನಾಯಕ್:** ಸಾಹಿತ್ಯ ಕ್ಷೇತ್ರ.
2. **ಶಿವರುದ್ರಯ್ಯ:** ಚಲನಚಿತ್ರ ಕ್ಷೇತ್ರ.

## ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ, 2025-2030

**ಇದೀಗ ಸುದ್ದಿಯಲ್ಲಿದೆ:**

- 'ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ 2025-2030' ರ ಅಡಿಯಲ್ಲಿ ವಿವಿಧ ಪ್ರೋತ್ಸಾಹಕಗಳಿಗಾಗಿ ರಾಜ್ಯ ಸರ್ಕಾರವು **₹967 ಕೋಟಿ** ವೆಚ್ಚ ಮಾಡಲು ನಿರ್ಧರಿಸಿದೆ.

**ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ, 2025-2030 ರ ಕುರಿತು:**

- **ಕಾರ್ಯತಂತ್ರದ ಬದಲಾವಣೆ:** ರಾಜ್ಯದ ಗಮನವನ್ನು ಸಾಂಪ್ರದಾಯಿಕ ಮಾಹಿತಿ ತಂತ್ರಜ್ಞಾನ (IT) ಸೇವೆಗಳಿಂದ, **ಡೀಪ್ ಟೆಕ್ ನಾವೀನ್ಯತೆಗೆ** ಪರಿವರ್ತಿಸುವುದು ಈ ನೀತಿಯ ಪ್ರಮುಖ ಉದ್ದೇಶವಾಗಿದೆ. ಇದೊಂದು ಮಹತ್ವದ ಕಾರ್ಯತಂತ್ರದ ನೀಲನಕ್ಷೆಯಾಗಿದೆ.
- **ಜಾಗತಿಕ ನಾಯಕತ್ವ:** **ಕೃತಕ ಬುದ್ಧಿಮತ್ತೆ** (AI), ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು **ಸೈಬರ್ ಭದ್ರತೆ** ಯಂತಹ ಆಧುನಿಕ ಕ್ಷೇತ್ರಗಳಲ್ಲಿ ಕರ್ನಾಟಕವನ್ನು ಜಾಗತಿಕ ನಾಯಕನನ್ನಾಗಿ ರೂಪಿಸುವುದು ಇದರ ಗುರಿಯಾಗಿದೆ.
- **ಸಮತೋಲಿತ ಬೆಳವಣಿಗೆ:** ನವೆಂಬರ್ 2025 ರಲ್ಲಿ ರಾಜ್ಯ ಸಚಿವ ಸಂಪುಟದಿಂದ ಅನುಮೋದನೆಗೊಂಡ ಈ ನೀತಿಯು, **'ಬೆಂಗಳೂರಿನ ಆಚೆಗೆ'** ಈ ಉಪಕ್ರಮದ ಮೂಲಕ ರಾಜ್ಯದಾದ್ಯಂತ ಸಮಾನ ಬೆಳವಣಿಗೆಗೆ ಒತ್ತು ನೀಡುತ್ತದೆ. **ಐದು ವರ್ಷಗಳ ಅವಧಿಗೆ ಒಟ್ಟು ₹967.12 ಕೋಟಿ** ವೆಚ್ಚವನ್ನು ಅಂದಾಜಿಸಲಾಗಿದೆ.

INSTAKAS

### Key Vision and Targets

- The policy is designed around the **"FRAME" architecture (Frontier & Emerging Technologies, Regional Development, Alignment, Market Creation, Enterprise Facilitation)**

| Objective | Current Status (approx.) | Target by 2030 |
|---|---|---|
| Software Exports | ₹4.09 lakh crore | ₹11.5 lakh crore |
| Job Creation | 12 lakh direct IT jobs, 31 lakh indirect jobs | 90+ lakh direct and indirect jobs |
| IT Sector Contribution to GSDP | 26% | 36% |

## Karnataka space tech policy 2025-2030

**News -**

- **The state government approved the Karnataka Space Technology policy 2025-2030**

### Karnataka's Space Technology Policy 2025–2030

- It was unveiled in November 2025 at the Bengaluru Tech Summit.
- It is a strategic blueprint aimed at establishing the **state as a global hub for space innovation and manufacturing.**

### Key Objectives

- The policy sets ambitious targets for the state's space industry:
- **Market Share**: **Capture 50% of the national space market** (projected at USD 22 billion by 2033) and **5% of the global market.**
- **Investment:** Attract a cumulative investment of **USD 3 billion into the state's space ecosystem.**
- **Talent: Train and upskill 50,000 students and professionals, including 15,000 women, in specialized space domains.**

**ನೀತಿಯ ಪ್ರಮುಖ ದೃಷ್ಟಿಕೋನ ಮತ್ತು ಗುರಿಗಳು:**

- ಈ ನೀತಿಯನ್ನು **"FRAME"** (ಮುಂಬರುವ ಮತ್ತು ಉದಯೋನ್ಮುಖ ತಂತ್ರಜ್ಞಾನಗಳು, ಪ್ರಾದೇಶಿಕ ಅಭಿವೃದ್ಧಿ, ಹೊಂದಾಣಿಕೆ, ಮಾರುಕಟ್ಟೆ ಸೃಷ್ಟಿ, ಉದ್ಯಮ ಸೌಲಭ್ಯ) ಚೌಕಟ್ಟಿನ ಆಧಾರದ ಮೇಲೆ ವಿನ್ಯಾಸಗೊಳಿಸಲಾಗಿದೆ.

| ಉದ್ದೇಶ | ಪ್ರಸ್ತುತ ಸ್ಥಿತಿ (ಅಂದಾಜು) | 2030 ರ ವೇಳೆಗೆ ಗುರಿ |
|---|---|---|
| ಸಾಫ್ಟ್ ವೇರ್ ರಫ್ತು | ₹4.09 ಲಕ್ಷ ಕೋಟಿ | ₹11.5 ಲಕ್ಷ ಕೋಟಿ |
| ಉದ್ಯೋಗ ಸೃಷ್ಟಿ | 12 ಲಕ್ಷ ನೇರ ಐಟಿ ಉದ್ಯೋಗಗಳು<br>31 ಲಕ್ಷ ಪರೋಕ್ಷ ಉದ್ಯೋಗಗಳು | 90 ಲಕ್ಷಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳು |
| ಜಿಎಸ್‌ಡಿಪಿಗೆ (GSDP) ಐಟಿ ವಲಯದ ಕೊಡುಗೆ | 26% | 36% |

**ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ, 2025-2030**

**ಇದೀಗ ಸುದ್ದಿಯಲ್ಲಿದೆ:**

- ರಾಜ್ಯ ಸರ್ಕಾರವು 'ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-2030' ಕ್ಕೆ ಅಧಿಕೃತವಾಗಿ ಅನುಮೋದನೆ ನೀಡಿದೆ.

**ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ, 2025-2030 ರ ಕುರಿತು:**

- ಅನಾವರಣ: ನವೆಂಬರ್ 2025 ರಲ್ಲಿ ನಡೆದ ಪ್ರತಿಷ್ಠಿತ **'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ'**ಯಲ್ಲಿ ಈ ನೀತಿಯನ್ನು ಅನಾವರಣಗೊಳಿಸಲಾಯಿತು.
- ದೃಷ್ಟಿಕೋನ: **ಬಾಹ್ಯಾಕಾಶ ನಾವೀನ್ಯತೆ ಮತ್ತು ಉತ್ಪಾದನಾ ವಲಯದಲ್ಲಿ ರಾಜ್ಯವನ್ನು ಜಾಗತಿಕ ಕೇಂದ್ರವನ್ನಾಗಿ** ರೂಪಿಸುವ ಗುರಿಯನ್ನು ಹೊಂದಿರುವ ಮಹತ್ವದ ಕಾರ್ಯತಂತ್ರದ ನೀಲನಕ್ಷೆಯಾಗಿದೆ.

**ಪ್ರಮುಖ ಉದ್ದೇಶಗಳು**

ಈ ನೀತಿಯು ರಾಜ್ಯದ ಬಾಹ್ಯಾಕಾಶ ಉದ್ಯಮದ ಬೆಳವಣಿಗೆಗಾಗಿ ಈ ಕೆಳಗಿನ ಮಹತ್ವಾಕಾಂಕ್ಷೆಯ ಗುರಿ ಮತ್ತು ಉದ್ದೇಶಗಳನ್ನು ಹೊಂದಿದೆ:

1. **ಮಾರುಕಟ್ಟೆ ಪಾಲು:-** ರಾಷ್ಟ್ರೀಯ ಬಾಹ್ಯಾಕಾಶ ಮಾರುಕಟ್ಟೆಯ **ಶೇ. 50** ರಷ್ಟು ಪಾಲನ್ನು (2033 ರ ವೇಳೆಗೆ 22 ಶತಕೋಟಿ ಅಮೆರಿಕನ್ ಡಾಲರ್ ಎಂದು ಅಂದಾಜಿಸಲಾಗಿದೆ) ಮತ್ತು ಜಾಗತಿಕ ಮಾರುಕಟ್ಟೆಯ **ಶೇ. 5** ರಷ್ಟು ಪಾಲನ್ನು ವಶಪಡಿಸಿಕೊಳ್ಳುವುದು.
2. **ಹೂಡಿಕೆ ಆಕರ್ಷಣೆ:-** ರಾಜ್ಯದ ಬಾಹ್ಯಾಕಾಶ ಪರಿಸರ ವ್ಯವಸ್ಥೆಗೆ ಒಟ್ಟಾರೆಯಾಗಿ **3 ಶತಕೋಟಿ ಅಮೆರಿಕನ್ ಡಾಲರ್** ಹೂಡಿಕೆಯನ್ನು ಆಕರ್ಷಿಸುವುದು.
3. **ಮಾನವ ಸಂಪನ್ಮೂಲ ಅಭಿವೃದ್ಧಿ:-** ವಿಶೇಷ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಗಳಲ್ಲಿ **15,000** ಮಹಿಳೆಯರು ಸೇರಿದಂತೆ ಒಟ್ಟು **50,000** ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಉನ್ನತ ತರಬೇತಿ ಮತ್ತು ಕೌಶಲ್ಯವನ್ನು ಒದಗಿಸುವುದು.

INSTAKAS

- **Startups: Support 500 space startups and MSMEs**, with a goal to facilitate the **design, manufacture, and launch of 50 satellites from Karnataka.**
- **Significance -** The policy **aligns with the Indian Space Policy 2023** and the national goals of **establishing a Bharatiya Antariksh Station by 2035** and **landing an Indian astronaut on the Moon by 2040.**

## Mekedatu reservoir project

**News -**

- The Supreme Court termed Tamil Nadu's application challenging the proposed construction of a reservoir by Karnataka at Mekedatu across the inter-state river Cauvery as **"premature" and refused to entertain it.**

### Connect with the basics - Cauvery River System

- **Origin** - Talakaveri
- **Total length of the River** - 805 km
- **Flowing -** Eastern
- **Flows through -** Karnataka, Kerala, Tamilnadu & Pondicherry.
- **Tributaries -** Arkavathy, Shimsha, Hemavati, Kapila, Honnuhole, Amravati, Lakshmana Tirtha, Kabini, Lokapavani, Bhavani and Noyyal.

### Mekedatu Project

- The Mekedatu project is a balancing reservoir and drinking water project.
- Built across - It is to be built at the confluence of the Cauvery and Arkavathi rivers by the Karnataka Government.
- **Objective -** The project is aimed at solving the drinking water problems of the Bengaluru and Ramanagara district.
- **Significance -** It would also generate 400 MW of hydroelectric power.
- **Concerns with the project -** Almost 63% of the forest area of the Cauvery Wildlife Sanctuary will be submerged because of the project.

4. **ನವೋದ್ಯಮಗಳಿಗೆ ಪ್ರೋತ್ಸಾಹ:- 500 ಬಾಹ್ಯಾಕಾಶ ನವೋದ್ಯಮಗಳು ಹಾಗೂ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ** ಪ್ರೋತ್ಸಾಹ ನೀಡುವುದು. ಕರ್ನಾಟಕದಿಂದಲೇ **50 ಉಪಗ್ರಹಗಳ** ವಿನ್ಯಾಸ, ತಯಾರಿಕೆ ಮತ್ತು ಉಡಾವಣೆಗೆ ಅಗತ್ಯವಾದ ನೆರವು ನೀಡುವುದು.

**ನೀತಿಯ ಮಹತ್ವ**

- ಈ ನೀತಿಯು ಕೇಂದ್ರ ಸರ್ಕಾರದ **'ಭಾರತೀಯ ಬಾಹ್ಯಾಕಾಶ ನೀತಿ 2023'** ರೊಂದಿಗೆ ಮತ್ತು **2035 ರ ವೇಳೆಗೆ 'ಭಾರತೀಯ ಅಂತರಿಕ್ಷ ನಿಲ್ದಾಣ**'ವನ್ನು ಸ್ಥಾಪಿಸುವ ಹಾಗೂ **2040 ರ ವೇಳೆಗೆ ಭಾರತೀಯ ಗಗನಯಾತ್ರಿಯನ್ನು ಚಂದ್ರನ ಮೇಲೆ** ಇಳಿಸುವ ರಾಷ್ಟ್ರೀಯ ಗುರಿಗಳಿಗೆ ಪೂರಕವಾಗಲಿದೆ.

## ಮೇಕೆದಾಟು ಜಲಾಶಯ ಯೋಜನೆ

**ಇದೀಗ ಸುದ್ದಿಯಲ್ಲಿದೆ:**

- **ಕರ್ನಾಟಕ ಮತ್ತು ತಮಿಳುನಾಡು** ನಡುವಿನ ಅಂತರರಾಜ್ಯ ನದಿಯಾದ **ಕಾವೇರಿ ನದಿಗೆ** ಅಡ್ಡಲಾಗಿ **ಮೇಕೆದಾಟುವಿನಲ್ಲಿ** ಕರ್ನಾಟಕವು ಜಲಾಶಯವನ್ನು ನಿರ್ಮಿಸಲು ಉದ್ದೇಶಿಸಿದ ಯೋಜನೆಯನ್ನು ಪ್ರಶ್ನಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು, ಸರ್ವೋಚ್ಚ ನ್ಯಾಯಾಲಯವು "ಅಕಾಲಿಕ" ಎಂದು ಪರಿಗಣಿಸಿ, ವಿಚಾರಣೆಗೆ ಅಂಗೀಕರಿಸಲು ನಿರಾಕರಿಸಿದೆ.

**ಕಾವೇರಿ ನದಿ ವ್ಯವಸ್ಥೆಯ ಬಗ್ಗೆ:**

- ಉಗಮ: **ತಲಕಾವೇರಿ** (ಕೊಡಗು ಜಿಲ್ಲೆಯ ಬ್ರಹ್ಮಗಿರಿ ಬೆಟ್ಟಗಳಲ್ಲಿ).
- ಒಟ್ಟು ಉದ್ದ: **805 ಕಿ.ಮೀ.**
- ಹರಿವಿನ ದಿಕ್ಕು: **ಪೂರ್ವಾಭಿಮುಖ.**
- ಹರಿಯುವ ರಾಜ್ಯಗಳು: **ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಪುದುಚೇರಿ** ಕೇಂದ್ರಾಡಳಿತ ಪ್ರದೇಶ.
- ಉಪನದಿಗಳು: **ಅರ್ಕಾವತಿ, ಶಿಂಷಾ, ಹೇಮಾವತಿ, ಕಪಿಲಾ, ಹೊನ್ನುಹೊಳೆ, ಅಮರಾವತಿ, ಲಕ್ಷ್ಮಣತೀರ್ಥ, ಕಬಿನಿ, ಲೋಕಪಾವನಿ, ಭವಾನಿ ಮತ್ತು ನೊಯ್ಯಲ್.**

**ಮೇಕೆದಾಟು ಯೋಜನೆಯ ಬಗ್ಗೆ:**

- **ಯೋಜನೆಯ ಸ್ವರೂಪ:** ಮೇಕೆದಾಟು ಯೋಜನೆಯು ಒಂದು **ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ** ಪೂರೈಕೆ ಯೋಜನೆಯಾಗಿದೆ.
- ನಿರ್ಮಾಣ ಸ್ಥಳ: ಇದನ್ನು **ಕಾವೇರಿ ಮತ್ತು ಅರ್ಕಾವತಿ** ನದಿಗಳ ಸಂಗಮದಲ್ಲಿ ನಿರ್ಮಿಸಲು ಕರ್ನಾಟಕ ಸರ್ಕಾರವು ಉದ್ದೇಶಿಸಿದೆ.
- ಉದ್ದೇಶ: **ಬೆಂಗಳೂರು ಮಹಾನಗರ ಮತ್ತು ರಾಮನಗರ ಜಿಲ್ಲೆಯ ಕುಡಿಯುವ ನೀರಿನ** ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹರಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.
- **ಮಹತ್ವ :** ಕುಡಿಯುವ ನೀರು ಪೂರೈಕೆಯ ಜೊತೆಗೆ, ಈ ಯೋಜನೆಯು **400 ಮೆಗಾವ್ಯಾಟ್ ಸಾಮರ್ಥ್ಯದ ಜಲವಿದ್ಯುತ್ ಉತ್ಪಾದನೆಗೂ** ಸಹಕಾರಿಯಾಗಲಿದೆ.
- **ಯೋಜನೆಯ ಬಗೆಗಿನ ಕಳವಳಗಳು:** ಈ ಯೋಜನೆಯ ಅನುಷ್ಠಾನದಿಂದಾಗಿ **"ಕಾವೇರಿ ವನ್ಯಜೀವಿ ಧಾಮ"ದ ಸುಮಾರು 63%** ರಷ್ಟು ಅರಣ್ಯ ಪ್ರದೇಶವು **ಮುಳುಗಡೆಯಾಗುವ ಸಾಧ್ಯತೆಯಿದೆ** ಎಂಬ ಆತಂಕ ವ್ಯಕ್ತವಾಗಿದೆ.

## Infosys Prize:

**News -**

- A scholar of Prakrit and Kannada poetics and a Bengaluru-based scientist are among six winners of the Infosys Prize 2025.

| Award | Awardee | Category |
|---|---|---|
| Infosys Prize 2025 | Nikhil Agarwal | Economics |
| Infosys Prize 2025 | Sushant Sachdeva | Engineering and Computer Science |
| Infosys Prize 2025 | Andrew Ollett | Humanities and Social Sciences |
| Infosys Prize 2025 | Anjana Badrinarayanan | Life Sciences |
| Infosys Prize 2025 | Sabyasachi Mukherjee | Mathematical Sciences |
| Infosys Prize 2025 | Karthish Manthiram | Physical Sciences |

### Additional Information - Infosys prize

- The Infosys Science Foundation (ISF) announced the winners of the **Infosys Prize 2025 in six categories-**

1. Economics
2. Engineering and Computer Science,
3. Humanities and Social Sciences,
4. Life Sciences,
5. Mathematical Sciences
6. Physical Sciences.

- The prize honours the **accomplishments of individuals whose research and scholarship significantly impact India.**
- The prize for each category comprises a **gold medal, a citation, and a prize purse of $100,000** (or its equivalent in rupees).

### Karnataka Menstrual Leave Policy-2025

**News -**

- **State govt. notifies menstrual leave policy with a day's off a month**

### Karnataka Menstrual Leave Policy-2025

- Women in the state of Karnataka will be entitled to up to **12 menstrual leaves annually.**
- **This development marks a significant step in recognising menstrual health at a workplace and rights issue.**

## ಇನ್ಫೋಸಿಸ್ ಪ್ರಶಸ್ತಿ, 2025

**ಇದೀಗ ಸುದ್ದಿಯಲ್ಲಿದೆ:**

- 2025ನೇ ಸಾಲಿನ ಪ್ರತಿಷ್ಠಿತ ಇನ್ಫೋಸಿಸ್ ಪ್ರಶಸ್ತಿ ಘೋಷಣೆಯಾಗಿದ್ದು, ಪ್ರಶಸ್ತಿ ಪುರಸ್ಕೃತರಾಗಿ ಆಯ್ಕೆಯಾದ ಒಟ್ಟು **ಆರು ಗಣ್ಯರ** ಪಟ್ಟಿಯಲ್ಲಿ **ಪ್ರಾಕೃತ ಮತ್ತು ಕನ್ನಡ ಕಾವ್ಯಶಾಸ್ತ್ರದ** ವಿದ್ವಾಂಸರಾದ **ಆಂಡ್ರ್ಯೂ ಒಲೆಟ್** ಹಾಗೂ ಬೆಂಗಳೂರು ಮೂಲದ ವಿಜ್ಞಾನಿ **ಅಂಜನಾ ಬದ್ರಿನಾರಾಯಣನ್** ಅವರು ಸೇರಿದ್ದಾರೆ.

**2025 ನೇ ಸಾಲಿನ ಇನ್ಫೋಸಿಸ್ ಪ್ರಶಸ್ತಿ ಪುರಸ್ಕೃತರ ವಿವರಣೆ:**

| ವಿಭಾಗ | ಪುರಸ್ಕೃತರು |
|---|---|
| **ಅರ್ಥಶಾಸ್ತ್ರ** | ನಿಖಿಲ್ ಅಗರ್ವಾಲ್ |
| **ಇಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ** | ಸುಶಾಂತ್ ಸಚ್‌ದೇವ |
| **ಮಾನವಿಯ ಮತ್ತು ಸಮಾಜ ವಿಜ್ಞಾನ** | ಆಂಡ್ರ್ಯೂ ಒಲೆಟ್ |
| **ಜೀವ ವಿಜ್ಞಾನ** | ಅಂಜನಾ ಬದ್ರಿನಾರಾಯಣನ್ |
| **ಗಣಿತ ವಿಜ್ಞಾನ** | ಸವ್ಯಸಾಚಿ ಮುಖರ್ಜಿ |
| **ಭೌತ ವಿಜ್ಞಾನ** | ಕಾರ್ತಿಶ್ ಮಂತಿರಾಮ್ |

**ಇನ್ಫೋಸಿಸ್ ಪ್ರಶಸ್ತಿಯ ಬಗ್ಗೆ:**

- ಘೋಷಣೆ: **ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನ** (ISF), ಆರು ವಿಭಿನ್ನ ವಿಭಾಗಗಳಲ್ಲಿ 2025ನೇ ಸಾಲಿನ ಪ್ರಶಸ್ತಿ ವಿಜೇತರನ್ನು ಘೋಷಿಸಿದೆ. ಅವುಗಳೆಂದರೆ:

1. ಅರ್ಥಶಾಸ್ತ್ರ
2. ಇಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ
3. ಮಾನವಿಯ ಮತ್ತು ಸಮಾಜ ವಿಜ್ಞಾನ
4. ಜೀವ ವಿಜ್ಞಾನ
5. ಗಣಿತ ವಿಜ್ಞಾನ
6. ಭೌತ ವಿಜ್ಞಾನ

- **ಉದ್ದೇಶ:** ಭಾರತದ ಪ್ರಗತಿಯ ಮೇಲೆ ಗಮನಾರ್ಹ ಪ್ರಭಾವ ಬೀರುವಂತಹ **ಸಂಶೋಧನೆ ಮತ್ತು ಪಾಂಡಿತ್ಯಪೂರ್ಣ ಸಾಧನೆಗಳನ್ನು ಮಾಡಿದ ವ್ಯಕ್ತಿಗಳನ್ನು** ಗುರುತಿಸಿ ಗೌರವಿಸುವುದು ಈ ಪ್ರಶಸ್ತಿಯ ಮೂಲ ಉದ್ದೇಶವಾಗಿದೆ.
- **ಪ್ರಶಸ್ತಿಯ ಸ್ವರೂಪ:** ಪ್ರತಿಯೊಂದು ವಿಭಾಗದ ಪ್ರಶಸ್ತಿಯು **ಚಿನ್ನದ ಪದಕ, ಪ್ರಶಂಸಾ ಪತ್ರ ಮತ್ತು $100,000** (ಅಥವಾ ಅದಕ್ಕೆ ಸಮನಾದ ಭಾರತೀಯ ರೂಪಾಯಿ ಮೌಲ್ಯ) ನಗದು ಬಹುಮಾನವನ್ನು ಒಳಗೊಂಡಿರುತ್ತದೆ.

## ಕರ್ನಾಟಕ ಋತು ಸ್ರಾವ ರಜೆ ನೀತಿ, 2025

**ಇದೀಗ ಸುದ್ದಿಯಲ್ಲಿದೆ:**

- ಕರ್ನಾಟಕ ರಾಜ್ಯ ಸರ್ಕಾರವು **ಮಹಿಳಾ ಉದ್ಯೋಗಿಗಳಿಗೆ ತಿಂಗಳಿಗೆ ಒಂದು ದಿನದ ವೇತನ ಸಹಿತ ರಜೆ** ನೀಡುವ 'ಋತು ಸ್ರಾವ ರಜೆ ನೀತಿ'ಯನ್ನು ಅಧಿಕೃತವಾಗಿ ಜಾರಿಗೊಳಿಸಿದೆ.

### ಕರ್ನಾಟಕ ಋತು ಸ್ರಾವ ರಜೆ ನೀತಿ-2025 ರ ಬಗ್ಗೆ:

- **ಅರ್ಹತೆ:** ಈ ನೀತಿಯ ಅನ್ವಯ, ರಾಜ್ಯದ ಮಹಿಳಾ ಉದ್ಯೋಗಿಗಳು **ವಾರ್ಷಿಕವಾಗಿ 12 ದಿನಗಳ** ಋತು ಸ್ರಾವ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
- **ಆರೋಗ್ಯ ಮತ್ತು ಹಕ್ಕುಗಳು:** ಉದ್ಯೋಗ ಸ್ಥಳದಲ್ಲಿ ಮಹಿಳೆಯರ ಋತು ಸ್ರಾವದ **ಆರೋಗ್ಯ ಮತ್ತು ಹಕ್ಕುಗಳನ್ನು** ಗುರುತಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ.

- **The Dr. Sapna S committee was** appointed by the Karnataka government **to study and recommend menstrual leave policy**
- **Significance - It aims to create a more inclusive and stigma-free workplace** and is considered a landmark decision in India, as it covers both government and private sectors comprehensively.

**State govt. notifies menstrual leave policy with a day's off a month**

**Key features -**

- Women between **18 and 52 are eligible to seek menstrual leave, and it will be applicable for permanent, contract or outsourced workforce.**
- The policy will be applicable to the workforce employed in establishments registered under the **Factories Act, 1948; the Karnataka Shops and Establishments Act, 1961; the Plantation Workers Act 1951; the Beedi and Cigar Workers (Conditions of Employment) Act, 1966, and the Motor Transport Workers Act, 1961.**
- The Government Order (GO) **does not specify anything on leaves for government employees or anganwadi workers or Accredited Social Health Activists (ASHAs).**
- As per the conditions imposed in the GO, **there will be no provision to carry over the leave to the next month and women are not mandated to provide any medical certificate**

**Sanmitra initiative**

**News -**

- **The Karnataka State Police Department has rolled out 'Sanmitra' ( a good friend).**

**Sanmitra initiative**

- It is an initiative aimed **at providing sustained support, rehabilitation, and monitoring for individuals struggling with substance abuse.**
- The programme seeks to address the issue not just through enforcement, but with **empathy, guidance and structured rehabilitation**

- **ಸಮಿತಿ:** ಈ ನೀತಿಯ ರೂಪುರೇಷೆಗಳನ್ನು ಅಧ್ಯಯನ ಮಾಡಲು ಮತ್ತು ಸೂಕ್ತ ಶಿಫಾರಸುಗಳನ್ನು ನೀಡಲು ಸರ್ಕಾರವು **ಡಾ. ಸಪ್ನಾ ಎಸ್.** ನೇತೃತ್ವದ ಸಮಿತಿಯನ್ನು ಸರ್ಕಾರವು ನೇಮಿಸಿತ್ತು.
- **ಉದ್ದೇಶ ಮತ್ತು ಮಹತ್ವ:** ಉದ್ಯೋಗದ ಸ್ಥಳವನ್ನು ಹೆಚ್ಚು ಸಮಗ್ರ ಮತ್ತು **ಮುಜುಗರ ರಹಿತವನ್ನಾಗಿ** ಮಾಡುವುದು ಇದರ ಮೂಲ ಉದ್ದೇಶವಾಗಿದೆ. ಇದು **ಸರಕಾರಿ** ಮತ್ತು **ಖಾಸಗಿ** ಕ್ಷೇತ್ರಗಳೆರಡರಲ್ಲೂ ವ್ಯಾಪಕ ವ್ಯಾಪ್ತಿಯನ್ನು ಹೊಂದಿರುವುದರಿಂದ, ಭಾರತದ ಪಾಲಿಗೆ ಇದು ಐತಿಹಾಸಿಕ ಹೆಜ್ಜೆಯಾಗಿದೆ.

ನೀತಿಯ ಪ್ರಮುಖ ಲಕ್ಷಣಗಳು

- ವಯೋಮಿತಿ ಮತ್ತು ವ್ಯಾಪ್ತಿ: **18 ರಿಂದ 52 ವರ್ಷ** ವಯಸ್ಸಿನ ಮಹಿಳೆಯರು ಋತು ಸ್ರಾವ ರಜೆ ಪಡೆಯಲು ಅರ್ಹರಾಗಿರುತ್ತಾರೆ. ಇದು **ಕಾಯಂ, ಗುತ್ತಿಗೆ** ಮತ್ತು **ಹೊರಗುತ್ತಿಗೆ** ಆಧಾರಿತ ಸಿಬ್ಬಂದಿಗೆ ಅನ್ವಯಿಸುತ್ತದೆ.
- **ಅನ್ವಯವಾಗುವ ಕಾಯಿದೆಗಳು:** ಈ ನೀತಿಯು ಕೆಳಕಂಡ ಕಾಯಿದೆಗಳಡಿ ನೋಂದಾಯಿತವಾದ ಸಂಸ್ಥೆಗಳಿಗೆ ಅನ್ವಯಿಸುತ್ತದೆ:
  - **ಕಾರ್ಖಾನೆಗಳ ಕಾಯಿದೆ, 1948.**
  - **ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ, 1961.**
  - **ತೋಟ (ಪ್ಲಾಂಟೇಶನ್) ದ ಕಾರ್ಮಿಕರ ಕಾಯಿದೆ, 1951.**
  - **ಬೀಡಿ ಮತ್ತು ಸಿಗಾರ್ ಕಾರ್ಮಿಕರ (ಉದ್ಯೋಗದ ಷರತ್ತುಗಳು) ಕಾಯಿದೆ, 1966.**
  - **ಮೋಟಾರು ಸಾರಿಗೆ ಕಾರ್ಮಿಕರ ಕಾಯಿದೆ, 1961.**
- ಷರತ್ತುಗಳು: ಈ ರಜೆಯನ್ನು ಬಳಸಿಕೊಳ್ಳದಿದ್ದರೆ **ಮುಂದಿನ ತಿಂಗಳಿಗೆ ವರ್ಗಾಯಿಸಿಕೊಳ್ಳಲು ಅವಕಾಶವಿರುವುದಿಲ್ಲ.** ರಜೆ ಪಡೆಯಲು ಯಾವುದೇ **ವೈದ್ಯಕೀಯ ಪ್ರಮಾಣಪತ್ರ** ಸಲ್ಲಿಸುವುದು ಕಡ್ಡಾಯವಲ್ಲ.
- ಪ್ರಸ್ತುತ ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ, **ಸರ್ಕಾರಿ ನೌಕರರು, ಅಂಗನವಾಡಿ ಕಾರ್ಯಕರ್ತರು ಅಥವಾ ಆಶಾ ಕಾರ್ಯಕರ್ತರಿಗೆ** ಈ ರಜೆ ಅನ್ವಯವಾಗುವ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ.

**"ಸನ್ಮಿತ್ರ" ಉಪಕ್ರಮ**

**ಇದೀಗ ಸುದ್ದಿಯಲ್ಲಿದೆ:**

- **ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣದ** ನಿಟ್ಟಿನಲ್ಲಿ, 'ಸನ್ಮಿತ್ರ' (ಒಬ್ಬ ಒಳ್ಳೆಯ ಸ್ನೇಹಿತ) ಎಂಬ ವಿನೂತನ ಯೋಜನೆಯನ್ನು ಜಾರಿಗೆ ತಂದಿದೆ.

'ಸನ್ಮಿತ್ರ' ಉಪಕ್ರಮದದ ಬಗ್ಗೆ

- ಉದ್ದೇಶ: **ಮಾದಕ ದ್ರವ್ಯ ವ್ಯಸನದಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ನಿರಂತರ ಬೆಂಬಲ, ಪುನರ್ವಸತಿ ಮತ್ತು ಮೇಲ್ವಿಚಾರಣೆಯನ್ನು** ಒದಗಿಸುವುದು ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ.
- ವಿಶಿಷ್ಟ ವಿಧಾನ: ಈ ಕಾರ್ಯಕ್ರಮವು ಮಾದಕ ವ್ಯಸನದ ಸಮಸ್ಯೆಯನ್ನು ಕೇವಲ **ಕಾನೂನು ಜಾರಿ** ದೃಷ್ಟಿಕೋನದಿಂದ ನೋಡದೆ, **ಸಹಾನುಭೂತಿ, ಸೂಕ್ತ ಮಾರ್ಗದರ್ಶನ ಮತ್ತು ರಚನಾತ್ಮಕ ಪುನರ್ವಸತಿಯ** ಮೂಲಕ ಪರಿಹರಿಸಲು ಯತ್ನಿಸುತ್ತದೆ.

- Under the initiative, every **police station across the State will establish a dedicated Sanmitra helpdesk.**
- Police personnel designated under Sanmitra must maintain **constant contact with affected individuals, engage with their families, and coordinate with mental health professionals to track monthly progress.**
- Station heads must collect progress reports from **Sanmitra personnel every two weeks and submit confidential monthly reports to the respective SP or DCP in sealed covers.**

## Tata Transformation Prize

**News -**

- The **New York Academy of Sciences and Tata Sons** announced three scientists based out of Bengaluru as the winners of the 2025 Tata Transformation Prize.
  **Tata Transformation Prize** winners are

1. **Padubidri V. Shivaprasad of National Centre for Biological Sciences, and**
2. **Balasubramanian Gopal of** Indian Institute of Science for research in food security, **and**
3. **Ambarish Ghosh** of **sustainability and healthcare, respectively.**

- The winners were chosen from a pool of 212 nominations spanning 27 Indian States by an international jury of scientists, clinicians, technologists, and engineers.
- **Each winner will receive ₹2 crore to advance their research and scale its real-world impact.**

## Child Rights Index

**News**

- The **Karnataka State Commission for Protection of Child Rights (KSCPCR)** launched a **Child Rights Index,** a first-of-its-kind document in the country.

**Child Rights Index**

- The **document details the laws and schemes in each department for children,** how effective the implementation of the same has been and what changes can be adopted for improving things.

- **ಸನ್ಮಿತ್ರ ಸಹಾಯವಾಣಿ:** ರಾಜ್ಯದ ಪ್ರತಿಯೊಂದು **ಪೊಲೀಸ್ ಠಾಣೆಯಲ್ಲಿ** ಮೀಸಲಾದ **'ಸನ್ಮಿತ್ರ ಸಹಾಯವಾಣಿ'** ಅನ್ನು ಸ್ಥಾಪಿಸಲಾಗುವುದು.
- **ಸಿಬ್ಬಂದಿಯ ಜವಾಬ್ದಾರಿ:** ಸನ್ಮಿತ್ರ ಯೋಜನೆಯಡಿ ನಿಯೋಜಿತರಾದ ಪೊಲೀಸ್ ಸಿಬ್ಬಂದಿ , **ಬಾಧಿತ ವ್ಯಕ್ತಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು.** ಅವರ **ಕುಟುಂಬದ** ಸದಸ್ಯರೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಮತ್ತು **ಮಾನಸಿಕ ಆರೋಗ್ಯ ತಜ್ಞರೊಂದಿಗೆ** ಸಮನ್ವಯ ಸಾಧಿಸುವ ಮೂಲಕ ವ್ಯಕ್ತಿಯ ಚೇತರಿಕೆಯ ಮಾಸಿಕ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಬೇಕು.
- ವರದಿ ನಿರ್ವಹಣೆ: **ಪೊಲೀಸ್ ಠಾಣಾಧಿಕಾರಿಗಳು ಪ್ರತಿ ಎರಡು ವಾರಗಳಿಗೊಮ್ಮೆ ಸನ್ಮಿತ್ರ ಸಿಬ್ಬಂದಿಯಿಂದ ಪ್ರಗತಿಯ ವರದಿಗಳನ್ನು ಸಂಗ್ರಹಿಸಬೇಕು.** ತದನಂತರ, **ಗೌಪ್ಯ ಮಾಸಿಕ ವರದಿಗಳನ್ನು** ಮೊಹರು ಮಾಡಿದ ಲಕೋಟೆಗಳಲ್ಲಿ ಸಂಬಂಧಪಟ್ಟ **ಪೊಲೀಸ್ ವರಿಷ್ಠಾಧಿಕಾರಿ** (SP) ಅಥವಾ **ಉಪ ಪೊಲೀಸ್ ಆಯುಕ್ತರಿಗೆ** (DCP) ಸಲ್ಲಿಸಬೇಕು.

## ಟಾಟಾ ಟ್ರಾನ್ಸ್‌ಫಾರ್ಮೇಷನ್ (ಪರಿವರ್ತನಾ) ಪ್ರಶಸ್ತಿ, 2025

**ಇದೀಗ ಸುದ್ದಿಯಲ್ಲಿದೆ:**

- **ನ್ಯೂಯಾರ್ಕ್ ಅಕಾಡೆಮಿ ಆಫ್ ಸೈನ್ಸಸ್ ಮತ್ತು ಟಾಟಾ ಸನ್ಸ್** ಸಂಸ್ಥೆಗಳು ಜಂಟಿಯಾಗಿ, 2025ನೇ ಸಾಲಿನ ಪ್ರತಿಷ್ಠಿತ 'ಟಾಟಾ ಟ್ರಾನ್ಸ್‌ಫಾರ್ಮೇಷನ್ ಪ್ರಶಸ್ತಿ'ಗೆ ಬೆಂಗಳೂರು ಮೂಲದ ಮೂವರು ವಿಜ್ಞಾನಿಗಳನ್ನು ವಿಜೇತರನ್ನಾಗಿ ಘೋಷಿಸಿವೆ.

**ಪ್ರಶಸ್ತಿ ವಿಜೇತರು ಮತ್ತು ಅವರ ಕ್ಷೇತ್ರಗಳು:**

1. **ಪಡುಬಿದ್ರಿ ವಿ. ಶಿವಪ್ರಸಾದ್:** ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ (NCBS).
2. **ಬಾಲಸುಬ್ರಮಣಿಯನ್ ಗೋಪಾಲ್:** ಭಾರತೀಯ ವಿಜ್ಞಾನ ಸಂಸ್ಥೆ (IISc). ಇವರು ಆಹಾರ ಭದ್ರತೆಯಲ್ಲಿನ ಸಂಶೋಧನೆಗಾಗಿ ಆಯ್ಕೆಯಾಗಿದ್ದಾರೆ.
3. **ಅಂಬರೀಶ್ ಘೋಷ್:** ಇವರು ಸುಸ್ಥಿರತೆ ಮತ್ತು ಆರೋಗ್ಯ ರಕ್ಷಣೆ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಾಗಿ ಆಯ್ಕೆಯಾಗಿದ್ದಾರೆ.

**ಆಯ್ಕೆ ಪ್ರಕ್ರಿಯೆ ಮತ್ತು ಪ್ರಶಸ್ತಿ ವಿವರ**

- **ಆಯ್ಕೆ:** ದೇಶದ 27 ರಾಜ್ಯಗಳಿಂದ ಸಲ್ಲಿಕೆಯಾಗಿದ್ದ 212 ನಾಮನಿರ್ದೇಶನಗಳನ್ನು ಪರಿಶೀಲಿಸಿ, ವಿಜ್ಞಾನಿಗಳು, ವೈದ್ಯರು, ತಂತ್ರಜ್ಞರು ಮತ್ತು ಇಂಜಿನಿಯರ್‌ಗಳನ್ನೊಳಗೊಂಡ ಅಂತರರಾಷ್ಟ್ರೀಯ ತೀರ್ಪುಗಾರರ ಮಂಡಳಿಯು ಈ ವಿಜೇತರನ್ನು ಅಂತಿಮಗೊಳಿಸಿದೆ.
- **ಬಹುಮಾನ:** ಪ್ರತಿಯೊಬ್ಬ ವಿಜೇತರಿಗೆ ತಮ್ಮ ಸಂಶೋಧನೆಯನ್ನು ಮುಂದುವರಿಸಲು ಮತ್ತು ಅದರ ನೈಜ ಪರಿಣಾಮವನ್ನು ವಿಸ್ತರಿಸಲು **ತಲಾ ₹2 ಕೋಟಿ ಅನುದಾನವನ್ನು** ನೀಡಲಾಗುತ್ತದೆ.

## ಮಕ್ಕಳ ಹಕ್ಕುಗಳ ಸೂಚ್ಯಂಕ

ಇದೀಗ ಸುದ್ದಿಯಲ್ಲಿದೆ:

- **ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು (KSCPCR)** 'ಮಕ್ಕಳ ಹಕ್ಕುಗಳ ಸೂಚ್ಯಂಕ'ವನ್ನು ಬಿಡುಗಡೆ ಮಾಡಿದೆ. ಇಡೀ ದೇಶದಲ್ಲೇ ಇಂತಹದೊಂದು ಸಮಗ್ರ ದಾಖಲೆಯನ್ನು ಸಿದ್ಧಪಡಿಸಿರುವುದು ಇದೇ ಮೊದಲಾಗಿದೆ.

ಮಕ್ಕಳ ಹಕ್ಕುಗಳ ಸೂಚ್ಯಂಕದ ಬಗ್ಗೆ:

- **ಸಮಗ್ರ ಮಾಹಿತಿ:** ಈ ದಾಖಲೆಯು **ಮಕ್ಕಳ ಕಲ್ಯಾಣಕ್ಕಾಗಿ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಜಾರಿಯಲ್ಲಿರುವ ಕಾನೂನುಗಳು ಮತ್ತು ಯೋಜನೆಗಳ** ವಿವರವಾದ ಮಾಹಿತಿಯನ್ನು ಒದಗಿಸುತ್ತದೆ.

- **It is conceived to ensure the rights, protection and welfare of children**

**State at 10th position in Child Rights Index**

- **Karnataka's performance** in realising child rights and well-being is **'moderate'** and the State ranks 10th among 30 States, according to the **Child Rights Index 2023.**
- The index is calculated considering six dimensions:
  1. **Right to Life,**
  2. **Right to an Enabling Environment to Live,**
  3. **Right to Nutrition,**
  4. **Right to Protection,**
  5. **Right to Education, and**
  6. **Right to Participation.**

## Bengaluru Tech Summit (BTS)

**News-**

- **The Bengaluru Tech Summit (BTS) 2025 took place** from November 18 to 20, 2025, at the Bangalore International Exhibition Centre (BIEC).
- **2025 theme - "Futurise,"**

## Bengaluru Tech Summit (BTS)

- **Organizers:** It is an initiative of the **Department of Electronics, Information Technology and Biotechnology, Government of Karnataka,** in partnership with industry stakeholders.
- **Significance - . The summit reinforced Karnataka's position as a global technology and innovation hub by bringing together innovators, researchers, entrepreneurs, and policymakers**

## Spider Malenadu



- **ಮೌಲ್ಯಮಾಪನ:** ಯೋಜನೆಗಳ ಅನುಷ್ಠಾನದ ಪರಿಣಾಮಕಾರಿತ್ವವನ್ನು ಇದು ವಿಶ್ಲೇಷಿಸುತ್ತದೆ. ಜೊತೆಗೆ, ಪ್ರಸ್ತುತ ವ್ಯವಸ್ಥೆಯನ್ನು ಸುಧಾರಿಸಲು ಅಗತ್ಯವಾದ ಬದಲಾವಣೆಗಳನ್ನು ಸೂಚಿಸುತ್ತದೆ.
- **ಗುರಿ: ಮಕ್ಕಳ ಹಕ್ಕುಗಳು, ರಕ್ಷಣೆ ಮತ್ತು ಕಲ್ಯಾಣವನ್ನು ಖಾತ್ರಿಪಡಿಸುವುದು** ಇದರ ಪ್ರಮುಖ ಗುರಿಯಾಗಿದೆ.

**ಈ ಸೂಚ್ಯಂಕದಲ್ಲಿ ಕರ್ನಾಟಕದ 10ನೇ ಸ್ಥಾನ ಪಡೆದಿದೆ:**

- **ಶ್ರೇಯಾಂಕ:** ಮಕ್ಕಳ ಹಕ್ಕುಗಳು ಮತ್ತು ಯೋಗಕ್ಷೇಮವನ್ನು ಸಾಕಾರಗೊಳಿಸುವಲ್ಲಿ ಕರ್ನಾಟಕದ ಸಾಧನೆಯು **'ಮಧ್ಯಮ' ಮಟ್ಟದಲ್ಲಿದೆ. 'ಮಕ್ಕಳ ಹಕ್ಕುಗಳ ಸೂಚ್ಯಂಕ 2023'** ರ ವರದಿಯ ಪ್ರಕಾರ, ದೇಶದ **30 ರಾಜ್ಯಗಳ ಪೈಕಿ ಕರ್ನಾಟಕವು 10ನೇ ಸ್ಥಾನ ಪಡೆದಿದೆ.**
- **ಆಯಾಮಗಳು** : ಈ ಸೂಚ್ಯಂಕವನ್ನು ಈ ಕೆಳಗಿನ ಆರು ಪ್ರಮುಖ ಆಯಾಮಗಳ ಆಧಾರದ ಮೇಲೆ ಲೆಕ್ಕಹಾಕಲಾಗಿದೆ:
  1. ಜೀವಿಸುವ ಹಕ್ಕು
  2. ಬದುಕಲು ಪೂರಕವಾದ ಪರಿಸರದ ಹಕ್ಕು
  3. ಪೋಷಣೆಯ ಹಕ್ಕು
  4. ರಕ್ಷಣೆಯ ಹಕ್ಕು
  5. ಶಿಕ್ಷಣದ ಹಕ್ಕು
  6. ಭಾಗವಹಿಸುವಿಕೆಯ ಹಕ್ಕು

## ಬೆಂಗಳೂರು ತಂತ್ರಜ್ಞಾನ ಶೃಂಗಸಭೆ, 2025 (BTS)

**ಇದೀಗ ಸುದ್ದಿಯಲ್ಲಿದೆ:**

- 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2025' (BTS 2025) ನವೆಂಬರ್ 18 ರಿಂದ 20 ರವರೆಗೆ **'ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ'**ದಲ್ಲಿ (BIEC) ಯಶಸ್ವಿಯಾಗಿ ಜರುಗಿತು.

**ಬೆಂಗಳೂರು ತಂತ್ರಜ್ಞಾನ ಶೃಂಗಸಭೆ, 2025 ರ ಪ್ರಮುಖ ಅಂಶಗಳು:**

- 2025ರ ಧ್ಯೇಯವಾಕ್ಯ: **"ಫ್ಯೂಚರೈಸ್"**
- ಆಯೋಜಕರು: ಕರ್ನಾಟಕ ಸರ್ಕಾರದ **ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು,** ಉದ್ಯಮ ವಲಯದ ಪಾಲುದಾರರ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು.
- ಮಹತ್ವ: ಜಾಗತೀಕ ನಾವೀನ್ಯಕಾರರು, ಸಂಶೋಧಕರು, ಉದ್ಯಮಿಗಳು ಮತ್ತು ನೀತಿ ನಿರೂಪಕರನ್ನು ಒಂದೇ ವೇದಿಕೆಯಡಿ ತರುವುದು ಈ ಶೃಂಗಸಭೆಯ ಉದ್ದೇಶವಾಗಿತ್ತು. ಈ ಮೂಲಕ, **ಜಾಗತೀಕ ತಂತ್ರಜ್ಞಾನ ಮತ್ತು ನಾವೀನ್ಯತಾ ಕೇಂದ್ರವಾಗಿ** ಕರ್ನಾಟಕದ ಸ್ಥಾನಮಾನವನ್ನು ಈ ಶೃಂಗಸಭೆಯು ಮತ್ತಷ್ಟು ಬಲಪಡಿಸಿದೆ.

## ಮಲೆನಾಡು ಜೇಡ



INSTAKAS

**News -**

- **Researchers discover new species of spider in a Chikkamagaluru village, name it after Malenadu**
- A team of researchers exploring biodiversity in the Western Ghats has discovered a **new species of spider belonging to pilia, a genus of jumping spiders, at Madhugundi village in Mudigere taluk of Chikkamagaluru.**
- The researchers named it "**Pilia malenadu**", to give credit to the place it was found

## KIA becomes India's first airport to achieve Level 3 Accessibility Enhancement Accreditation

- The Kempegowda International Airport (KIA) has become the first airport in **India to be awarded Level 3 in the Accessibility Enhancement Accreditation (AEA) programme by the Airports Council International (ACI).**

## Fishermen's Distress Relief Fund

**News -**

- **In a bid to strengthen the State's fisheries sector, Chief Minister Siddaramaiah announced that the compensation under the Fishermen's Distress Relief Fund had been increased from ₹6 lakh to ₹10 lakh.**
- Karnataka produced 9.63 lakh tonnes of fish in 2024–25, ranking third in total fish production nationwide.

## Fishermen's Distress Relief Fund

- **Purpose: To provide immediate financial relief and support to fishermen and their families in distress due to accidents, natural calamities, or death while at sea or on land.**
- **Administering Authority: The Department of Animal Husbandry and Fisheries, Government of Karnataka.**
- **Compensation Amount:** The compensation amount for the family of a missing or deceased fisherman while at sea has **recently been increased from ₹6 lakh to ₹10 lakh in Karnataka**.

**ಇದೀಗ ಸುದ್ದಿಯಲ್ಲಿದೆ:**

- **ಚಿಕ್ಕಮಗಳೂರು** ಜಿಲ್ಲೆಯ ಗ್ರಾಮವೊಂದರಲ್ಲಿ ಜಿಗಿಯುವ ಜೇಡಗಳ ಹೊಸ ಪ್ರಭೇದವೊಂದನ್ನು ಪತ್ತೆಹಚ್ಚಿರುವ ಸಂಶೋಧಕರು, ಅದಕ್ಕೆ ಮಲೆನಾಡಿನ ಹೆಸರನ್ನಿಟ್ಟು ಗೌರವಿಸಿದ್ದಾರೆ.

**ಶೋಧನೆಯ ವಿವರಗಳು:**

- **ಅನ್ವೇಷಣೆ: ಪಶ್ಚಿಮ ಘಟ್ಟಗಳಲ್ಲಿ** ಕಂಡುಬರುವ ಜೀವವೈವಿಧ್ಯತೆಯ ಕುರಿತು ಅಧ್ಯಯನ ನಡೆಸುತ್ತಿದ್ದ ಸಂಶೋಧಕರ ತಂಡವು ಈ ಹೊಸ ಪ್ರಭೇದವನ್ನು ಗುರುತಿಸಿದೆ.
- **ಸ್ಥಳ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಮಧುಗುಂಡಿ ಗ್ರಾಮದಲ್ಲಿ** ಈ ಜೇಡ ಪತ್ತೆಯಾಗಿದೆ.
- **ವರ್ಗೀಕರಣ:** ಇದು **'ಪಿಲಿಯಾ' ಎಂಬ ಜಿಗಿಯುವ ಜೇಡಗಳ** ಕುಲಕ್ಕೆ ಸೇರಿದ ಹೊಸ ಪ್ರಭೇದವಾಗಿದೆ.
- ನಾಮಕರಣ: ಈ ಜೇಡವು ಪತ್ತೆಯಾದ ಭೌಗೋಳಿಕ ಪ್ರದೇಶ ಮಲೆನಾಡಿಗೆ ಗೌರವ ಸಲ್ಲಿಸುವ ಸಂಕೇತವಾಗಿ , ಸಂಶೋಧಕರು ಇದಕ್ಕೆ ವೈಜ್ಞಾನಿಕವಾಗಿ **"ಪಿಲಿಯಾ ಮಲೆನಾಡು"** ಎಂದು ನಾಮಕರಣ ಮಾಡಿದ್ದಾರೆ.

## ಹಂತ -3 ರ 'ಪ್ರವೇಶಸಾಧ್ಯತೆ ವರ್ಧನೆ ಮಾನ್ಯತೆ' ಪಡೆದ ಭಾರತದ ಮೊದಲ ವಿಮಾನ ನಿಲ್ದಾಣ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿದೆ

**ಇದೀಗ ಸುದ್ದಿಯಲ್ಲಿದೆ:**

- **ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಮಂಡಳಿ (ACI)** ನೀಡುವ ಪ್ರತಿಷ್ಠಿತ **'ಪ್ರವೇಶಸಾಧ್ಯತೆ ವರ್ಧನೆ ಮಾನ್ಯತೆ' (AEA)** ಕಾರ್ಯಕ್ರಮದ ಅಡಿಯಲ್ಲಿ, ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು **'ಹಂತ- 3' ರ** ಮಾನ್ಯತೆಯನ್ನು ಪಡೆದುಕೊಂಡಿದೆ. ಈ ಮೂಲಕ, **ಈ ಸಾಧನೆಗೈದ ಭಾರತದ ಮೊಟ್ಟಮೊದಲ ವಿಮಾನ ನಿಲ್ದಾಣ** ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ.

## ಮೀನುಗಾರರ ಸಂಕಷ್ಟ ಪರಿಹಾರ ನಿಧಿ

**ಇದೀಗ ಸುದ್ದಿಯಲ್ಲಿದೆ:**

- ರಾಜ್ಯದ ಮೀನುಗಾರಿಕೆ ವಲಯವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. 'ಮೀನುಗಾರರ ಸಂಕಷ್ಟ ಪರಿಹಾರ ನಿಧಿ'ಯ ಅಡಿಯಲ್ಲಿ ನೀಡಲಾಗುವ ಪರಿಹಾರ ಮೊತ್ತವನ್ನು **₹6 ಲಕ್ಷದಿಂದ ₹10 ಲಕ್ಷಕ್ಕೆ** ಹೆಚ್ಚಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.
- 2024-25 ನೇ ಸಾಲಿನಲ್ಲಿ **9.63 ಲಕ್ಷ ಟನ್** ಮೀನು ಉತ್ಪಾದನೆ ಮಾಡುವ ಮೂಲಕ, ಒಟ್ಟು ಮೀನು ಉತ್ಪಾದನೆಯಲ್ಲಿ ಕರ್ನಾಟಕವು ರಾಷ್ಟ್ರಮಟ್ಟದಲ್ಲಿ **ಮೂರನೇ ಸ್ಥಾನವನ್ನು** ಕಾಯ್ದುಕೊಂಡಿದೆ.

**ಮೀನುಗಾರರ ಸಂಕಷ್ಟ ಪರಿಹಾರ ನಿಧಿಯ ಬಗ್ಗೆ:**

- ಉದ್ದೇಶ:- ಮೀನುಗಾರಿಕೆಯಲ್ಲಿ ತೊಡಗಿರುವಾಗ ಸಮುದ್ರದಲ್ಲಿ ಅಥವಾ ಭೂಮಿಯ ಮೇಲೆ ಸಂಭವಿಸುವ **ಅಪಘಾತಗಳು, ನೈಸರ್ಗಿಕ ವಿಪತ್ತುಗಳು ಅಥವಾ ಅಕಾಲಿಕ ಮರಣದಿಂದಾಗಿ** ಸಂಕಷ್ಟಕ್ಕೆ ಸಿಲುಕುವ **ಮೀನುಗಾರರಿಗೆ ಮತ್ತು ಅವರ ಕುಟುಂಬಗಳಿಗೆ** ತಕ್ಷಣದ ಆರ್ಥಿಕ ಪರಿಹಾರ ಹಾಗೂ ಬೆಂಬಲವನ್ನು ಒದಗಿಸುವುದು ಇದರ ಮೂಲ ಉದ್ದೇಶವಾಗಿದೆ.
- ನಿರ್ವಹಣಾ ಪ್ರಾಧಿಕಾರ: ಈ ನಿಧಿಯ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ **'ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ'**ಯು ನಿರ್ವಹಿಸುತ್ತದೆ.
- ಪರಿಹಾರದ ಮೊತ್ತ: ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳಿದಾಗ ಕಣ್ಮರೆಯಾದ ಅಥವಾ ಮೃತಪಟ್ಟ ಮೀನುಗಾರರ ಕುಟುಂಬಕ್ಕೆ ನೀಡಲಾಗುತ್ತಿದ್ದ ಪರಿಹಾರ ಧನವನ್ನು ರಾಜ್ಯ ಸರ್ಕಾರವು ಇತ್ತೀಚೆಗೆ **₹6 ಲಕ್ಷದಿಂದ ₹10 ಲಕ್ಷಕ್ಕೆ** ಏರಿಸಿದೆ.

- **Eligibility:** The applicant must be a registered fisherman/fisherwoman with the department and meet specific criteria depending on the nature of the claim (e.g., loss of life, damage to vessel/gear).

## Two menhirs believed to be from late megalithic period found



**News -**

- In recent archaeological explorations conducted by the Adima Kala Trust (R.) of Udupi in Kundapur region, **two menhirs were found at Hilkod situated on the Neralekatte-Ajri Road and at Mavinakere in Kenchanur village in Udupi district.**
- The two menhirs, also called **nilskals or free standing stones**, were from the **late megalithic period.**
  - The nilskal of Mavinakere is about 112 cm in height and is slightly leaning towards the north-west direction.
  - The Hilkod nilskal is about 135 cm in height..

## Karnataka Rights of Persons with Disabilities bill 2025.

**News -**

**Karnataka moves to expand disability rights with new quota**

- The State government has released a draft of the Karnataka Rights of Persons with Disabilities in Employment and Education Bill, 2025, **proposing 5% reservation for persons with disabilities in all private establishments with 20 or more employees.**

- **ಅರ್ಹತೆ:-** ಪರಿಹಾರವನ್ನು ಕೋರುವ ಅರ್ಜಿದಾರರು **ಇಲಾಖೆಯಲ್ಲಿ ನೋಂದಾಯಿತ ಮೀನುಗಾರರಾಗಿರಬೇಕು.** ಅಲ್ಲದೆ, ಪರಿಹಾರದ ನಷ್ಟದ ಸ್ವರೂಪಕ್ಕೆ (ಉದಾಹರಣೆಗೆ: ಜೀವಹಾನಿ, ದೋಣಿ ಅಥವಾ ಮೀನುಗಾರಿಕೆ ಉಪಕರಣಗಳಿಗೆ ಹಾನಿ) ಅನುಗುಣವಾಗಿ ನಿಗದಿಪಡಿಸಲಾದ ನಿರ್ದಿಷ್ಟ ಮಾನದಂಡಗಳನ್ನು ಪೂರೈಸಿರಬೇಕು.

## ಉಡುಪಿ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಮೆನ್ಹಿರ್‌ಗಳ ಪತ್ತೆ



**ಇದೀಗ ಸುದ್ದಿಯಲ್ಲಿದೆ:**

- ಉಡುಪಿಯ **ಆದಿಮ ಕಲಾ ಟ್ರಸ್ಟ್** (ರಿ.) ಕುಂದಾಪುರ ಪ್ರದೇಶದಲ್ಲಿ ಇತ್ತೀಚೆಗೆ ಕೈಗೊಂಡ **ಪುರಾತತ್ವ ಅನ್ವೇಷಣೆಗಳಲ್ಲಿ** ಎರಡು ಮೆನ್ಹಿರ್‌ಗಳನ್ನು ಪತ್ತೆಹಚ್ಚಲಾಗಿದೆ.
- ಸ್ಥಳೀಯವಾಗಿ **'ನಿಲ್ಸಕಲ್ಲು '** ಅಥವಾ **'ಸ್ವತಂತ್ರವಾಗಿ ನಿಂತಿರುವ ಕಲ್ಲುಗಳು'** ಎಂದು ಕರೆಯಲ್ಪಡುವ ಈ ರಚನೆಗಳು, **ಬೃಹತ್ ಶಿಲಾಯುಗದ** ಅವಧಿಗೆ ಸೇರಿವೆ ಎಂದು ತಜ್ಞರು ಗುರುತಿಸಿದ್ದಾರೆ.

**ಪತ್ತೆಯಾದ ಸ್ಥಳಗಳು ಮತ್ತು ಅಳತೆಗಳು:**

ಈ ಎರಡು ಮೆನ್ಹಿರ್‌ಗಳು ಪ್ರತ್ಯೇಕ ಗ್ರಾಮಗಳಲ್ಲಿ ಪತ್ತೆಯಾಗಿದ್ದು, ವಿಶಿಷ್ಟ ಆಯಾಮಗಳನ್ನು ಹೊಂದಿವೆ:

1. **ಹಿಲ್ಕೋಡ್ ಮೆನ್ಹಿರ್:** ನೇರಳಕಟ್ಟೆ-ಅಜ್ರಿ ರಸ್ತೆಯಲ್ಲಿರುವ ಹಿಲ್ಕೋಡ್‌ನಲ್ಲಿ ಒಂದು ಮೆನ್ಹಿರ್ ಪತ್ತೆಯಾಗಿದೆ. ಈ ನಿರ್ದಿಷ್ಟ 'ನಿಲ್ಸ್ ಕಲ್' ಸುಮಾರು **135 ಸೆಂ.ಮೀ** ಎತ್ತರವಿದೆ.
2. **ಮಾವಿನಕೆರೆ ಮೆನ್ಹಿರ್:** ಎರಡನೇ ಮೆನ್ಹಿರ್ ಕೆಂಚನೂರು ಗ್ರಾಮದ ಮಾವಿನಕೆರೆಯಲ್ಲಿ ಪತ್ತೆಯಾಗಿದೆ. ಇದು ಸುಮಾರು **112 ಸೆಂ.ಮೀ** ಎತ್ತರವಿದ್ದು , ವಾಯುವ್ಯ ದಿಕ್ಕಿಗೆ ಸ್ವಲ್ಪ ವಾಲಿದಂತೆ ಕಂಡುಬರುತ್ತದೆ.

**“ನಿಲ್ಸಕಲ್ಲು” ಎಂದರೇನು?**

- **ಭೂಮಿಯ ಮೇಲೆ ಲಂಭವಾಗಿ, ಸ್ವಲ್ಪ ವಾಲಿದಂತೆ ನಿಂತು ಬೃಹತ್ ಶಿಲಾಯುಗದ ಸಮಾಧಿಯ ಮೇಲೆ ಅಥವಾ ಸಮಾಧಿ ಸಮೀಪದಲ್ಲಿ ಮೃತರ ಸ್ಮರಣಾರ್ಥವಾಗಿ ನಿಲ್ಲಿಸಲಾದ ಒರಟಾದ ಬೃಹತ್ ಶಿಲೆಗಳನ್ನು ನಿಲ್ಸಕಲ್ಲು, ನಿಂತಿಕಲ್ಲು, ಗರ್ಭಿಣಿಕಲ್ಲು, ಆನೆಕಲ್ಲು, ರಕ್ಕಸಕಲ್ಲು ಹೆಸರುಗಳಿಂದ ಕರೆಯಲಾಗುತ್ತದೆ.** ದಕ್ಷಿಣ ಭಾರತದೆಲ್ಲೆಡೆ ಇಂತಹ ಕಲ್ಲುಗಳು ಕಂಡುಬರುತ್ತವೆ.

## ಕರ್ನಾಟಕ ವಿಕಲಚೇತನರ ಹಕ್ಕುಗಳ ಮಸೂದೆ, 2025

**ಇದೀಗ ಸುದ್ದಿಯಲ್ಲಿದೆ:**

- ಹೊಸ ಕರ್ನಾಟಕ ವಿಕಲಚೇತನರ ಹಕ್ಕುಗಳ ಮಸೂದೆ, 2025 ರ ಮೂಲಕ ವಿಕಲಚೇತನರ ಹಕ್ಕುಗಳನ್ನು ವಿಸ್ತರಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ.

**ಮಸೂದೆಯ ಪ್ರಮುಖಾಂಶಗಳು:**

- **ಉದ್ಯೋಗ ಮೀಸಲಾತಿ: 20 ಅಥವಾ ಅದಕ್ಕಿಂತ ಹೆಚ್ಚು** ಉದ್ಯೋಗಿಗಳನ್ನು ಹೊಂದಿರುವ ರಾಜ್ಯದ ಎಲ್ಲಾ **ಖಾಸಗಿ** ಸಂಸ್ಥೆಗಳಲ್ಲಿ ವಿಕಲಚೇತನರಿಗೆ **ಶೇ. 5 ರಷ್ಟು** ಮೀಸಲಾತಿಯನ್ನು ಕಲ್ಪಿಸುವ 'ಉದ್ಯೋಗ ಮತ್ತು ಶಿಕ್ಷಣದಲ್ಲಿ ಕರ್ನಾಟಕ ವಿಕಲಚೇತನರ ಹಕ್ಕುಗಳ ಮಸೂದೆ, 2025' ರ ಕರಡನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದೆ.

INSTAKAS

- The **draft also mandates that educational institutions earmark 10% of seats in every course for students with disabilities, one of the** overhaul **most expansive attempts** to inclusion in employment and in higher education.
- The draft sets out a phased introduction of the **5% job quota across the private sector.**
- Companies must distribute these posts across disability categories based on a formula prescribed by the proposed State regulatory authority, file annual compliance reports, and can carry forward unfilled posts for up to three recruitment cycles.
- **Exemptions will be granted** only when essential job functions cannot be performed even with reasonable accommodation.
- **For education**, the Bill makes 10% reservation course-specific, not institution-level, preventing colleges from averaging seats across programmes.

- **ಶೈಕ್ಷಣಿಕ ಮೀಸಲಾತಿ:** ಶಿಕ್ಷಣ ಸಂಸ್ಥೆಗಳು ಪ್ರತಿ ಕೋರ್ಸ್‌ನಲ್ಲಿ **ಶೇ. 10 ರಷ್ಟು** ಆಸನಗಳನ್ನು ವಿಕಲಚೇತನ ವಿದ್ಯಾರ್ಥಿಗಳಿಗೆ ಕಾಯ್ದಿರಿಸುವುದನ್ನು ಈ ಕರಡು ಮಸೂದೆ ಕಡ್ಡಾಯಗೊಳಿಸಿದೆ. ಉದ್ಯೋಗ ಮತ್ತು ಉನ್ನತ ಶಿಕ್ಷಣದಲ್ಲಿ ಒಳಗೊಳ್ಳುವಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ.

**ಅನುಷ್ಠಾನದ ವಿವರಗಳು**

1. **ಹಂತ-ಹಂತವಾಗಿ ಜಾರಿ:** ಕರಡು ಮಸೂದೆಯು **ಖಾಸಗಿ ವಲಯದಲ್ಲಿ ಶೇ. 5 ರಷ್ಟು ಉದ್ಯೋಗ** ಮೀಸಲಾತಿಯನ್ನು ಹಂತಹಂತವಾಗಿ ಜಾರಿಗೆ ತರಲು ನಿರ್ಧರಿಸಿದೆ.
2. **ನಿಯಂತ್ರಣ ಮತ್ತು ವರದಿ:** ಪ್ರಸ್ತಾಪಿತ ರಾಜ್ಯ ನಿಯಂತ್ರಕ ಪ್ರಾಧಿಕಾರವು ಸೂಚಿಸುವ ಮಾನದಂಡಗಳ ಆಧಾರದ ಮೇಲೆ ಕಂಪನಿಗಳು ಈ ಹುದ್ದೆಗಳನ್ನು ಹಂಚಿಕೆ ಮಾಡಬೇಕು. ಸಂಸ್ಥೆಗಳು **ವಾರ್ಷಿಕ ಅನುಸರಣಾ ವರದಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ.** ಭರ್ತಿಯಾಗದ ಹುದ್ದೆಗಳನ್ನು ಮುಂದಿನ ಮೂರು ನೇಮಕಾತಿಗಳವರೆಗೆ ಮುಂದುವರೆಸಲು ಅವಕಾಶವಿದೆ.
3. **ವಿನಾಯಿತಿಗಳು :** ಸಮಂಜಸವಾದ ಸೌಕರ್ಯಗಳನ್ನು ಒದಗಿಸಿದಾಗಲೂ, ಅತ್ಯಗತ್ಯ ಉದ್ಯೋಗ ಕಾರ್ಯಗಳನ್ನು ನಿರ್ವಹಿಸಲು ಅಸಾಧ್ಯವಾದ ಸಂದರ್ಭಗಳಲ್ಲಿ ಮಾತ್ರ ವಿನಾಯಿತಿಗಳನ್ನು ನೀಡಲಾಗುತ್ತದೆ.
4. **ಶಿಕ್ಷಣದಲ್ಲಿ ನಿರ್ದಿಷ್ಟತೆ:** ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಮಸೂದೆಯು **ಶೇ. 10 ರಷ್ಟು** ಮೀಸಲಾತಿಯನ್ನು 'ಸಂಸ್ಥೆಯ ಮಟ್ಟದಲ್ಲಿ' ಅನ್ವಯಿಸದೆ, **'ಕೋರ್ಸ್-ನಿರ್ದಿಷ್ಟವಾಗಿ'** ಜಾರಿಗೊಳಿಸಲು ಸೂಚಿಸಿದೆ. ಕಾಲೇಜುಗಳು ವಿವಿಧ ವಿಭಾಗಗಳ ಸೀಟುಗಳನ್ನು ಸರಾಸರಿ ಮಾಡಿ ಮೀಸಲಾತಿ ಪ್ರಮಾಣವನ್ನು ತಗ್ಗಿಸುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ.

## Megalithic excavations in Chamarajanagar district reveal rare burial practices, rock art

- Recent excavations at Doddalathur in Chamarajanagar district have revealed new **insights into early megalithic burial culture and traditions in southern Karnataka, including unusual layouts and rare engravings on boulders.**
- Doddalathur, located in Hanur taluk and five kilometres southwest of Kowdalli, is **one of the few surviving megalithic landscapes in the region where a large number of burials remain intact.**
- **the excavation – found 13 burials**, comprising stone **circles and cairn circles,** constructed with natural boulders of varying diameters.

## ಚಾಮರಾಜನಗರದಲ್ಲಿ ಬೃಹತ್ ಶಿಲಾಯುಗದ ಉತ್ಖನನ: ಅಪರೂಪದ ಶವಸಂಸ್ಕಾರ ಪದ್ಧತಿ ಮತ್ತು ಶಿಲಾ ಕಲೆ ಪತ್ತೆ

**ಇದೀಗ ಸುದ್ದಿಯಲ್ಲಿದೆ:**

- ಚಾಮರಾಜನಗರ ಜಿಲ್ಲೆಯ ದೊಡ್ಡಾಲತ್ತೂರಿನಲ್ಲಿ ನಡೆದ ಇತ್ತೀಚಿನ ಉತ್ಖನನಗಳು, ದಕ್ಷಿಣ ಕರ್ನಾಟಕದ ಆರಂಭಿಕ ಬೃಹತ್ ಶಿಲಾಯುಗದ **ಶವಸಂಸ್ಕಾರ ಪದ್ಧತಿ** ಮತ್ತು ಸಂಪ್ರದಾಯಗಳ ಮೇಲೆ ಹೊಸ ಬೆಳಕು ಚೆಲ್ಲಿವೆ.
- ಇಲ್ಲಿ ಕಂಡುಬಂದಿರುವ ಅಸಾಮಾನ್ಯ ವಿನ್ಯಾಸಗಳು ಮತ್ತು ಬಂಡೆಗಳ ಮೇಲಿನ **ಅಪರೂಪದ ಕೆತ್ತನೆಗಳು** ಐತಿಹಾಸಿಕವಾಗಿ ಮಹತ್ವದ್ದಾಗಿವೆ.

**ಸ್ಥಳ ಮತ್ತು ಹಿನ್ನೆಲೆ:**

- ಹನೂರು ತಾಲೂಕಿನ ಕೌದಳ್ಳಿಯ ನೈಋತ್ಯಕ್ಕೆ 5 ಕಿ.ಮೀ ದೂರದಲ್ಲಿರುವ **ದೊಡ್ಡಾಲತ್ತೂರು,** ಈ ಪ್ರದೇಶದಲ್ಲಿ ಸುಸ್ಥಿತಿಯಲ್ಲಿರುವ ಕೆಲವೇ ಕೆಲವು ಬೃಹತ್ ಶಿಲಾಯುಗದ ತಾಣಗಳಲ್ಲಿ ಒಂದಾಗಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯ ಸಮಾಧಿಗಳು ಕಂಡು ಬರುತ್ತವೆ.

**ಉತ್ಖನನದ ಪ್ರಮುಖಾಂಶಗಳು**

- ಸಮಾಧಿಗಳ ವಿಧಗಳು:- ಉತ್ಖನನದಲ್ಲಿ ಒಟ್ಟು **13 ಸಮಾಧಿಗಳನ್ನು** ಪತ್ತೆಹಚ್ಚಲಾಗಿದೆ. ಇವು ವಿವಿಧ ವ್ಯಾಸದ ನೈಸರ್ಗಿಕ ಬಂಡೆಗಳಿಂದ ನಿರ್ಮಿಸಲಾದ **'ಶಿಲಾವೃತ್ತಗಳು'** ಮತ್ತು **'ಶಿಲೆಗಳ ರಾಶಿಯ ವೃತ್ತಗಳನ್ನು'** ಒಳಗೊಂಡಿವೆ.

- ❖ Four **contained cists, or stone-slab chambers**, while the **rest were urn burials.**
- "In the megalithic burials, the usual burial repertoire includes pottery known as **black-and-red ware, black ware and red ware, and iron objects.** "These were also found in some of the burials that were excavated at Doddalathur,
- in addition to **skeletal and animal remains and a few beads have also been found**
- The most interesting discovery, according to researchers, is that of an **iron object, which is circular in shape with two loops on either sides and resembles an iron shield.**
  - ❖ This was found in **association with iron weapons like axe, arrow, and a two-pronged sword while the same burial has human figures engraved on the boulders. Underlining its importance,**
  - ❖ this is significant because rock art is rare in this part of Karnataka.

- **Charcoal samples from both urn and cist contexts were dated through AMS Carbon-14 analysis, placing the burials between the 6th century BCE and the 4th century CE,** a timeframe consistent with **megalithic occupation** phases elsewhere in peninsular India

## Saalumarada Thimmakka



- ○ ಇವುಗಳಲ್ಲಿ ನಾಲ್ಕು **'ಕಲ್ಮನೆ ಸಮಾಧಿಗಳು'** ಆಗಿದ್ದರೆ, ಉಳಿದವು **'ಬರಣಿ ಸಮಾಧಿಗಳು'** ಆಗಿವೆ.
- ಪತ್ತೆಯಾದ ಅವಶೇಷಗಳು:- ಬೃಹತ್ ಶಿಲಾಯುಗಕ್ಕೆ ವಿಶಿಷ್ಟವಾದ **ಕಪ್ಪು ಮತ್ತು ಕೆಂಪು ಮಡಕೆಗಳು , ಕಪ್ಪು ಮಡಕೆಗಳು, ಕೆಂಪು ಮಡಕೆಗಳು ಹಾಗೂ ಕಬ್ಬಿಣದ ವಸ್ತುಗಳು** ಇಲ್ಲಿ ದೊರೆತಿವೆ. ಜೊತೆಗೆ **ಅಸ್ಥಿಪಂಜರ ಮತ್ತು ಪ್ರಾಣಿಗಳ ಅವಶೇಷಗಳು ಹಾಗೂ ಕೆಲವು ಮಣಿಗಳು** ಕೂಡ ಲಭ್ಯವಾಗಿವೆ.
- ವಿಶೇಷ ಆವಿಷ್ಕಾರ: ಸಂಶೋಧಕರ ಪ್ರಕಾರ, ಇಲ್ಲಿ ಪತ್ತೆಯಾದ ಅತ್ಯಂತ ಕುತೂಹಲಕಾರಿ ವಸ್ತುವೆಂದರೆ **ಕಬ್ಬಿಣದ ವಸ್ತು.** ಇದು **ವೃತ್ತಾಕಾರದಲ್ಲಿದ್ದು, ಎರಡೂ ಬದಿಗಳಲ್ಲಿ ಎರಡು ಕುಣಿಕೆಗಳನ್ನು ಹೊಂದಿದೆ** ಮತ್ತು ಇದು **ಕಬ್ಬಿಣದ ಗುರಾಣಿಯನ್ನು** ಹೋಲುತ್ತದೆ.
  - ❑ ಈ ಸಮಾಧಿಯಲ್ಲಿ **ಕೊಡಲಿ, ಬಾಣ ಮತ್ತು ಎರಡು ಬಾಯಿಯ ಕತ್ತಿಯಂತಹ** ಕಬ್ಬಿಣದ ಆಯುಧಗಳು ಪತ್ತೆಯಾಗಿವೆ. ಇದೇ **ಸಮಾಧಿಯ ಬಂಡೆಗಳ ಮೇಲೆ ಮಾನವ ಆಕೃತಿಗಳನ್ನು ಕೆತ್ತಲಾಗಿದೆ.**
  - ❑ ಕರ್ನಾಟಕದ ಈ ಭಾಗದಲ್ಲಿ ಶಿಲಾ ಕಲೆ ಅಪರೂಪವಾಗಿರುವುದರಿಂದ ಈ ಆವಿಷ್ಕಾರವು ಐತಿಹಾಸಿಕವಾಗಿ ಮಹತ್ವದ್ದಾಗಿದೆ.
- **ಕಾಲನಿರ್ಣಯ:-** ಬರಣಿ ಮತ್ತು ಕಲ್ಮನೆ ಸಮಾಧಿಗಳಿಂದ ಸಂಗ್ರಹಿಸಲಾದ ಇದ್ದಿಲಿನ ಮಾದರಿಗಳನ್ನು **'AMS ಕಾರ್ಬನ್-14 ವಿಶ್ಲೇಷಣೆ'ಗೆ** ಒಳಪಡಿಸಲಾಗಿದೆ. ಇದರನ್ವಯ, ಈ ಸಮಾಧಿಗಳು **ಕ್ರಿ.ಪೂ. 6 ನೇ ಶತಮಾನದಿಂದ ಕ್ರಿ.ಶ. 4 ನೇ ಶತಮಾನದ** ಕಾಲಘಟ್ಟಕ್ಕೆ ಸೇರಿವೆ ಎಂದು ನಿರ್ಧರಿಸಲಾಗಿದೆ. ಇದು ಪರ್ಯಾಯ ದ್ವೀಪ ಭಾರತದ ಇತರೆಡೆಗಳಲ್ಲಿ ಕಂಡುಬರುವ **ಬೃಹತ್ ಶಿಲಾಯುಗದ ವಾಸಸ್ಥಾನದ** ಹಂತಗಳೊಂದಿಗೆ ಹೊಂದಿಕೆಯಾಗುತ್ತದೆ.

## ಸಾಲುಮರದ ತಿಮ್ಮಕ್ಕ



**Why in news**

- **Padma Shri awardee and environmental icon Saalumarada Thimmakka, renowned for planting 385 banyan trees, passed away at the age of 114 in Bengaluru.**

**Biographical Details**

- **Full Name:** Saalumarada Thimmakka (born as Thimmakka).
- **Titles:** She is widely known as **"Vriksha Mathe"** (Mother of Trees) and **"Saalumarada Thimmakka"**
- **Birthplace:** She was born in **Gubbi Taluk**, **Tumakuru District**, Karnataka.
- **Environmental work:** Her environmental work is centered around **Hulikal Village**, Magadi Taluk, **Ramanagara District**.
- **Spouse:** She was married to **Bikkala Chikkayya**, who was her partner in planting trees until his death in 1991.
- **Lifespan:** She passed away on **November 14, 2025**, at the approximate age of **114 years**.

**The Environmental Achievements**

- **Tree Species:** She primarily planted **Banyan trees** (Scientific Name: *Ficus benghalensis*).
- **Location:** The trees were planted along a 4 to 4.5 km kilometer stretch of State Highway 94 (**SH-94**) between Hulikal and Kudur
- **Number of Trees:** She planted **385 banyan trees** in this specific row.
- **Total Contribution:** It is estimated she planted over **8,000 trees** in total during her lifetime.
- **Methodology:** She used **thorny shrubs** to fence the saplings and carried water pots for **4 kilometers** daily.

**ಇದೀಗ ಸುದ್ದಿಯಲ್ಲಿ:**

- **ಪದ್ಮಶ್ರೀ ಪುರಸ್ಕೃತೆ ಹಾಗೂ ಪರಿಸರ ಸಂರಕ್ಷಣೆಯ ಸಾಕಾರಮೂರ್ತಿ, ಸುಮಾರು 385 ಆಲದ ಮರಗಳನ್ನು ನೆಟ್ಟು ಪೋಷಿಸಿದ ಕೀರ್ತಿಗೆ ಭಾಜನರಾಗಿದ್ದ ಸಾಲುಮರದ ತಿಮ್ಮಕ್ಕ ಅವರು ಬೆಂಗಳೂರಿನಲ್ಲಿ ತಮ್ಮ 114 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.**

**ವೈಯಕ್ತಿಕ ಪರಿಚಯ:**

- **ಪೂರ್ಣ ಹೆಸರು:** ಸಾಲುಮರದ ತಿಮ್ಮಕ್ಕ (ಮೂಲ ನಾಮ: ತಿಮ್ಮಕ್ಕ).
- **ಬಿರುದುಗಳು:** ಇವರು **"ವೃಕ್ಷ ಮಾತೆ"** ಮತ್ತು **"ಸಾಲುಮರದ ತಿಮ್ಮಕ್ಕ"** ಎಂದೇ ಜಗದ್ವಿಖ್ಯಾತರಾಗಿದ್ದಾರೆ.
- **ಜನ್ಮಸ್ಥಳ:** ಇವರು ಕರ್ನಾಟಕದ **ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ** ಜನಿಸಿದರು.
- **ಕಾರ್ಯಕ್ಷೇತ್ರ:** ಇವರ ಪರಿಸರ ಕಾಳಜಿಯ ಕಾರ್ಯಗಳು **ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಹುಲಿಕಲ್ ಗ್ರಾಮದ** ಸುತ್ತಮುತ್ತ ಕೇಂದ್ರೀಕೃತವಾಗಿದ್ದವು.
- **ಪತಿ:** ಇವರು **ಬಿಕ್ಕಲ ಚಿಕ್ಕಯ್ಯ** ಅವರನ್ನು ವಿವಾಹವಾಗಿದ್ದರು. 1991 ರಲ್ಲಿ ಚಿಕ್ಕಯ್ಯ ಅವರು ನಿಧನರಾಗುವವರೆಗೂ, ಮರಗಳನ್ನು ನೆಡುವ ಕಾಯಕದಲ್ಲಿ ತಿಮ್ಮಕ್ಕ ಅವರಿಗೆ ಜೊತೆಯಾಗಿದ್ದರು.
- **ಜೀವಿತಾವಧಿ:** ಇವರು 2025 ರ ನವೆಂಬರ್ 14 ರಂದು, ಅಂದಾಜು 114 ವರ್ಷ ವಯಸ್ಸಿನಲ್ಲಿ ನಿಧನರಾದರು.

**ಪರಿಸರ ಕ್ಷೇತ್ರದ ಸಾಧನೆ**

- ಸಸ್ಯ ಪ್ರಭೇದ: ಇವರು ಪ್ರಮುಖವಾಗಿ **ಆಲದ ಮರಗಳನ್ನು** (ವೈಜ್ಞಾನಿಕ ಹೆಸರು: ***ಫಿಕಸ್ ಬೆಂಗಾಲೆನ್ಸಿಸ್***) ನೆಟ್ಟರು.
- **ಸ್ಥಳ: ಹುಲಿಕಲ್ ಮತ್ತು ಕುಡುರು ನಡುವಿನ ರಾಜ್ಯ ಹೆದ್ದಾರಿ-94** ರ 4 ರಿಂದ 4.5 ಕಿ.ಮೀ ಉದ್ದದ ರಸ್ತೆಯ ಇಕ್ಕೆಲಗಳಲ್ಲಿ ಈ ಮರಗಳನ್ನು ನೆಟ್ಟು ಪೋಷಿಸಿದ್ದಾರೆ.
- **ಮರಗಳ ಸಂಖ್ಯೆ:** ಈ ನಿರ್ದಿಷ್ಟ ಸಾಲಿನಲ್ಲಿ ಅವರು **385 ಆಲದ ಮರಗಳನ್ನು** ನೆಟ್ಟು ಬೆಳೆಸಿದ್ದಾರೆ.
- **ಒಟ್ಟು ಕೊಡುಗೆ:** ತಮ್ಮ ಜೀವಿತಾವಧಿಯಲ್ಲಿ ಅವರು ಒಟ್ಟಾರೆಯಾಗಿ **8,000 ಕ್ಕೂ ಹೆಚ್ಚು ಮರಗಳನ್ನು** ನೆಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ.
- **ವಿಧಾನ :** ಸಸಿಗಳ ರಕ್ಷಣೆಗಾಗಿ ಮುಳ್ಳಿನ ಪೊದೆಗಳನ್ನು ಬೇಲಿಯನ್ನಾಗಿ ಬಳಸುತ್ತಿದ್ದರು ಮತ್ತು ಪ್ರತಿದಿನ 4 ಕಿಲೋಮೀಟರ್‌ಗಳಷ್ಟು ದೂರ ನಡೆದು, ಕೊಡಗಳಲ್ಲಿ ನೀರು ಹೊತ್ತು ತಂದು ಸಸಿಗಳಿಗೆ ಉಣಿಸುತ್ತಿದ್ದರು.

INSTAKAS

**Major Awards & Recognitions**

- **Cabinet Rank (2022):** The Karnataka Government appointed her as the **"Environment Ambassador"** with the status of a Cabinet Minister.
- **Padma Shri (2019):** She received India's fourth-highest civilian award from President Ram Nath Kovind.
- **BBC 100 Women (2016):** She was listed as one of the most influential and inspiring women in the world by the BBC.
- **Nadoja Award (2010):** She received this prestigious honor from **Kannada University, Hampi.**
- **National Citizen's Award (1995):** She was honored by the Government of India for her grassroots work.
- **Indira Priyadarshini Vrikshamitra Award (1997):** She received this national award specifically for contributions to afforestation.
- **International Honor:** An environmental organization in **Los Angeles, USA**, is named **"Thimmakka's Resources for Environmental Education".**

**Government Initiatives & Legacy**

- **Saalumarada Thimmakka Tree Parks:** The Karnataka State Government has established tree parks in every **Assembly Constituency** to increase green cover.
- **Tree Preservation:** In 2019, the Bagepalli-Halaguru road widening project was modified to save her heritage banyan trees.
- **Memorial Fund (2025):** Following her death, the Karnataka Government announced a **₹1 Crore Corpus Fund** to institute an annual environment award in her name.
- **114 Saplings:** To mark her age at passing, the government announced the planting of **114 saplings** at distinct locations.

**ಪ್ರಮುಖ ಪ್ರಶಸ್ತಿಗಳು ಮತ್ತು ಮನ್ನಣೆಗಳು**

- **ಸಂಪುಟ ದರ್ಜೆ ಸ್ಥಾನಮಾನ(2022):** ಕರ್ನಾಟಕ ಸರ್ಕಾರವು ಇವರಿಗೆ ಸಚಿವ ಸಂಪುಟ ದರ್ಜೆ ಸ್ಥಾನಮಾನದೊಂದಿಗೆ **"ಪರಿಸರ ರಾಯಭಾರಿ"** ಎಂಬ ಗೌರವವನ್ನು ನೀಡಿತ್ತು.
- **ಪದ್ಮಶ್ರೀ (2019):** ಅಂದಿನ **ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರಿಂದ** ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ 'ಪದ್ಮಶ್ರೀ' ಪ್ರಶಸ್ತಿಯನ್ನು ಇವರು ಸ್ವೀಕರಿಸಿದರು.
- **ಬಿಬಿಸಿ 100 ಮಹಿಳೆಯರು (2016):** ಬಿಬಿಸಿ ಸಂಸ್ಥೆಯು ಪಟ್ಟಿ ಮಾಡಿದ ವಿಶ್ವದ ಅತ್ಯಂತ ಪ್ರಭಾವಶಾಲಿ ಮತ್ತು ಸ್ಫೂರ್ತಿದಾಯಕ ಮಹಿಳೆಯರ ಪಟ್ಟಿಯಲ್ಲಿ ಇವರು ಸ್ಥಾನ ಪಡೆದಿದ್ದರು.
- **ನಾಡೋಜ ಪ್ರಶಸ್ತಿ (2010): ಹಂಪಿ ಕನ್ನಡ ವಿಶ್ವವಿದ್ಯಾಲಯವು** ಇವರಿಗೆ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ ನೀಡಿ ಗೌರವಿಸಿದೆ.
- **ರಾಷ್ಟ್ರೀಯ ನಾಗರಿಕರ ಪ್ರಶಸ್ತಿ (1995):** ತಳಮಟ್ಟದಲ್ಲಿ ಇವರು ಮಾಡಿದ ಪರಿಸರ ಸೇವೆಗಾಗಿ **ಭಾರತ ಸರ್ಕಾರವು** ಈ ಪ್ರಶಸ್ತಿ ನೀಡಿ ಗೌರವಿಸಿತು.
- **ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ (1997):** ಅರಣ್ಯೀಕರಣಕ್ಕೆ ನೀಡಿದ ಅನನ್ಯ ಕೊಡುಗೆಗಾಗಿ ಇವರು ಈ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದರು.
- **ಅಂತರರಾಷ್ಟ್ರೀಯ ಗೌರವ: ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿರುವ** ಪರಿಸರ ಸಂಸ್ಥೆಯೊಂದಕ್ಕೆ **"ತಿಮ್ಮಕ್ಕಾಸ್ ರಿಸೋರ್ಸಸ್ ಫಾರ್ ಎನ್ವಿರಾನ್ಮೆಂಟಲ್ ಎಜುಕೇಶನ್"** ಎಂದು ಹೆಸರಿಡುವ ಮೂಲಕ ಗೌರವ ಸೂಚಿಸಲಾಗಿದೆ.

**ಸರ್ಕಾರದ ಉಪಕ್ರಮಗಳು ಮತ್ತು ಪರಂಪರೆ**

- **ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನ:** ರಾಜ್ಯದಲ್ಲಿ ಹಸಿರು ಹೊದಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಕರ್ನಾಟಕ ರಾಜ್ಯ ಸರ್ಕಾರವು ಪ್ರತಿ **ವಿಧಾನಸಭಾ ಕ್ಷೇತ್ರದಲ್ಲೂ** ತಿಮ್ಮಕ್ಕನವರ ಹೆಸರಿನಲ್ಲಿ ವೃಕ್ಷ ಉದ್ಯಾನವನವನ್ನು ಸ್ಥಾಪಿಸಿದೆ.
- **ಮರಗಳ ಸಂರಕ್ಷಣೆ:** 2019 ರಲ್ಲಿ, ಬಾಗೇಪಲ್ಲಿ-ಹಲಗೂರು ರಸ್ತೆ ಅಗಲೀಕರಣ ಯೋಜನೆಯನ್ನು ಜಾರಿಗೊಳಿಸುವಾಗ, ತಿಮ್ಮಕ್ಕನವರು ನೆಟ್ಟ ಪಾರಂಪರಿಕ ಆಲದ ಮರಗಳನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಯೋಜನೆಯ ನಕ್ಷೆಯನ್ನೇ ಬದಲಾಯಿಸಲಾಯಿತು.
- **ಸ್ಮಾರಕ ನಿಧಿ (2025):** ತಿಮ್ಮಕ್ಕ ಅವರ ನಿಧನದ ನಂತರ, ಅವರ ಹೆಸರಿನಲ್ಲಿ **ವಾರ್ಷಿಕ ಪರಿಸರ ಪ್ರಶಸ್ತಿಯನ್ನು** ಸ್ಥಾಪಿಸಲು ಕರ್ನಾಟಕ ಸರ್ಕಾರವು **₹1 ಕೋಟಿಗಳ 'ಮೂಲ ನಿಧಿ'**ಯನ್ನು ಘೋಷಿಸಿದೆ.
- **114 ಸಸಿಗಳು:** ನಿಧನದ ವೇಳೆಗಿದ್ದ ಅವರ ವಯಸ್ಸಿನ ಗೌರವಾರ್ಥವಾಗಿ, ಸರ್ಕಾರವು ರಾಜ್ಯದ **ಆಯ್ದ ವಿಶಿಷ್ಟ ಸ್ಥಳಗಳಲ್ಲಿ 114 ಸಸಿಗಳನ್ನು ನೆಡುವುದಾಗಿ ಘೋಷಿಸಿದೆ.**

INSTA KAS

INSIGHTSIAS SIMPLIFYING IAS EXAM PREPARATION | INSTAKAS

# ಸಾರಥಿ

**ಕೆ ಇ ಎ ಗ್ರೂಪ್ ಸಿ & ಡಿ ಹುದ್ದೆಗಳಿಗೆ ಪರೀಕ್ಷಾ ಸರಣಿಗಳು**

## 7ನೇ ಡಿಸೆಂಬರ್ 2025 ನಿಂದ ಪ್ರಾರಂಭ

**10** ಸಾಮಾನ್ಯ ಅಧ್ಯಯನ + **10** ಸಂವಹನ = **20** ಒಟ್ಟು ಪರೀಕ್ಷೆಗಳು

ಕೆಇಎ **708** ಹುದ್ದೆಗಳು

### ವೈಶಿಷ್ಟ್ಯಗಳು

- ಉತ್ತಮ ಗುಣಮಟ್ಟದ ಪ್ರಶ್ನೆಗಳು ಮತ್ತು ಕೆಇಎ ಮಾನದಂಡದ ಪ್ರಕಾರ ವಿವರಣೆಗಳು
- ಸಾಮಾನ್ಯ ಅಧ್ಯಯನ ಮತ್ತು ಸಂವಹನ ಪತ್ರಿಕೆ ಎರಡನ್ನೂ ಪರೀಕ್ಷೆಗಳು ಒಳಗೊಂಡಿರುತ್ತದೆ
- ಪಠ್ಯಕ್ರಮದ ಸಮಗ್ರ ಬೋಧನೆ
- ವಿಶ್ಲೇಷಣೆಯೊಂದಿಗೆ ತ್ವರಿತ ಫಲಿತಾಂಶಗಳು
- ವೈಯಕ್ತೀಕ ಮಾರ್ಗದರ್ಶನ
- ಕೈಗೆಟುಕುವ ಮತ್ತು ಸುಲಭಸಾಧ್ಯೆ ದರಗಳು



**ಶುಲ್ಕಗಳು - ಆಫ್‌ಲೈನ್**

~~₹1500/-~~ ₹1200/-

**ಶುಲ್ಕಗಳು - ಆನ್‌ಲೈನ್**

~~₹1000/-~~ ₹800/-

ಆರಂಭಿಕ ರಿಯಾಯಿತಿ ಕೊಡುಗೆ

**20%**

6 ಡಿಸೆಂಬರ್ 2025 ರವರೆಗೆ ಮಾತ್ರ

SUBSCRIBE HERE | TIME TABLE

**ಬೆಂಗಳೂರು ಕಚೇರಿ:**
INSTA KAS , 1134/1, 2 ನೇ ಮಹಡಿ, ಶರಾವತಿ ಆಸ್ಪತ್ರೆಯ ಪಕ್ಕದಲ್ಲಿ, ಸರ್ವಿಸ್ ರಸ್ತೆ, ಅತ್ತಿಗುಪ್ಪೆ ಮೆಟ್ರೋ ನಿಲ್ದಾಣದ ಎದುರು, RPC ಲೇಔಟ್, ವಿಜಯನಗರ, ಬೆಂಗಳೂರು - 560040.

**ಸಂಪರ್ಕ:** 08069405206

**ಮೇಲ್:** support@insightsias.com

www.insightsonindia.com
instacourses.insightsonindia.com

ಶಾಖೆಗಳು: ಬೆಂಗಳೂರು | ದೆಹಲಿ | ಹೈದರಾಬಾದ್ | ಶ್ರೀನಗರ | ಧಾರವಾಡ